16 ಆಗಸ್ಟ್ 2025 ಶನಿವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 158 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

ಜನಮನದ ದನಿ

# ಪ್ರಜೋದಯ

ದಿನಪತ್ರಿಕೆ

ಸಂಪಾದಕ : ಜೆ.ಆರ್. ಕೆಂಚೇಗೌಡ



ಬ್ರಿಸ್ಬೇನ್‌ನಲ್ಲಿ ಆಸ್ಟ್ರೇಲಿಯಾ ಎ ತಂಡದ ವಿರುದ್ಧ ನಡೆದ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಭಾರತ ಎ ತಂಡದ ಯಷ್ಟಿಕಾ ಭಾಟಿಯಾ ಅಮೋಘ ಅರ್ಧ ಶತಕ ದಾಖಲಿಸಿದರು. ಭಾರತ ಸರಣಿಯನ್ನು 2-0ಯಿಂದ ಕೈವಶ ಮಾಡಿಕೊಂಡಿತು.




ಕಡತ ತೀರಕ್ಕೆ ಹೊರಟಿತು ಒಂದು ಶ್ವೇತ ನದಿ ! » 2



ಬಲಾಢ್ಯ ಆರ್ಥಿಕ ಶಕ್ತಿಯಾಗಿ ಹೊರ ಹೊಮ್ಮುತ್ತಿದೆ ಭಾರತ » 3



ಸ್ವಾತಂತ್ರ್ಯೋತ್ಸವ : ಆಕರ್ಷಕ ಪಥ ಸಂಚಲನ, ಸಾಂಸ್ಕೃತಿಕ ಕಾರ್ಯಕ್ರಮ » 4


# ನಿಷ್ಪಕ್ಷಪಾತ ಚುನಾವಣೆಯಿಂದ ಪ್ರಜಾಪ್ರಭುತ್ವ ಉಳಿವು

## ಸ್ವಾತಂತ್ರ್ಯೋತ್ಸವ ಸಂದೇಶದಲ್ಲಿ ಕೃಷ್ಣಬೈರೇಗೌಡ ಪ್ರತಿಪಾದನೆ

• ಪ್ರಜೋದಯ ವರದಿ



**ಹಾಸನ:** ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಗಳು ಪಾರದರ್ಶಕವಾಗಿ, ನ್ಯಾಯ ಸಮ್ಮತವಾಗಿ ನಡೆದಲ್ಲಿ ಮಾತ್ರ ನಾವು ಕಷ್ಟಪಟ್ಟು ಗಳಿಸಿಕೊಂಡಿರುವ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಸಾಧ್ಯವೆಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಹೇಳಿದರು.

ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ 79ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಧ್ವಜಾರೋಹಣ ನೆರವೇರಿಸಿ ಸ್ವಾತಂತ್ರ್ಯೋತ್ಸವ ಸಂದೇಶ ನೀಡುವ ವೇಳೆ ಮತ ಕಳ್ಳತನ ಉಲ್ಲೇಖಿಸಿ ಮಾತನಾಡಿದ ಅವರು, ಚುನಾವಣೆ ಮುಕ್ತವಾಗಿ, ನಿಷ್ಪಕ್ಷಪಾತವಾಗಿ ನಡೆದಾಗ ಸ್ವಾತಂತ್ರ್ಯ ಗಳಿಸಿಕೊಂಡದ್ದಕ್ಕೆ ಸಾರ್ಥಕತೆ ಸಿಗಲಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಗಳು ಆಧಾರ ಸ್ತಂಭ. ಮತದಾನ ಪಾರದಾರ್ಶಕವಾಗಿ ನಡೆದಾಗ ಮಾತ್ರ ಪ್ರಜಾಪ್ರಭುತ್ವ ವ್ಯವಸ್ಥೆ ನಂಬಿಕೆಯಿಂದ ಸದೃಢವಾಗಿ ಕೆಲಸ ಮಾಡುತ್ತದೆ. ಚುನಾವಣಾ ಆಯೋಗ ನಿಷ್ಪಕ್ಷ ಪಾತವಾಗಿ ಕೆಲಸ ಮಾಡಬೇಕೆನ್ನುವುದು ಪ್ರತಿಯೊಬ್ಬ ಭಾರತೀಯನ ಆಶಯ ಎಂದು ತಿಳಿಸಿದರು.

ಈ ಸ್ವಾತಂತ್ರ್ಯ ಜ್ವಲಂತವಾಗಿರಬೇಕು, ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸ್ವಾತಂತ್ರ್ಯ ಸಿಗಬೇಕಾದರೆ ಚುನಾವಣಾ ಆಯೋಗ ನಿಷ್ಪಕ್ಷಪಾತವಾಗಿ ಕೆಲಸ ಮಾಡಬೇಕು. ಇಲ್ಲದಿದ್ದರೆ ಬ್ರಿಟಿಷರನ್ನು ಹೊರ ಹಾಕಿ ನಮ್ಮ ಕೈ

» ನಾಲ್ಕನೇ ಪುಟದಲ್ಲಿ

### ದೇಶಕ್ಕೆ ಆರ್ಥಿಕ ಸ್ವಾತಂತ್ರ್ಯ ಬರಬೇಕು

ದೇಶದಲ್ಲಿ ಬಡವರು ಶ್ರೀಮಂತರ ನಡುವಿನ ಅಂತರ ದಿನೇ ದಿನೇ ಹೆಚ್ಚುತ್ತಿದೆ. ದುಡಿಮೆಯ ಪ್ರತಿಫಲ ಉಳ್ಳವರ ಕೈ ಸೇರುತ್ತಿರುವುದು ಒಳ್ಳೆಯದಲ್ಲ. ದೇಶದ ಒಳಿತಿಗಾಗಿ ಅಂತರ ಕಡಿಮೆಯಾಗಬೇಕು, ದೇಶಕ್ಕೆ ಆರ್ಥಿಕ ಸ್ವಾತಂತ್ರ್ಯ ಬರಬೇಕು, ಗೌರವದ ಪಾಲು ಎಲ್ಲರಿಗೂ ಸಿಗಬೇಕು. ಅದಕ್ಕಾಗಿ ನಮ್ಮ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನ ಮಾಡಿ, ಪ್ರತಿ ಭಾರತೀಯ ದೇಶದ ಆದಾಯದಲ್ಲಿ ಒಂದು ಪಾಲು ಕೊಡುವ ಕೆಲಸವನ್ನು ನಮ್ಮ ಸರ್ಕಾರ ಮಾಡುತ್ತಿದೆ ಎಂದು ಕೃಷ್ಣಬೈರೇಗೌಡ ಹೇಳಿದರು.

### ತೆರಿಗೆ ಸಮಾನ ಪಾಲು ಸಿಗಬೇಕು

ರಾಜ್ಯದಲ್ಲಿ ನಾಲ್ಕುವರೆ ಕೋಟಿ ಕನ್ನಡಿಗರಿಗೆ 1 ಲಕ್ಷ ಕೋಟಿಯನ್ನು ನೇರವಾಗಿ ನೀಡುತ್ತಿದ್ದೇವೆ. ಕರ್ನಾಟಕದ ತಲಾ ಆದಾಯ ದೇಶದಲ್ಲೇ ಮೊದಲ ಸ್ಥಾನದಲ್ಲಿದೆ. ಅದಕ್ಕೆ ಗ್ಯಾರಂಟಿಯೂ ಒಂದು ಕಾರಣ ಇರಬಹುದು. ದೇಶದಲ್ಲೇ ಕರ್ನಾಟಕ ಅತೀ ಹೆಚ್ಚು ತೆರಿಗೆ ಪಾವತಿಸುತ್ತಿದೆ. ಹಾಗಾಗಿ ದೇಶದ ಪ್ರಗತಿಗೆ ಕನ್ನಡಿಗರ ಕೊಡುಗೆಯೇ ಇದೆ. ಆದರೆ ತೆರಿಗೆ ಬಗ್ಗೆ ಹೆಮ್ಮೆ ಇದೆ, ನಮ್ಮ ತೆರಿಗೆಯಲ್ಲಿ ನಮಗೆ ಸಮಾನ ಪಾಲು ಸಿಗಬೇಕು, ನಮ್ಮ ತೆರಿಗೆ-ನೀರು ಪಡೆಯಲು ನಮ್ಮ ಸರ್ಕಾರ ಬದ್ಧವಾಗಿ ಎಂದು ಉಸ್ತುವಾರಿ ಸಚಿವರು ಹೇಳಿದರು.

# ಹೆಚ್‌ಆರ್‌ಪಿ ಹಗರಣ ತನಿಖೆಗೆ ಪ್ರತ್ಯೇಕ ಸಮಿತಿ

## ಮುಖ್ಯಮಂತ್ರಿಯೊಂದಿಗೆ ಚರ್ಚಿಸಿ ಕ್ರಮ | ಕೃಷ್ಣಬೈರೇಗೌಡ ಭರವಸೆ

• ಪ್ರಜೋದಯ ವರದಿ



**ಹಾಸನ:** ಹಾಸನ ಎಂದರೆ ಹೆಚ್ ಆರ್‌ಪಿ ಸಮಸ್ಯೆ ಎನ್ನುವಂತಾಗಿದೆ. ಈ ಹಗರಣ ಪರಿಶೀಲನೆಗೆ ಸಮಿತಿ ರಚಿಸಿ, ಖಾಯಂ ಐಎಎಸ್ ಅಧಿಕಾರಿ ನೇಮಿಸಿ ತನಿಖೆ ನಡೆಸಲು ಮುಖ್ಯಮಂತ್ರಿಯೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದೆಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಭರವಸೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೈಜತೆ ಹೊಂದಿರುವ-ಇಲ್ಲದ ಪ್ರಕರಣ ಬೇರ್ಪಡಿಸಲು ಮತ್ತೊಂದು ಸಮಿತಿ ರಚನೆ ಮಾಡಬೇಕಿದೆ. ಅರ್ಹರಿಗೆ ನ್ಯಾಯ ಸಿಗಬೇಕು. ಆ ಬಗ್ಗೆ ಮತ್ತಷ್ಟು ಅಧ್ಯಯನ ಮಾಡಿ ಮುಂದಿನ ಕ್ರಮ ಕೈಗೊಳ್ಳುವೆ. ಜಿಲ್ಲಾಧಿಕಾರಿಯೊಂದಿಗೆ ಚರ್ಚಿಸಿ ಹಲವು ಸಲಹೆಗಳನ್ನು ನೀಡಿದ್ದೇನೆಂದು ತಿಳಿಸಿದರು.

ಈ ಹರಣ ತನಿಖೆಗೆ ಐಎಎಸ್ ಅಧಿಕಾರಿ ನೇತೃತ್ವದ ಸಮಿತಿ ತನಿಖೆ ಮಾಡಿತ್ತು. 8,600 ಕಡತಗಳ ಪೈಕಿ 1,800 ಕಡತಗಳನ್ನು ಪರಿಶೀಲನೆ ನಡೆಸಿ, 1,200 ಕಡತಗಳಲ್ಲಿ ನೈಜತೆ ಇಲ್ಲ ಎಂದು ವರದಿ ನೀಡಿದ್ದಾರೆ. ಅರ್ಹ ಸಂತ್ರಸ್ತರಿಗೆ ನ್ಯಾಯ ಒದಗಿಸಲು ಸರ್ಕಾರ ಬದ್ಧವಾಗಿದೆ. ಆದರೆ, ಅನರ್ಹರೇ ಹೆಚ್ಚಿರುವುದರಿಂದ ಸಮಸ್ಯೆ ದೊಡ್ಡದಾಗಿದೆ. 7 ಗುಂಟೆ ಜಮೀನು ಮುಳು ಗಡೆಯಾಗಿದ್ದರೆ 4 ಎಕರೆ ಪಡೆದಿದ್ದಾರೆ. ಇದು ನಿನ್ನೆ-ಮೊನ್ನೆ ಸಮಸ್ಯೆ ಅಲ್ಲ. ಪರಿಹಾರ ಮಾಡುವ ಬಗ್ಗೆ ಅವರೂ ಕೆಲ ಸಲಹೆ ಕೊಟ್ಟಿದ್ದಾರೆ. ಎಲ್ಲವನ್ನು ಸೂಕ್ಷ್ಮವಾಗಿ ಗಮನಿಸಿ ಸರಿಪಡಿಸಲಾಗುವುದು ಎಂದು ಹೇಳಿದರು.

**ಅವಕಾಶ ಸಿಕ್ಕಿರುವುದು ಸೌಭಾಗ್ಯ**

ಬೆಂಗಳೂರು ಶಾಸಕನಾದ ನನಗೆ ಹಾಸನದಲ್ಲಿ ಕೆಲಸ ಮಾಡಲು ಅವಕಾಶ ಸಿಕ್ಕಿರುವುದು ಒಂದು ಸೌಭಾಗ್ಯ. ಹಾಸನ ರಾಜ್ಯದ ಪ್ರಮುಖ ಜಿಲ್ಲೆ, ಹಿಂದೆ ಆಗಿರುವ ಕೆಲಸಗಳನ್ನು ಮುಂದು ವರಿಸಲು ಶಕ್ತಿ ಮೀರಿ ಪ್ರಯತ್ನ ಮಾಡುವೆ. ನನ್ನ ಕೈಲಾದ ಅಳಿಲು ಸೇವೆ ಸಲ್ಲಿಸುವೆ, ಯಾವುದರಲ್ಲೂ ಪೈಪೋಟಿ ಮಾಡುವುದಿಲ್ಲ.

» ನಾಲ್ಕನೇ ಪುಟದಲ್ಲಿ

# ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈ ಜೋಡಿಸಿ

• ಪ್ರಜೋದಯ ವರದಿ



ಹಾಸನ: ಜೀವನದಲ್ಲಿ ಉತ್ತಮ ಮೌಲ್ಯ, ಪರೋಪಕಾರ ಗುಣ ಹಾಗು ಸಂಸ್ಕಾರ ಅಳವಡಿಸಿಕೊಂಡು ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈ ಜೋಡಿಸಬೇಕೆಂದು ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಜಿ.ಎಲ್. ಮುದ್ದೇಗೌಡ ಅವರು ಹೇಳಿದರು.

ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ವತಿಯಿಂದ ಶುಕ್ರವಾರ ಕಾಲೇಜಿನ ಅಲ್ಯುಮ್ನಿ ಸಭಾಂಗಣದಲ್ಲಿ ದಿ. ಹಾರನಹಳ್ಳಿ ರಾಮಸ್ವಾಮಿ ಸ್ಮರಣಾರ್ಥ ಹಮ್ಮಿಕೊಂಡಿದ್ದ ಕಾರ್ಯ ಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತ ನಾಡಿ, ದೇಶದ್ಯಾಂತ ಸ್ವಾತಂತ್ರ್ಯ ದಿನ ಆಚರಿಸಲಾಗುತ್ತಿದೆ. ಇಂತಹ ಸಂದ ರ್ಭದಲ್ಲಿ ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ಮತ್ತು ಇಂಜಿನೀಯ ರಿಂಗ್ ಕಾಲೇಜು ವತಿಯಿಂದ ಸನ್ಮಾನ ಮಾಡಿರುವುದು ಸಂತೋಷ ತಂದಿದೆ. ನಾವು ಹುಟ್ಟಿದ ಮೇಲೆ ಏನಾದರು ಸಾಧನೆ ಮಾಡಬೇಕು. ಜೀವನದಲ್ಲಿ ಸಾಮಾಜಿಕ ಮೌಲ್ಯಗಳನ್ನು ರೂಢಿಸಿ ಕೊಂಡು ಸಮಾಜದ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಬೇಕೆಂದರು.

ಹಾಸನದಲ್ಲಿ ಮಲೆನಾಡು ಇಂಜಿನೀಯರಿಂಗ್ ಕಾಲೇಜು ಪ್ರಾರಂಭವಾಗಲು ಹಲವರು ಶ್ರಮಿಸಿದ್ದಾರೆ. ಅವರ ಹೆಸರಿನಲ್ಲಿ ಏನಾದರೂ ಯೋಜನೆ ರೂಪಿಸಿ ಸತ್ಕಾರ್ಯಗಳ ಮಾಡಬೇಕು. ಈ ಸಂಸ್ಥೆ ಬೆಳೆಯಲು 1960ರಲ್ಲಿ ಹಾಸನದಲ್ಲಿದ್ದ ಜಿಲ್ಲಾಧಿಕಾರಿ ಚಂದಪ್ಪ ಪಾಟೀಲ್, ಕೊಡಗಿನ ಮಲ್ಲಪ್ಪ, ನಲ್ಲೂರೇಗೌಡ, ಬೋರಣ್ಣ ಗೌಡ, ಯಸಳೂರ ಧರ್ಮಪ್ಪ, ಚಿಕ್ಕಮಗಳೂರು ಬಸವೇಗೌಡ, ಬಿ.ಜಿ. ಗುರಪ್ಪ, ಹಾರನಹಳ್ಳಿ ರಾಮಸ್ವಾಮಿ, ಬಿ.ಬಿ. ಶಿವಪ್ಪ ಮುಂತಾದವರ ಶ್ರಮವಿದೆ ಎಂದರು.

ಮಲೆನಾಡು ಇಂಜಿನೀಯರಿಂಗ್ ಕಾಲೇಜು ಹಾಗು ವ್ಯಾಪ್ತಿಯ ಎಲ್ಲಾ ಕಾಲೇಜುಗಳು ಇವತ್ತು ಉತ್ತಮ ಸಂಸ್ಥೆ ಯಾಗಿ ಬೆಳೆದಿವೆ. ಅನೇಕರಿಗೆ ಉದ್ಯೋಗ ದೊರಕಿದೆ. ಸಾವಿರಾರು ವಿದ್ಯಾರ್ಥಿಗಳು ಇಲ್ಲಿ ವ್ಯಾಸಂಗ ಮಾಡಿ ದೇಶ ವಿದೇಶಗಳಲ್ಲಿ ನೆಲೆಸಿದ್ದಾರೆ. ಈ ಸಂಸ್ಥೆ ಇನ್ನೂ ಎತ್ತರಕ್ಕೆ ಬೆಳೆಯಲಿ ಎಂದು ಆಶಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ಅಧ್ಯಕ್ಷ ಆರ್.ಟಿ. ದ್ಯಾವೇಗೌಡ ಅವರು ಮಾತನಾಡಿ, 98 ವರ್ಷದ ಜಿ.ಎಲ್.ಮುದ್ದೇಗೌಡ ಅವರು ಶಿಕ್ಷಣ

» ನಾಲ್ಕನೇ ಪುಟದಲ್ಲಿ

# ದುರಹಂಕಾರದ ಮಾತು ನಿಲ್ಲಿಸಿ: ಎ.ಮಂಜು ಎಚ್ಚರಿಕೆ

## ನನ್ನ ರಾಜಕೀಯ ಜೀವನ ಅರಿಯಿರಿ | ಅಕ್ರಮ ಹಣದ ಆಟ ನಡೆಯಲ್ಲ | ಕಾಂಗ್ರೆಸ್ ಮುಖಂಡ ಶ್ರೀಧರ್‌ಗೌಡಗೆ ತಿರುಗೇಟು

• ಪ್ರಜೋದಯ ವರದಿ

**ಅರಕಲಗೂಡು:** ಕಾಂಗ್ರೆಸ್ ಪರಾಜಿತ ಅಭ್ಯರ್ಥಿ ಹೆಚ್.ಪಿ. ಶ್ರೀಧರ್‌ಗೌಡ ಅಕ್ರಮ ದುಡ್ಡಿನ ದುಹಂಕಾರದಿಂದ ನನ್ನ ವಿರುದ್ಧ ಹಗುರವಾಗಿ ಮಾತನಾಡುವುದನ್ನು ನಿಲ್ಲಿಸಬೇಕು. ಈ ಧೋರಣೆ ಮುಂದುವರಿದರೆ ಕ್ಷೇತ್ರದ ಜನರು ಮುಂದಿನ ದಿನಗಳಲ್ಲಿ ಪಾಠ ಕಲಿಸುತ್ತಾರೆಂದು ಶಾಸಕ ಎ.ಮಂಜು ಅವರು ಎಚ್ಚರಿಕೆ ನೀಡಿದರು.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ಈವರೆಗೆ 10 ಚುನಾವಣೆ ಎದುರಿಸಿದ್ದೇನೆ. ನಾಲ್ಕು ಬಾರಿ ಶಾಸಕ, ಸಚಿವನಾಗಿ ಕ್ಷೇತ್ರದಲ್ಲಿ ಕೆಲಸ ಮಾಡಿದ್ದೇನೆ. ನನ್ನ ಹಿಂದಿನ ಕಾಲೇಜಿನ ಜೀವನ, ಹೋರಾಟವನ್ನು ಒಮ್ಮೆ ಶ್ರೀಧರ್ ಗೌಡ ನೆನಪಿಸಿಕೊಂಡರೆ ಒಳ್ಳೆಯದು. ಎಲ್ಲವನ್ನು ಮೀರಿ ರಾಜಕೀಯಕ್ಕೆ ಬಂದವನಾಗಿದ್ದೇನೆ. ಈ ಬಗ್ಗೆ ಅರಿವು ಇದ್ದರೆ ಮುಂದೆ ಅವರಿಗೆ ಒಳ್ಳೆಯದೆಂದು ತಿರುಗೇಟು ನೀಡಿದರು.

ಕೆಲವು ದಿನಗಳ ಹಿಂದೆ ನಾನು ಪಟ್ಟಣದ ಅಭಿವೃದ್ಧಿ ಹಿನ್ನಲೆ ತಯಾರಾಗಿರುವ ಯೋಜನೆ ಬಗ್ಗೆ ಜನರು ಎಚ್ಚರಿಕೆ ವಹಿಸುವ ಕುರಿತು ಮಾಧ್ಯಮ ಹೇಳಿಕೆ ನೀಡಿದ್ದೆ. ಶ್ರೀಧರ್‌ಗೌಡ ಅಥವಾ ನಗರ ಯೋಜನಾ ಪ್ರಾಧಿಕಾರದ ಪದಾಧಿಕಾರಿಗಳ ವಿರುದ್ಧ ಏನೂ ಮಾತನಾಡಿರಲಿಲ್ಲ. ಶಾಸಕನಾಗಿ ಜನರಿಗೆ ತಿಳಿವಳಿಕೆ ನೀಡುವುದು ನನ್ನ ಕರ್ತವ್ಯ. ಅದನ್ನು ವೈಯಕ್ತಿಕವಾಗಿ ತೆಗೆದುಕೊಂಡು ನನ್ನ ವಿರುದ್ಧ ಸಲ್ಲದ ಆರೋಪ ಮಾಡಿರುವುದನ್ನು ಸಹಿಸುವುದಿಲ್ಲವೆಂದರು.

ಕ್ಷೇತ್ರದಲ್ಲಿ ನಾನು, ಮಾಜಿ ಸಚಿವ ಕೆ.ಬಿ.ಮಲ್ಲಪ್ಪ, ನಂಜೇಗೌಡ ಮತ್ತು ರಾಮಸ್ವಾಮಿ ಅವರು ಎಂದಿಗೂ ಕೂಡ ವೈಯಕ್ತಿಕವಾಗಿ ನಿಂದಿಸುವ ಕೆಲಸ ಮಾಡಿಲ್ಲ. ಬದಲಾಗಿ ಕ್ಷೇತ್ರದ ಅಭಿವೃದ್ಧಿ ದೃಷ್ಟಿಯಿಂದ ಆರೋಗ್ಯಕರ ಪದಬಳಕೆ ಮಾಡಿದ್ದೇವೆ. ಶ್ರೀಧರ್ ಗೌಡ ರೇವಣ್ಣ, ಭವಾನಿ ರೇವಣ್ಣರೊಂದಿಗೆ ಒಡನಾಟ ಇಟ್ಟುಕೊಂಡು ರಿಯಲ್ ಎಸ್ಟೇಟ್‌ನಿಂದ ಅಕ್ರಮ ಹಣಗಳಿಕೆ ಮಾಡಿರುವುದು ಗೊತ್ತಿದೆ ಎಂದರು.



ತಾಲ್ಲೂಕಿನ ರಾಜಕೀಯ ಇತಿಹಾಸದಲ್ಲಿ ಆಣೆ ಪ್ರಮಾಣ ಇದುವರೆಗೂ ಬಂದಿರಲಿಲ್ಲ. ಅಕ್ರಮ ಹಣಗಳಿಕೆ ಮಾಡಿರುವ ಶ್ರೀಧರ್‌ಗೌಡರಿಂದ ಶುರುವಾಗಿದೆ. ಪೊಲೀಸ್ ಹೌಸಿಂಗ್ ಸೊಸೈಟಿಯಲ್ಲಿ ದುಡ್ಡು ಮಾಡಿ, ರಾಜೀನಾಮೆ ಕೊಟ್ಟು ರಾಜಕೀಯಕ್ಕೆ ಬಂದಿರುವ ಕುರಿತು ನಾನು ಪಿಟಿಸಿಎಲ್ ಸಮಿತಿಗೆ ದೂರು ಕೊಟ್ಟಿದ್ದೇನೆ. ಅದಕ್ಕೆ ಈ ರೀತಿ ನನ್ನ ವಿರುದ್ಧ ಆರೋಪ ಮಾಡಲು ಕಾರಣವಾಗಿದೆ. ಕಾನೂನು ಏನಿದೆ ಅದು ಮುಂದಿನ ದಿನಗಳಲ್ಲಿ ಆಗಲಿದೆ ಎಂದರು.

ರಾಜಕೀಯಕ್ಕೆ ಬರುವ ಆತುರದಲ್ಲಿ ಎದುರಾಳಿಗಳನ್ನು ನಿಂದಿಸುವ ಕೆಲಸಕ್ಕೆ ಯಾರೂ ಕೂಡ ಮುಂದಾಗಬಾರದು. ಇದು ನನ್ನ ಅನುಭವದ ಮಾತಾಗಿದೆ. ಮಾಜಿ ಸಚಿವ ಹೆಚ್. ಎನ್. ನಂಜೇಗೌಡರು, ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ, ಮಾಜಿ ಸಚಿವ ಪುಟ್ಟಸ್ವಾಮಿಗೌಡರ ಮನೆಗಳನ್ನು ನಾನು ಹಾಳು ಮಾಡಿದ್ದೇನೆಂಬ ಶ್ರೀಧರ್‌ಗೌಡ ಹೇಳಿಕೆ ಗಮನಿಸಿದ್ದೇನೆ. ಇದು ನಿಜವಾಗಿದ್ದರೇ ಈ ಕ್ಷೇತ್ರದ ಮತದಾರರು ನನ್ನನ್ನು ಆಯ್ಕೆ ಮಾಡುತ್ತಿದ್ದರೇ ಎಂದು ಪ್ರಶ್ನಿಸಿದ ಅವರು, ದೇವೇಗೌಡರು ಚುನಾವಣೆಯಲ್ಲಿ ಸೋತು ಶೋಚನೀಯ ಸ್ಥಿತಿಯಲ್ಲಿದ್ದು ಪುನಃ ಸ್ಪರ್ಧೆ ಮಾಡಿದ ಸಂದರ್ಭದಲ್ಲಿ ನಾನು ಅವರನ್ನು ಬೆಂಬಲಿಸಿದ್ದೇನೆ. ಅದೇ ರೀತಿ ಪುಟ್ಟಸ್ವಾಮಿಗೌಡರ ಮೊಮ್ಮಗನನ್ನು ಜಿಲ್ಲಾ ಪಂಚಾಯಿತಿ ಸದಸ್ಯನಾಗಿ ಮಾಡಿದ್ದೇನೆ. ಅದೇ ರೀತಿ ನಂಜೇಗೌಡರ ಕುಟುಂಬ ನನ್ನ ಕುಟುಂಬವಾಗಿದೆ. ಅದನ್ನು ಅರ್ಥ ಮಾಡಿಕೊಳ್ಳದೇ ಕೇವಲ ರಾಜಕೀಯ ದ್ವೇಷದಿಂದ ಸುಳ್ಳು ಹೇಳಬಾರದೆಂದು ಎಚ್ಚರಿಸಿದರು.

ನಾನು ಸಚಿವನಾಗಿದ್ದ ವೇಳೆ ಮೋಕಲಿ ಬಳಿ ಪಶು ಆಹಾರ ಘಟಕ ತೆರೆಯಲು ಚಾಲನೆ ನೀಡಿದ್ದೆ. ಅದರಲ್ಲಿ ಪಾಲುದಾರಿಕೆ ಪಡೆಯಬೇಕಿದ್ದರೇ ಅಂದೇ ಮಾಡಿಕೊಳ್ಳುತ್ತಿದ್ದೆ. ಈಗ ಫ್ಯಾಕ್ಟರಿ ನಡೆಸುವವರಿಂದ ಪಾಲು ಕೇಳುವ ಅನಿವಾರ್ಯತೆ ನನಗಿಲ್ಲ. ರೈತರಿಗೆ ವಿತರಿಸಬೇಕಿದ್ದ ಯೂರಿಯಾ ಅನ್ನು ಅಕ್ರಮವಾಗಿ ಫ್ಯಾಕ್ಟರಿಗೆ ಬಳಕೆ ಮಾಡಿಕೊಳ್ಳುತ್ತಿರುವ ಕುರಿತು ದೂರು ದಾಖಲಾದ ಹಿನ್ನಲೆ ನಿಯಮ ಉಲ್ಲಂಘನೆ ವಿರುದ್ಧ ಕ್ರಮ ಕೈಗೊಳ್ಳಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದೆ. ಈ ಫ್ಯಾಕ್ಟರಿಯಿಂದ ಯಾರಿಗೆ ಹಣ ಹೋಗಿದೆ ಎಂಬುದು ನನಗೆ ಗೊತ್ತಿದೆ. ಅದನ್ನು ಕೂಡ ಮುಂದಿನ ದಿನಗಳಲ್ಲಿ ಸಾಬೀತು ಪಡಿಸುವೆ ಎಂದು ಮಂಜು ಸವಾಲು ಹಾಕಿದರು.

# ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ: ಸಿಎಂ ಜೊತೆ ಚರ್ಚೆ ಭರವಸೆ

• ಪ್ರಜೋದಯ ವರದಿ

**ಹಾಸನ:** ಹಿಮ್ಸ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಪುನಾರಂಭ ಹಾಗು ಮೂಲ ಸೌಕರ್ಯ ಕಲ್ಪಿಸುವ ಸಂಬಂಧ ಮುಖ್ಯಮಂತ್ರಿ ಹಾಗು ಸಚಿವರೊಂದಿಗೆ ಚರ್ಚಿಸುವುದಾಗಿ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಭರವಸೆ ನೀಡಿದರು.

ಜಿಲ್ಲಾ ಜನಪರ ಚಳವಳಿಗಳ ಒಕ್ಕೂಟದಿಂದ ಆಸ್ಪತ್ರೆಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಜನಾರೋಗ್ಯಕ್ಕಾಗಿ ಜನಾಂದೋಲನ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಮನವಿ ಸ್ವೀಕರಿಸಿ, ಆರೋಗ್ಯ ವಿಚಾರ ಗಂಭೀರವಾದುದು. ನೂತನ ಆಸ್ಪತ್ರೆ ಪುನಾರಂಭಕ್ಕೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಅಧಿಕಾರಿಗಳಿಂದ ಅಗತ್ಯ ಮಾಹಿತಿ ಪಡೆದು ಮುಂದಿನ ಕ್ರಮ ಕೈಗೊಳ್ಳುತ್ತೇನೆಂದು ಹೇಳಿದರು.

ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ಅವರು ಮಾತನಾಡಿ, ಆಸ್ಪತ್ರೆ ಕಾರ್ಯಾರಂಭವಾಗಬೇಕೆಂದರೆ ಬಾಕಿ ಕಾಮಗಾರಿ, ಯಂತ್ರೋಪಕರಣ, ತಜ್ಞ ವೈದ್ಯರು, ವೈದ್ಯಕೀಯ ಮತ್ತು ವೈದ್ಯ ಕೀಯೇತರ ಸಿಬ್ಬಂದಿ ನೇಮಕಾತಿಗಾಗಿ 60 ಕೋ. ರೂ. ಬಿಡುಗಡೆ ಮಾಡಬೇಕು. ರೋಗ ತಪಾಸಣೆ ಮತ್ತು ಚಿಕಿತ್ಸೆ ನೀಡಲು ವೈದ್ಯಕೀಯ ವಿಭಾಗ, ಕ್ಯಾಥ್ ಲ್ಯಾಬ್, ಪ್ರತ್ಯೇಕ ಶಸ್ತ್ರಚಿಕಿತ್ಸಾ ಘಟಕ ಪ್ರಾರಂಭಿಸಬೇಕೆಂದು ಮನವಿ ಮಾಡಿದರು.

ಜಿಲ್ಲೆಯಲ್ಲಿ ಪ್ರಾಥಮಿಕ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳ ಸಂಖ್ಯೆ ಹೆಚ್ಚಿಸಬೇಕು. ಸಂಚಾರಿ ವೈದ್ಯಕೀಯ ವಾಹನ (ಮೊಬೈಲ್ ಕ್ಲಿನಿಕ್) ವ್ಯವಸ್ಥೆ ಮಾಡಬೇಕು. ಪ್ರತಿ ಗ್ರಾಮಗಳಲ್ಲಿ ಆರೋಗ್ಯ ತಪಾಸಣಾ ಶಿಬಿರ ಹೆಚ್ಚಿಸಬೇಕು. ಜನರಲ್ಲಿ ಆರೋಗ್ಯ ಸಾಕ್ಷರತೆ ಮೂಡಿಸಲು ಪರಿಣಾಮಕಾರಿ ಯೋಜನೆ ರೂಪಿಸಬೇಕೆಂದರು.



ಜಿಲ್ಲೆಯಾದ್ಯಂತ ಹೆಚ್ಚುತ್ತಿರುವ ಮದ್ಯದ ಅಂಗಡಿ, ಬಾರ್ ಮತ್ತು ರೆಸ್ಟೋರೆಂಟ್‌ಗಳ ಮೇಲೆ ಕಡಿವಾಣ ಹಾಕಬೇಕು. ಹೊಸದಾಗಿ ಪರವಾನಗಿ ನೀಡಬಾರದು. ಗಾಂಜಾ, ಡ್ರಗ್ಸ್‌ನಂತಹ ಮಾದಕ ಪದಾರ್ಥಗಳ ಮಾರಾಟಕ್ಕೆ ಸಂಪೂರ್ಣ ಕಡಿವಾಣ ಹಾಕಬೇಕೆಂದು ಒತ್ತಾಯಿಸಿದರು.

ಜಿಲ್ಲೆಗೆ ಮಂಜೂರಾದ 340 ವೈದ್ಯರ ಪೈಕಿ 117 ಹುದ್ದೆ ಖಾಲಿ ಇವೆ. 36 ತಜ್ಞ ವೈದ್ಯರು, 22 ತುರ್ತು ಚಿಕಿತ್ಸಾ ವೈದ್ಯಾಧಿಕಾರಿ ಮತ್ತು 52 ಕರ್ತವ್ಯ ನಿರತ ವೈದ್ಯಾಧಿಕಾರಿಗಳಿಲ್ಲ. 1,856 ವೈದ್ಯಕೀಯ ಸಿಬ್ಬಂದಿ ಪೈಕಿ 815 ಖಾಲಿ ಇವೆ. 824 ವೈದ್ಯ ಕೀಯೇತರ ಹುದ್ದೆಗಳಲ್ಲಿ 664 ಖಾಲಿ ಇವೆ. ಜಿಲ್ಲಾಸ್ಪತ್ರೆಯಲ್ಲಿ 7 ಆ್ಯಂಬುಲೆನ್ಸ್‌ಗಳಿದ್ದು 3 ದುರಸ್ತಿಯಲ್ಲಿವೆಂದು ಮಾಹಿತಿ ನೀಡಿದರು.

ಸಂಸದ ಶ್ರೇಯಸ್ ಪಟೇಲ್, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಉಪವಿಭಾಗಾಧಿಕಾರಿ ಮಾರುತಿ, ಪತ್ರಕರ್ತ ಆರ್.ಪಿ.ವೆಂಕಟೇಶ್ ಮೂರ್ತಿ, ಸಾಹಿತಿ ರೂಪ ಹಾಸನ, ದಲಿತ ಮುಖಂಡರು ಸೇರಿ ಹಲವರು ಇದ್ದರು.

### ಶಾಸಕ ಸತೀಶ ಶೈಲ್ ಮನೆಯಲ್ಲಿ ನಗದು-ಚಿನ್ನ ಪತ್ತೆ

• ಪ್ರಜೋದಯ ವರದಿ

**ಕಾರವಾರ:** ಶಾಸಕ ಸತೀಶ ಸೈಲ್ ಮನೆ ಮೇಲೆ ಎರಡು ದಿನಗಳ ಹಿಂದೆ ದಾಳಿ ನಡೆಸಿದ್ದ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಕೋಟ್ಯಾಂತರ ನಗದು, ಕೆ.ಜಿ.ಗಟ್ಟಲೆ ಬಂಗಾರ ವಶಕ್ಕೆ ಪಡೆದಿದ್ದಾರೆ.

ಬೇಲೆಕೇರಿ ಬಂದರಿನಿಂದ ಕಬ್ಬಿಣದ ಅದಿರು ಕಳ್ಳ ಸಾಗಾಣಿಕೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿ ನಡೆದ ಹಣಕಾಸು ವಹಿವಾಟು ಮಾಹಿತಿ ಆಧರಿಸಿ ಶಾಸಕ ಸತೀಶ ಸೈಲ್ ಅವರ ನಿವಾಸ, ಪ್ರಕರಣದಲ್ಲಿ ಭಾಗಿಯಾದ ಇನ್ನಿತರರ ಕಚೇರಿ ನಿವಾಸಗಳಲ್ಲಿ ಪರಿಶೀಲನೆ ನಡೆಸಲಾಗಿತ್ತು. ಕಾರವಾರ, ದೆಹಲಿ, ಗೋವಾ, ಮುಂಬೈನ ವಿವಿಧೆಡೆ ಪರಿಶೀಲನೆಯನ್ನು ಇಡಿಯ ಬೆಂಗಳೂರು ವಿಭಾಗದ ತಂಡ ಕೈಗೊಂಡಿತ್ತು ಎಂದು ಜಾರಿ ನಿರ್ದೇಶನಾಲಯ ತನ್ನ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದೆ.

# ಭೂನ್ಯಾಯ ಮೂಲಕ ಬಾಕಿ ಇದ್ದ ಪ್ರಕರಣ ವಿಲೇ

## ಕಂದಾಯ ಇಲಾಖೆಯಲ್ಲಿ ನಿರಂತರ ಬದಲಾವಣೆ : ಕೃಷ್ಣಬೈರೇಗೌಡ

• ಪ್ರಜೋದಯ ವರದಿ

**ಹಾಸನ:** ರಾಜ್ಯದಲ್ಲಿ ಕಳೆದ 2 ವರ್ಷಗಳಲ್ಲಿ ಕಂದಾಯ ಇಲಾಖೆಯಲ್ಲಿ ನಿರಂತರ ಬದಲಾವಣೆ ತರಲಾಗಿದೆ. ಜನರು ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಿ, ಮಧ್ಯವರ್ತಿಗಳ ಶೋಷಣೆ ತಡೆಯಲು ರಾಜ್ಯದ ತಹಶೀಲ್ದಾರ್ ಮತ್ತು ಎಸಿ ಕೋರ್ಟ್‌ಗಳಲ್ಲಿ ವರ್ಷಾನುಗಟ್ಟಲೆ ಬಾಕಿ ಉಳಿದಿದ್ದ ಪ್ರಕರಣಗಳನ್ನು ಆಂದೋಲನ ಮಾದರಿಯಲ್ಲಿ ವಿಲೇವಾರಿ ಮಾಡಲಾಗುತ್ತಿದೆ ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಲೇವಾರಿ ಆಗದೇ ಉಳಿದಿದ್ದ 10,774 ಅವಧಿ ಮೀರಿದ ಪ್ರಕರಣ ಗಳಲ್ಲಿ ಭೂನ್ಯಾಯ ವಿಲೇವಾರಿ ಆಂದೋಲನ ನಡೆಸಿ



ಜೂನ್ ಅಂತ್ಯಕ್ಕೆ 10,358 ಪ್ರಕರಣ ಇತ್ಯರ್ಥಗೊಳಿಸ ಲಾಗಿದ್ದು, 416 ಬಾಕಿ ಇವೆ. ಹಾಗೆಯೇ ಎಸಿ ಕೋರ್ಟ್‌ಗಳಲ್ಲಿ ಅವಧಿ ಮೀರಿದ 62,857 ಪ್ರಕರಣ ಇದ್ದವು. ಅವುಗಳಲ್ಲೀಗ 18,166 ಕೇಸ್ ಬಾಕಿ ಇವೆ. 1 ವರ್ಷ ಮೀರಿದ್ದ 59,339 ಪ್ರಕರಣಗಳಲ್ಲಿ 14,652 ಹಾಗು 5 ವರ್ಷ ತುಂಬಿದ್ದ 32,797 ಪ್ರಕರಣಗಳಲ್ಲಿ ಕೇವಲ 4601 ಬಾಕಿ ಇವೆ ಎಂದು ಅಂಕಿ ಅಂಶ ನೀಡಿದರು.

**100 ಕೋಟಿ ಪುಟಗಳ ದಾಖಲೆ ಸ್ಕ್ಯಾನಿಂಗ್**

ತಾಲ್ಲೂಕು ಕಚೇರಿಗಳಲ್ಲಿ ನಕಲಿ ದಾಖಲಿ ಸೃಷ್ಟಿ ದಂಧೆ ಸಮಾಜಕ್ಕೆ ಹಾನಿಯಾಗುವ ರೀತಿಯಲ್ಲಿ ನಡೆದಿದೆ. ಎಷ್ಟೋ ದಾಖಲೆ ಕಳೆದು ಹೋಗಿ ಜನರಿಗೆ ತೊಂದರೆಯಾಗುತ್ತಿದೆ. ಹೀಗಾಗಿ ಕಾಣೆಯಾಗಿರುವ, ಶಿಥಿಲೀಕರಣಗೊಂಡಿರುವ, ಸ್ಥಳಾಂತರ ಗೊಂಡಿರುವ ದಾಖಲೆಗಳನ್ನು ಡಿಜಿಟಲ್ ರೂಪ ನೀಡಲು ಭೂ ದಾಖಲೆ ಸುರಕ್ಷಾ ಯೋಜನೆಯಡಿ 100 ಕೋಟಿ ಪುಟಗಳ ದಾಖಲೆಗಳನ್ನು ಸ್ಕ್ಯಾನಿಂಗ್ ಮಾಡುವ ಕಾರ್ಯ ಆರಂಭಿಸಲಾಗಿದೆ. ಈಗಾಗಿ 36 ಕೋಟಿ ಪುಟ ಸ್ಕ್ಯಾನಿಂಗ್ ಮಾಡಲಾಗಿದ್ದು, ಎಲ್ಲಾ ಪೂರ್ಣಗೊಂಡರೆ

» ನಾಲ್ಕನೇ ಪುಟದಲ್ಲಿ

# ಪ್ರತ್ಯೇಕ ಅಪಘಾತ: ಇಬ್ಬರ ಸಾವು

• ಪ್ರಜೋದಯ ವರದಿ

**ಹಾಸನ:** ಸಕಲೇಶಪುರ ಗ್ರಾಮಾಂತರ ಹಾಗು ಹಳೇಬೀಡು ಠಾಣೆ ವ್ಯಾಪ್ತಿಯಲ್ಲಿ ನಡೆದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ವಾಹನ ಡಿಕ್ಕಿಯಾಗಿ ರಸ್ತೆ ಬದಿ ನಿಂತಿದ್ದ ಕಾರ್ಮಿಕ ಮಹಿಳೆ ಮೃತಪಟ್ಟಿರುವ ಘಟನೆ ಸಕಲೇಶಪುರ ತಾಲ್ಲೂಕು ನಟ್ಟಹಳ್ಳಿ ಸಮೀಪ ನಡೆದಿದೆ. ಹೆನ್ನಲಿ ಗ್ರಾಮದ ರುಕ್ಮಿಣಿ (30) ಮೃತರು. ಕೆಲಸಕ್ಕೆ ಹೋಗಿದ್ದ ಅವರು ವಾಪಾಸ್ ಊರಿಗೆ ಬರಲು ವಾಹನಕ್ಕಾಗಿ ಕಾದು ನಿಂತಿದ್ದರು. ಆಗ ಚಾಲಕ ಜೋರಾಗಿ ವಾಹನ ಓಡಿಸಿಕೊಂಡು ಬಂದು ರುಕ್ಮಿಣಿಗೆ ಡಿಕ್ಕಿ ಮಾಡಿದ್ದಾನೆ. ತಲೆಗೆ ಬಲವಾದ ಪೆಟ್ಟು ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಗ್ಯಾಸ್ ಸಿಲಿಂಡರ್ ಲಾರಿ ಡಿಕ್ಕಿಯಾಗಿ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಬೇಲೂರು ತಾಲ್ಲೂಕು ಅಂಗಡಿಹಳ್ಳಿ ಗ್ರಾಮ ಸಮೀಪ ನಡೆದಿದೆ. ಮಾದಿಹಳ್ಳಿ ಹೋಬಳಿ ಸೂಲದೇವರಹಳ್ಳಿ ಗ್ರಾಮದ ಕೃಷ್ಣ (21) ಮೃತ ಯುವಕ. ಸೂಲ ದೇವನಹಳ್ಳಿಯಿಂದ ಹಗರೆಗೆ ಬರುತ್ತಿದ್ದಾಗ ಬೇಲೂರು ಕಡೆಯಿಂದ ಬಂದ ಗ್ಯಾಸ್ ಸಿಲಿಂಡರ್ ಲಾರಿ ಡಿಕ್ಕಿಯಾಗಿದೆ. ಹಿಮ್ಸ್‌ಗೆ ದಾಖಲಿಸಲಾಗಿತ್ತಾದರೂ ಚಿಕಿತ್ಸೆ ಫಲಿಸದೆ ಮೃತಪಟ್ಟಿದ್ದಾರೆ. ಹಳೇಬೀಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಶೆಡ್‌ನಿಂದ 6 ಮೇಕೆಗಳ ಕಳವು

**ಅರಸೀಕೆರೆ:** ಶೆಡ್‌ನ ಬೀಗ ಮುರಿದು 6 ಮೇಕೆಗಳನ್ನು ಕಳವು ಮಾಡಿರುವ ಘಟನೆ ತಾಲ್ಲೂಕಿನ ಕೊಂಡಿನಾಳು ಗ್ರಾಮದಲ್ಲಿ ಆ.13ರ ರಾತ್ರಿ ನಡೆದಿದೆ.

ಗ್ರಾಮದ ಮಂಜುನಾಥ್ ಅವರು ವಾಸದ ಮನೆಗೆ ಹೊಂದಿಕೊಂಡಂತೆ ಶೆಡ್ ನಿರ್ಮಿಸಿ 11 ಮೇಕೆ ಸಾಕಿದ್ದರು. ಆ.14ರ ಬೆಳಿಗ್ಗೆ ನೋಡಿದಾಗ ಮೇಕೆಗಳು ಇಲ್ಲದಿರುವುದು ಗೊತ್ತಾಗಿದೆ. ಯಾರೋ ಕಳ್ಳರು ಶೆಡ್‌ನ ಬೀಗ ಮುರಿದು ಕಳವು ಮಾಡಿದ್ದಾರೆ. ಗಂಡಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಸೆರೆಗೆ ಮಹಾನಗರ ಪಾಲಿಕೆ ಮೇಲೆ ಒತ್ತಡ | ಬೆಂಗಳೂರಿನ ಎಬಿಸಿ ಡಾಗ್ ಕೇರ್‌ನಿಂದ ಕಾರ್ಯಾಚರಣೆ ಸಿದ್ಧತೆ

# ಬೀದಿ ನಾಯಿಗಳ ಉಪಟಳಕ್ಕೆ ಹೈರಾಣಾದ ಜನರು

• ಪ್ರಜೋದಯ ವರದಿ

**ಹಾಸನ:** ನಗರದಲ್ಲಿ ಬೀದಿ ನಾಯಿಗಳ ಹಾವಳಿ ಉಪಟಳ ಹೆಚ್ಚಾಗಿದ್ದು, ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕೆಂಬ ಆಗ್ರಹ ಕೇಳಿ ಬಂದಿದೆ.

ಹಾಸನ ಮಾತ್ರವಲ್ಲದೆ ದೇಶಾದ್ಯಂತ ಬೀದಿ ನಾಯಿಗಳ ಹಾವಳಿ ಕುರಿತು ಚರ್ಚೆಯಾಗುತ್ತಿದ್ದು, ಸುಪ್ರೀಂ ಕೋರ್ಟ್ ಸಹ ವಿಚಾರವನ್ನು ಗಂಭೀರವಾಗಿ ಪರಿಗಣಿಸಿದೆ. ಜೊತೆಗೆ ವಿಧಾನ ಸೌಧದಲ್ಲೂ ಈ ಪ್ರತಿ ಧ್ವನಿಸಿದೆ. ಅದೇ ಹಿನ್ನಲೆಯಲ್ಲಿ ನಗರದಲ್ಲಿ ಹೆಚ್ಚಿರುವ ನಾಯಿಗಳ ಹಾವಳಿಯಿಂದ ಜನರನ್ನು ರಕ್ಷಿಸಬೇಕೆಂಬ ಕೂಗು ಹೆಚ್ಚಾಗಿದೆ.

**ಮುಂದಿನ ವಾರದಿಂದ ಸೆರೆ ಕಾರ್ಯಾಚರಣೆ**

ನಗರ ವ್ಯಾಪ್ತಿಯಲ್ಲಿ 3 ಸಾವಿರಕ್ಕೂ ಹೆಚ್ಚು ಬೀದಿ ನಾಯಿಗಳಿವೆ. ಎಲ್ಲವನ್ನೂ ಸೆರೆ ಹಿಡಿದು ಸಂತಾನಹರಣ ಶಸ್ತ್ರ ಚಿಕಿತ್ಸೆ ನೀಡುವ ಉದ್ದೇಶದಿಂದ ಮಹಾನಗರ ಪಾಲಿಕೆ ಕ್ರಮ ಕೈಗೊಂಡಿದೆ. ಬೆಂಗಳೂರಿನ ಎಬಿಸಿ ಡಾಗ್ ಕೇರ್ ಎಂಬ ಸಂಸ್ಥೆಗೆ ಗುತ್ತಿಗೆ ನೀಡಿದ್ದು, ನಗರ



ಹೊರವಲಯದಲ್ಲಿ ಸುಮಾರು 8 ಶೆಡ್‌ಗಳನ್ನು ನಿರ್ಮಿಸಲಾಗಿದೆ. ಆ.21 ರಿಂದ ಸೆರೆ ಕಾರ್ಯಾಚರಣೆ ನಡೆಯಲಿದೆ. ವರ್ಷ ಪೂರ್ತಿ ಈ ಕಾರ್ಯಕ್ರಮ ನಡೆಯಲಿದ್ದು, ಮುಂದಿನ ದಿನಗಳಲ್ಲಿ ಬೀದಿ ನಾಯಿಗಳ ಹಾವಳಿ ಬಹುತೇಕ ತಪ್ಪಲಿದೆ ಎಂದು ಮಹಾನಗರ ಪಾಲಿಕೆ ಮೇಯರ್ ಎಂ.ಚಂದ್ರೇಗೌಡ ಅವರು ಹೇಳಿದರು.

ಬೀದಿ ನಾಯಿಗಳಿಂದ ಆಗುತ್ತಿರುವ ತೊಂದರೆ ಕುರಿತು ನಿತ್ಯ ಸಾರ್ವಜನಿಕರಿಂದ ದೂರು ಕೇಳಿ ಬರುತ್ತಿದೆ. ಅನೇಕ ಜನರು ಕಚೇರಿಗೆ ಬಂದು ಮನವಿ ಸಲ್ಲಿಸುತ್ತಾರೆ. ಪಾಲಿಕೆ ಸದಸ್ಯರು ಸಹ ಸಾಮಾನ್ಯ ಸಭೆಗಳಲ್ಲಿ ಧ್ವನಿ ಎತ್ತಿದ್ದಾರೆ. ಹೀಗಾಗಿ ಬೀದಿ ನಾಯಿಗಳ ಸೆರೆ ಹಿಡಿದು ಸಂತಾನ ಹರಣ ಶಸ್ತ್ರ ಚಿಕಿತ್ಸೆಗೆ ಟೆಂಡರ್ ಆಹ್ವಾನಿಸಲಾಗಿತ್ತು. ಬೆಂಗಳೂರಿನ ಕಂಪನಿ ಒಡಂಬಡಿಕೆ ಮಾಡಿ ಕೊಂಡಿದ್ದು ಕಾರ್ಯಾಚರಣೆ ಪ್ರಾರಂಭವಾಗಲಿದೆ. ಕಳೆದ ಐದು ತಿಂಗಳ ಹಿಂದೆಯೂ ಕೈಗಾರಿಕಾ ಪ್ರದೇಶದಲ್ಲಿ ಶೆಡ್ ನಿರ್ಮಿಸಿ ಒಂದು ವಾರಗಳ ಕಾಲ ಸೆರೆ ಕಾರ್ಯಾಚರಣೆ ನಡೆದಿತ್ತು ಎಂದು ಅವರು ವಿವರಿಸಿದರು.

> ನಗರದಲ್ಲಿ ಬೀದಿ ನಾಯಿಗಳ ಹಾವಳಿ ಮಿತಿ ಮೀರಿದ್ದು ಸಮಸ್ಯೆಯನ್ನು ಗಂಭೀರವಾಗಿ ಪರಿ ಗಣಿಸಲಾಗಿದೆ. ಬೆಂಗಳೂರಿನ ಎಬಿಸಿ ಡಾಗ್ ಕೇರ್ ಸಂಸ್ಥೆಗೆ ಬೀದಿ ನಾಯಿಗಳ ಸೆರೆ ಜವಾಬ್ದಾರಿ ವಹಿಸಲಾಗಿದೆ. ಗುರುವಾರದಿಂದ ಕಾರ್ಯಾಚರಣೆ ಪ್ರಾರಂಭವಾಗಲಿದೆ.
> -ಎಂ. ಚಂದ್ರೇಗೌಡ, ಮೇಯರ್

**ಅರ್ಧಕ್ಕೆ ನಿಂತಿದ್ದ ಕಾರ್ಯಾಚರಣೆ**

ಯೋಗಾನಂದ ಅವರು ನಗರಸಭೆ ಆಯುಕ್ತರಾಗಿದ್ದ ವೇಳೆ ಬೀದಿ ನಾಯಿಗಳ ಸೆರೆಗೆ ಕ್ರಮ ವಹಿಸಿದ್ದರು. ತುಮಕೂರು ಮೂಲದ ಕಂಪನಿ ಅರ್ಧದಲ್ಲೇ ಕೆಲಸ ಸ್ಥಗಿತಗೊಳಿಸಿದ್ದರಿಂದ ಸಮಸ್ಯೆ ಹಾಗೆಯೇ ಉಳಿದಿದೆ. ಸಾರ್ವಜನಿಕರ ಬವಣೆ ಹೇಳತೀರದಾಗಿದೆ.

**ಜಾಗ ಬಿಟ್ಟು ಹೋಗದ ನಾಯಿಗಳು**

ಬೀದಿ ನಾಯಿಗಳ ಸಂಖ್ಯೆಯಲ್ಲಿ ವಿಪರೀತ ಏರಿಕೆಯಾಗಿದೆ. ಆಹಾರವನ್ನು ತಾವೇ ಹುಡುಕಿಕೊಳ್ಳುವ ಸ್ವಭಾವದ ನಾಯಿಗಳು ಇತ್ತೀಚೆಗೆ ಅಂತಹ ಪ್ರಯತ್ನಕ್ಕೆ ಮುಂದಾಗುತ್ತಿಲ್ಲ. ಕೋವಿಡ್ ಸಮಯದಲ್ಲಿ ಜನರು ಹೊರಗಡೆ ಬರುತ್ತಿರಲಿಲ್ಲ. ಆ ಅವಧಿಯಲ್ಲಿ ಉಳಿದ ಆಹಾರ ಪದಾರ್ಥ ವನ್ನು ಮನೆ ಮುಂದೆಯೇ ಹಾಕುತ್ತಿದ್ದರು. ನಾಯಿಗಳು ಸಹ ಎಲ್ಲಿಯೂ ಅಲೆಯದೆ ಇದ್ದಲ್ಲಿಯೇ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದವು. ಇತ್ತೀಚೆಗೆ ನಾಯಿಗಳಿಗೆ ಆಹಾರ ಹಾಕುವ ಪದ್ಧತಿ ನಿಂತಿದೆ. ಹೀಗಾಗಿ ಅವು ಆಹಾರಕ್ಕಾಗಿ ಜನರ ಹಿಂದೆ ದುಂಬಾಲು ಬಿದ್ದಿವೆ.

**ಜನರ ಜವಾಬ್ದಾರಿ ಏನು**

ಬೀದಿ ನಾಯಿಗಳು ಸಾರ್ವಜನಿಕ ರಸ್ತೆಯಲ್ಲಿ ಗುಂಪುಗಟ್ಟಲೇ ತಿರುಗಾಡುತ್ತಿರುವುದು ಮಾತ್ರವಲ್ಲದೆ ಏಕಾಏಕಿ ದಾಳಿ ನಡೆಸುತ್ತಿವೆ. ಮಕ್ಕಳು ನಿರ್ಭೀತಿಯಿಂದ ಓಡಾಡಲು ಆಗುತ್ತಿಲ್ಲ. ಕೈಯಲ್ಲಿ ಬ್ಯಾಗ್ ಹಿಡಿದು ಹೊರಟರೆ ದಿಢೀರನೆ ಮೈ ಮೇಲೆ ಬರುತ್ತವೆ. ಆದ್ದರಿಂದ ಸಾರ್ವಜನಿಕರು ಎಚ್ಚರ ವಹಿಸಬೇಕಾಗುತ್ತದೆ. ರಸ್ತೆ ಬದಿ ಆಹಾರ ಪದಾರ್ಥ ತ್ಯಾಜ್ಯ ಹಾಕುವುದನ್ನು ಕಡ್ಡಾಯವಾಗಿ ನಿಲ್ಲಿಸಬೇಕು. ಮಹಾನಗರ ಪಾಲಿಕೆಯ ಕಸ ಸಂಗ್ರಹ ವಾಹನಕ್ಕೆ ಸುರಿಯುವುದರಿಂದ ಸ್ವಚ್ಛತೆ ಕಾಪಾಡುವುದು ಮಾತ್ರವಲ್ಲದೆ ಬೀದಿ ನಾಯಿಗಳ ಹಾವಳಿಗೆ ಕಡಿವಾಣ ಹಾಕಬಹುದು.

CMYK CMYK CMYK CMYK



## ನೋವು ಹೊಸದಲ್ಲ, ಬದುಕು ಶಾಶ್ವತವಲ್ಲ!

ನಂಬಿಕೊಂಡು ಬಂದವರ ಮೇಲೆ ಕೊನೇ ತನಕ ಪ್ರೀತಿಯು ಕಡಿಮೆಯಾಗದಿರಲಿ. ಪಡೆದುಕೊಂಡ ಮೇಲೇ ಅವರ ಜೊತೆ ನಡೆದುಕೊಳ್ಳುವ ರೀತಿಯು ಚೆನ್ನಾಗಿರಲಿ!

ಕೋಪ ಬಂದಾಗ ಕಣ್ಣಿಂದ ನೀರು ಬರಬೇಕೇ ವಿನಃ ಬಾಯಿಂದ ಮಾತು ಬರಬಾರದು. ಕಣ್ಣೀರಿನಿಂದ ಕೋಪ ಕರಗಿ ಹೋಗುತ್ತದೆ. ಮಾತಿನಿಂದ ನಿನ್ನ ಜೊತೆಗಿದ್ದವರೇ ದೂರ ಹೋಗುತ್ತಾರೆ!

ಮನೆಯಲ್ಲಿ ಕಣ್ಣಿಗೆ ಕಾಣುವ ಎಷ್ಟೇ ದೀಪಗಳು ಇದ್ದರೂ ದೇವರ ಮುಂದೆ ಇಡೋ ದೀಪಕ್ಕೆ ಬೆಲೆ ಜಾಸ್ತಿ. ಹಾಗೇ ಇಷ್ಟ ಪಡೋ ಮನಸ್ಸುಗಳು ಎಷ್ಟೋ ಇದ್ದರೂ ನಾವು ಇಷ್ಟ ಪಡೋ ಒಂದು ಮನಸ್ಸಿಗೆ ಬೆಲೆ ಜಾಸ್ತಿ!

ನಾವು ಸ್ನೇಹ ಮಾಡಬೇಕಾಗಿರುವುದು ವ್ಯಕ್ತಿಯ ಜೊತೆಗಲ್ಲಾ, ವ್ಯಕ್ತಿತ್ವದ ಜೊತೆಗೇ!

ಪ್ರೀತಿ ಎಂದರೆ ಕಾಡುವುದಲ್ಲಾ ಪ್ರಾಣ ಇರುವವರೆಗೂ ಕಾಯುವುದು. ಈಗ ನಡೆಯುತ್ತಿರುವುದನ್ನು ಒಪ್ಪಿಕೊಳ್ಳಿ, ಹಿಂದೆ ನಡೆದುದನ್ನು ಬಿಟ್ಟು ಹಾಕಿ, ಮುಂದೆ ನಡೆಯುವುದರ ಮೇಲೇ ನಂಬಿಕೆ ಇಡೀ!

ಬದುಕು ಒಂದು ಸಂತೆ, ಆ ಸಂತೆಯೊಳಗೆ ನೂರೆಂಟು ಚಿಂತೆ, ಆದರೂ ಬಾಳಲೇ ಬೇಕು ಎಲ್ಲರಂತೆ!

ಬಾಳೊಂದು ನಿಗೂಢ ಪಯಣ, ಆದಿ, ಅಂತ್ಯ ನಮ್ಮ ಇಚ್ಛೆಯಂತಿಲ್ಲದ ಯಾನ, ನೋವು, ನಲಿವು, ಅನೀರೀಕ್ಷಿತ ಭಗವಂತನ ದಾನ. ಭರವಸೆಯಿಂದ ಬದುಕಬೇಕು ಪ್ರತಿಕ್ಷಣ!

ಕಾಲ ಎಲ್ಲರಿಗೂ ನೋವು ಕೊಡುತ್ತೇ.. ಯಾಕೆಂದರೆ ಗಡಿಯಾರದಲ್ಲಿರುವುದು ಮುಳ್ಳುಗಳು, ಹೂವಲ್ಲ!

ಚಿಂತೆಗಿಂತ ದೊಡ್ಡ ಕಾಯಿಲೆ ಇಲ್ಲಾ, ಸಂತೋಷಕ್ಕಿಂತ ದೊಡ್ಡ ಔಷದ ಇಲ್ಲಾ!

ಅತ್ಯಂತ ಒಳ್ಳೆಯ ಆಯುಧ ಸಹನೆ, ಬಹು ದೊಡ್ಡ ಪ್ರತೀಕಾರ ಮೌನ. ಕೆಲವೊಬ್ಬರ ನಗುವಿಗಾಗಿ ಕೆಲವೊಮ್ಮೆ ನಮ್ಮ ನೋವುಗಳನ್ನು ಅಡವಿಡಬೇಕಾಗುತ್ತದೆ!


ಗಂಡು ಮಕ್ಕಳು ಯಾವಾಗಲೂ ದುಡಿದು ಬಂದ ಮೇಲೇ ಕಷ್ಟ ಅನಿಸೋದಿಲ್ಲ. ಕಷ್ಟ ಯಾವಾಗ ಅನಿಸುತ್ತೇ ಅಂದರೆ ಮನೆಯವರು ಉಲ್ಟಾ ಸೀದಾ ಮಾತಾಡಿದಾಗ ಮಾತ್ರ!

ಪ್ರೀತಿಯು ಹೃದಯದಿಂದ ಹುಟ್ಟಿದಾಗ ಮಾತ್ರ ಅದು ಶಾಶ್ವತ. ಅದು ಬಲವಂತದಿಂದ ಹುಟ್ಟಿದರೆ ಅದು ಕ್ಷಣಿಕ!

ನಗುತ್ತಿರು ಮನವೇ, ನೋವು ಹೊಸದಲ್ಲ, ಬದುಕು ಶಾಶ್ವತವಲ್ಲ!

**– ಗೀತಾ ಭಾಸ್ಕರ್,** ಬೆಂಗಳೂರು.

## 16–8–2025 ದಿನ ಭವಿಷ್ಯ



**ಮೇಷ:** ಆಧ್ಯಾತ್ಮಿಕ ಜೀವನದ ಪೂರ್ವಾಪೇಕ್ಷಿತವಾಗಿರುವಂತಹ ನಿಮ್ಮ ಮಾನಸಿಕ ಆರೋಗ್ಯವನ್ನು ಕಾಯ್ದುಕೊಳ್ಳಿ. ಒಳ್ಳೆಯದೂ ಹಾಗೂ ಕೆಟ್ಟದೆಲ್ಲವೂ ಮನಸ್ಸಿನ ಮೂಲಕವೇ ಬರುವುದರಿಂದ ಬುದ್ಧಿ ಜೀವನದ ಹೆಬ್ಬಾಗಿಲಾಗಿದೆ. ಇದು ಜೀವನದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಹಾಯ ಮಾಡುತ್ತದೆ ಮತ್ತು ಅಗತ್ಯವಿರುವ ಬೆಳಕನ್ನು ನೀಡುತ್ತದೆ.

**ವೃಷಭ:** ಆರೋಗ್ಯ ವಿಷಯಗಳಲ್ಲಿ ನಿಮ್ಮ ಬಗ್ಗೆ ನೀವೇ ನಿರ್ಲಕ್ಷ್ಯ ಮಾಡದಂತೆ ಎಚ್ಚರಿಕೆ ವಹಿಸಿ. ನೀವು ಹಣಕಾಸಿನ ಲಾಭ ತರುವ ಅದ್ಭುತವಾದ ಹೊಸ ಕಲ್ಪನೆಗಳನ್ನು ಪ್ರಸ್ತುತಪಡಿಸುತ್ತೀರಿ. ಮನೆಯ ಸದಸ್ಯರೊಬ್ಬರ ವರ್ತನೆಯಿಂದ ನೀವು ತೊಂದರೆಗೊಳಗಾಗಬಹುದು. ನೀವು ಅವರೊಂದಿಗೆ ಮಾತನಾಡುವ ಅಗತ್ಯವಿದೆ.

**ಮಿಥುನ:** ನಿಮ್ಮ ದೈಹಿಕ ಬಲವನ್ನು ನಿರ್ವಹಿಸಲು ನೀವು ಕ್ರೀಡೆಯಲ್ಲಿ ಸಮಯ ಕಳೆಯುವ ಸಾಧ್ಯತೆಗಳಿವೆ. ಇಂದು ಯಾವುದೇ ಸಹಾಯವಿಲ್ಲದೆ, ನೀವು ಹಣವನ್ನು ಗಳಿಸುವಲ್ಲಿ ಸಾಮರ್ಥ್ಯರಾಗಿರುತ್ತೀರಿ. ಮನೆಯಲ್ಲಿ ಸಮಸ್ಯೆಗಳು ಉದ್ಭವವಾಗುವಂತೆ ತೋರುತ್ತಿರುವುದರಿಂದ ನಿಮ್ಮ ಮಾತುಗಳ ಬಗ್ಗೆ ಎಚ್ಚರ ವಹಿಸಿ. ವೈಯಕ್ತಿಕ ಮಾರ್ಗದರ್ಶನ ನಿಮ್ಮ ಸಂಬಂಧವನ್ನು ಸುಧಾರಿಸುತ್ತದೆ.

**ಕರ್ಕಾಟಕ:** ದೈಹಿಕ ಲಾಭಕ್ಕಾಗಿ ವಿಶೇಷವಾಗಿ ಮಾನಸಿಕ ದೃಢತೆಗಾಗಿ ಧ್ಯಾನ ಮತ್ತು ಯೋಗ ಪ್ರಾರಂಭಿಸಿ. ವ್ಯಾಪರದಲ್ಲಿ ಪ್ರಯೋಜನ ಇಂದು ಅನೇಕ ವ್ಯಾಪಾರಿಗಳ ಮುಖದ ಮೇಲೆ ಸಂತೋಷವನ್ನು ತರಬಹುದು. ಕೌಟುಂಬಿಕ ಜೀವನ ಸರಾಗವಾಗಿ ನಡೆಯುತ್ತಿರುವಂತೆ ತೋರುತ್ತದೆ ಮತ್ತು ನಿಮ್ಮ ಯೋಜನೆಗಳಿಗೆ ಪೂರ್ಣ ಬೆಂಬಲವನ್ನು ನೀವು ನಿರೀಕ್ಷಿಸಬಹುದು.

**ಸಿಂಹ:** ಬಿಡುವಿರದ ಕಾರ್ಯಕ್ರಮದ ಹೊರತಾಗಿಯೂ ಆರೋಗ್ಯ ಚೆನ್ನಾಗಿರುತ್ತದಾದರೂ ನಿಮ್ಮ ಬದುಕನ್ನು ಲಘುವಾಗಿ ತೆಗೆದುಕೊಳ್ಳಬೇಡಿ ಹಾಗೂ ಜೀವನದ ರಕ್ಷಣೆ ನಿಮ್ಮ ನಿಜವಾದ ಹೊಣೆಗಾರಿಕೆಯೆಂದು ಅರ್ಥ ಮಾಡಿಕೊಳ್ಳಿ. ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಲಾಭದಾಯಕವಾಗಬಹುದು. ನೀವು ಪ್ರೀತಿಯಲ್ಲಿ ನಿಧಾನವಾಗಿ ಆದರೆ ಸ್ಥಿರವಾಗಿ ಉರಿಯಬಹುದು.

ಕನ್ಯಾ: ನಿಮ್ಮ ಹಾಸ್ಯಪ್ರಜ್ಞೆ ಇನ್ನೊಬ್ಬರಿಗೆ ಸಂತೋಷ ವಸ್ತುಗಳನ್ನು ಹೊಂದುವುದರಲ್ಲದೇ ನಮ್ಮೊಳಗೇ ಇದೆಯೆಂದು ಅರ್ಥ ಮಾಡಿಸುವುದರಿಂದ ಅವರು ಸ್ವತಃ ಈ ಕೌಶಲ್ಯವನ್ನು ಹೊಂದಲು ಪ್ರೋತ್ಸಾಹಿಸಿದಂತಾಗುತ್ತದೆ. ಇಂದಿನವರೆಗೂ ಹಣವನ್ನು ಯೋಚಿಸದೆ ಖರ್ಚು ಮಾಡುತ್ತಿದ್ದ ಜನರು, ಅವರಿಗೆ ಇಂದು ಹಣದ ತುಂಬಾ ಅಗತ್ಯವಿರಬಹುದು.

ತುಲಾ: ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ಹೊಸ ಒಪ್ಪಂದಗಳು ಲಾಭದಾಯಕವೆಂದು ಕಂಡರೂ ಬಯಸಿದ ಲಾಭ ತರುವುದಿಲ್ಲ – ಹಣವನ್ನು ಹೂಡುವ ಪ್ರಶ್ನೆ ಬಂದಾಗ ಆತುರದ ನಿರ್ಧಾರಗಳನ್ನು ಮಾಡಬೇಡಿ. ಇಂದು ನೀವು ವಿಷಯಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು.

**ವೃಶ್ಚಿಕ:** ಪ್ರಕೃತಿಯು ನಿಮ್ಮಲ್ಲಿ ಗಮನಾರ್ಹ ವಿಶ್ವಾಸ ಮತ್ತು ಬುದ್ಧಿವಂತಿಕೆಯನ್ನಿರಿಸಿದೆ – ಅದನ್ನು ಸಾಧ್ಯವಾದಷ್ಟೂ ಬಳಸಿಕೊಳ್ಳಿ. ಯಾವುದೇ ಸಮಯದಲ್ಲಿ ಹಣದ ಅಗತ್ಯವಿರುತ್ತದೆ ಆದ್ದರಿಂದ ಇಂದು ಸಾಧ್ಯವಾದಷ್ಟು ನಿಮ್ಮ ಹಣವನ್ನು ಸಂಗ್ರಹಿಸುವ ಬಗ್ಗೆ ಆಲೋಚಿಸಿ. ನಿಮ್ಮ ನಿರ್ಲಕ್ಷತನದ ಮತ್ತು ಊಹಿಸಲಾಗದ ವರ್ತನೆಯಿಂದ ನಿಮ್ಮ ಜೊತೆಗಿರುವ ಯಾರಾದರೂ ಬೇಸರಗೊಳ್ಳಬಹುದು.

**ಧನು:** ಆರೋಗ್ಯ ಪರಿಪೂರ್ಣವಾಗಿರುತ್ತದೆ. ಯಾವುದೇ ಅಪರಿಚಿತ ವ್ಯಕ್ತಿಯ ಸಲಹೆಯಿಂದ ಎಲ್ಲಾದರೂ ಹೂಡಿಕೆ ಮಾಡಿರುವ ಜನರಿಗೆ, ಇಂದು ಆ ಹೂಡಿಕೆಯಿಂದ ಪ್ರಯೋಜನವನ್ನು ಪಡೆಯುವ ಪೂರ್ತಿಸಾಧ್ಯತೆ ಇದೆ. ಜನರು ನಿಮಗೆ ಹೊಸ ಭರವಸೆ ಹಾಗೂ ಕನಸುಗಳನ್ನು ನೀಡುತ್ತಾರೆ ಇದು ನಿಮ್ಮ ಸ್ವಸಾಮರ್ಥ್ಯವನ್ನು ಅವಲಂಬಿಸಿರುತ್ತದೆ.

**ಮಕರ:** ಒಂದು ಲಾಭಕರ ದಿನ ಮತ್ತು ನೀವು ಧೀರ್ಘಕಾಲದ ಅನಾರೋಗ್ಯಕ್ಕೆ ಪರಿಹಾರ ಹುಡುಕಲು ಸಾಧ್ಯವಾಗಬಹುದು. ನಿಮ್ಮ ಹಿಂದಿನ ಸಾಲವನ್ನು ಇಂದಿನವರೆಗೂ ಮರುಪಾವತಿ ಮಾಡದೇ ಇರುವ ನಿಮ್ಮ ಸಂಬಂಧಿಕರಿಗೆ ಇಂದು ಸಾಲ ಕೊಡಬಾರದು. ಕೆಲವರು ಅವರಿಗೆ ಸಾಧ್ಯವಿರುವುದಕ್ಕಿಂತ ಹೆಚ್ಚು ನೀಡುವ ಭರವಸೆ ನೀಡುತ್ತಾರೆ. ಈ ದಿನ ನಿಮ್ಮ ವೈವಾಹಿಕ ಜೀವನದಲ್ಲಿ ನಿಜಕ್ಕೂ ಅದ್ಭುತವಾಗಿದೆ.

**ಕುಂಭ:** ಇಂದು ನೀವು ಆರಾಮವಾಗಿರುವ ಭಾವನೆ ಹೊಂದಿರುತ್ತೀರಿ ಮತ್ತು ಆನಂದಿಸಲು ಸೂಕ್ತ ಮನೋಭಾವದಲ್ಲಿರುತ್ತೀರಿ. ನೀವು ಸಾಲ ತೆಗೆದುಕೊಳ್ಳಲು ಹೊರಟಿದ್ದರೆ ಮತ್ತು ಈ ಕೆಲಸದಲ್ಲಿ ದೀರ್ಘಕಾಲ ತೊಡಗಿಸಿಕೊಂಡಿದ್ದರೆ, ಇಂದು ನೀವು ಸಾಲ ಪಡೆಯಬಹುದು. ನಿಮಗೆ ಗೊತ್ತಿದ್ದ ಯಾರಾದರೂ ಹಣಕಾಸಿಗೆ ಸಂಬಂಧಿಸಿದ ವಿಷಯಗಳಿಗೆ ಅತಿಯಾಗಿ ಪ್ರತಿಕ್ರಿಯಿಸಬಹುದು.

**ಮೀನ:** ಲೆಕ್ಕವಿಲ್ಲದಷ್ಟು ಗಾಬರಿಗಳು ನಿಮ್ಮ ಪ್ರತಿರೋಧಕತೆ ಮತ್ತು ಆಲೋಚನಾ ಶಕ್ತಿಯನ್ನು ದುರ್ಬಲಗೊಳಿಸಬಹುದು. ಸಕಾರಾತ್ಮಕ ಚಿಂತನೆಯ ಜೊತೆ ಈ ರೋಗದ ವಿರುದ್ಧ ಹೋರಾಡಲು ಪ್ರಯತ್ನಿಸಿ. ಆರ್ಥಿಕವಾಗಿ ಇಂದು ನೀವು ಸಾಕಷ್ಟು ಬಲವಾಗಿ ಕಾಣುವಿರಿ, ಗ್ರಹ ಮತ್ತು ನಕ್ಷತ್ರಗಳ ಚಲನೆಯಿಂದ ಇಂದು ನಿಮಗಾಗಿ ಹಣವನ್ನು ಸಂಪಾದಿಸುವ ಅನೇಕ ಅವಕಾಶಗಳು ಉಂಟಾಗುತ್ತವೆ.

# ಕಡಲ ತೀರಕ್ಕೆ ಹೊರಟಿತು ಒಂದು ಶ್ವೇತ ನದಿ!

**ಸಮುದ್ರದ ತೀರದಲ್ಲಿ ವಾಸಿಸುವವರು ಉಪ್ಪನ್ನು ಸಂಗ್ರಹಿಸಲು ಮತ್ತು ತಯಾರಿಸಲು ಅನುಮತಿ ನೀಡಲಾಯಿತು. ಆದರೆ 1930ರಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದ ಪ್ರಮುಖ ಬೇಡಿಕೆಯಾದ, ಉಪ್ಪಿನ ಮೇಲೆ ತೆರಿಗೆಯನ್ನು ತೆಗೆದು ಹಾಕುವ ಬೇಡಿಕೆಯನ್ನು ಬ್ರಿಟಿಷರು ಒಪ್ಪಿಕೊಳ್ಳಲಿಲ್ಲ ಮತ್ತು ಆ ತೆರಿಗೆ ನಂತರ ಸುಮಾರು ಒಂದೂವರೆ ದಶಕದ ತನಕವೂ ಮುಂದುವರಿಯಿತು! ಉಪ್ಪಿನ ಸತ್ಯಾಗ್ರಹವು ಪಡೆದ ಪ್ರಚಾರಕ್ಕೆ ಹೋಲಿಸಿದರೆ, 5.3.1931 ರಂದು ನಡೆದ ಒಪ್ಪಂದವು ತುಸು ಎಂದೇ ಹೇಳಬೇಕು. ಇದಕ್ಕೆ ಕಾರಣ ಎನಿಸಿದ ಮೂಲ ವಿದ್ಯಮಾನ ಆರಂಭಗೊಂಡದ್ದು 12.3.1930 ರಂದು.**

ಮಾರ್ಚ್ 5 ನಮ್ಮ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ದಿನ. ಮಹಾತ್ಮಾ ಗಾಂಧಿ ಮತ್ತು ಅಂದಿನ ವೈಸ್‌ರಾಯ್ ಇರ್ವಿನ್ ನಡುವೆ ಆ ದಿನ ಒಂದು ಒಪ್ಪಂದ ನಡೆಯಿತು (1931) ಮತ್ತು ಇದು ಕಾಂಗ್ರೆಸ್ ಮತ್ತು ಬ್ರಿಟಿಷ್ ರಾಜ್ ನಡುವೆ ನಡೆದ ಪ್ರಮುಖ ಒಪ್ಪಂದಗಳಲ್ಲಿ ಒಂದು. ಗಾಂಧಿಜೀವರು ಉಪ್ಪಿನ ಸತ್ಯಾಗ್ರಹವನ್ನು ಆರಂಭಿಸಿ, ಒಂದು ವರ್ಷದ ನಂತರ ಸಹಿ ಹಾಕಲ್ಪಟ್ಟ ಈ ಒಪ್ಪಂದವು ಬಹು ಪ್ರಚಾರಕ್ಕೆ ಒಳಪಟ್ಟಿದೆ.

ಈ ಒಪ್ಪಂದದ ಪ್ರಕಾರ, ಉಪ್ಪಿನ ಸತ್ಯಾಗ್ರಹದ ಸಮಯದಲ್ಲಿ ಬಂಧನಕ್ಕೆ ಒಳಗಾದ ಸಾವಿರಾರು ಸತ್ಯಾಗ್ರಹಿಗಳನ್ನು ಬಿಡುಗಡೆ ಮಾಡಲಾಯಿತು, ಮದ್ಯದ ಅಂಗಡಿಗಳ ಮುಂದೆ ಮತ್ತು ವಿದೇಶಿ ವಸ್ತುಗಳನ್ನು ಮಾರಾಟ ಮಾಡುವ ಮಳಿಗೆಗಳ ಮುಂದೆ ಸತ್ಯಾಗ್ರಹ ನಡೆಸಲು ಅನುಮತಿ ನೀಡಲಾಯಿತು, ಕಾಂಗ್ರೆಸ್ ಮೇಲೆ ಇದ್ದ ನಿಷೇಧವನ್ನು ತೆಗೆದು ಹಾಕಲಾಯಿತು, ಜಪ್ತಿಗೆ ಒಳಪಟ್ಟ ಆಸ್ತಿಗಳನ್ನು ಸತ್ಯಾಗ್ರಹಿಗಳಿಗೆ ವಾಪಸು ನೀಡಲಾಯಿತು,

ಸಮುದ್ರದ ತೀರದಲ್ಲಿ ವಾಸಿಸುವವರು ಉಪ್ಪನ್ನು ಸಂಗ್ರಹಿಸಲು ಮತ್ತು ತಯಾರಿಸಲು ಅನುಮತಿ ನೀಡಲಾಯಿತು. ಆದರೆ 1930ರಲ್ಲಿ ನಡೆದ ಉಪ್ಪಿನ ಸತ್ಯಾಗ್ರಹದ ಪ್ರಮುಖ ಬೇಡಿಕೆಯಾದ, ಉಪ್ಪಿನ ಮೇಲೆ ತೆರಿಗೆಯನ್ನು ತೆಗೆದು ಹಾಕುವ ಬೇಡಿಕೆಯನ್ನು ಬ್ರಿಟಿಷರು ಒಪ್ಪಿಕೊಳ್ಳಲಿಲ್ಲ ಮತ್ತು ಆ ತೆರಿಗೆ ನಂತರ ಸುಮಾರು ಒಂದೂವರೆ ದಶಕದ ತನಕವೂ ಮುಂದುವರಿಯಿತು!

ಉಪ್ಪಿನ ಸತ್ಯಾಗ್ರಹವು ಪಡೆದ ಪ್ರಚಾರಕ್ಕೆ ಹೋಲಿಸಿದರೆ, 5.3.1931ರಂದು ನಡೆದ ಒಪ್ಪಂದವು ತುಸು ಸಪ್ಪೆ ಎಂದೇ ಹೇಳಬೇಕು. ಇದಕ್ಕೆ ಕಾರಣ ಎನಿಸಿದ ಮೂಲ ವಿದ್ಯಮಾನ ಆರಂಭಗೊಂಡದ್ದು 12.3.1930ರಂದು. ಗಾಂಧೀಜಿಯವರ ನೇತೃತ್ವದಲ್ಲಿ ಅಂದು ಆರಂಭಗೊಂಡ ಉಪ್ಪಿನ ಸತ್ಯಾಗ್ರಹವು 6.4.1930ರ ತನಕ ಮುಂದುವರಿಯಿತು. ಸಂಪೂರ್ಣ ಅಹಿಂಸೆಯ ತತ್ವದಲ್ಲಿ ಈ ಒಂದು ಹೋರಾಟವನ್ನು ರೂಪಿಸಿದವರು, ನಾಯಕತ್ವ ವಹಿಸಿದವರು, ಮುನ್ನಡೆಸಿದವರು ಮಹಾತ್ಮಾ ಗಾಂಧಿಯವರು. ಉಪ್ಪಿನ ಮೇಲಿನ ತೆರಿಗೆಯನ್ನು ತೆಗೆಯಬೇಕು ಎಂದು ಬ್ರಿಟಿಷರನ್ನು ಒತ್ತಾಯಿಸುವುದರ ಜತೆಯಲ್ಲೇ, ಅಸಹಕಾರ ಮತ್ತು ಕರ ನಿರಾಕರಣೆಯೂ ಈ ಹೋರಾಟದ ಭಾಗವಾಗಿತ್ತು. ಜತೆಗೆ, 387 ಕಿ.ಮೀ. ಪಾದಯಾತ್ರೆ ಈ ಸತ್ಯಾಗ್ರಹದ ಪ್ರಮುಖ ಮತ್ತು ಎಲ್ಲರ ಗಮನ ಸೆಳೆದ ಅಂಶ.

ಗಾಂಧೀಜಿಯವರು ವಾಸವಿದ್ದ ಸಾಬರಮತಿ ಆಶ್ರಮದಿಂದ, ದಂಡಿ ಅಥವಾ ನವಸಾರಿ ಎಂಬಲ್ಲಿಗೆ ನಡೆದು ಸಾಗುವುದು ಮತ್ತು ದಾರಿಯುದ್ದಕ್ಕೂ ಜನರನ್ನು ಒಗ್ಗೂಡಿಸುವುದು ಈ ಯಾತ್ರೆಯ ಮುಖ್ಯ ಅಜೆಂಡಾ. ಗುಜರಾತ್‌ನಲ್ಲಿದ್ದ ಧರಾಸನಾ ಉಪ್ಪಿನ ಕಾರ್ಖಾನೆಗಳಿರುವ ಜಾಗದ ತನಕ ಸಾಗಿ, ಅಲ್ಲಿ ಪ್ರತಿಭಟನೆ ನಡೆಸಿ, ನಂತರ ಸತ್ಯಾಗ್ರಹವನ್ನು ನಿಲ್ಲಿಸುವುದು ಎಂದು ಗಾಂಧೀಜಿಯವರ ಮೊದಲ ಯೋಚನೆ; ಆದರೆ ಕೊನೆಯಲ್ಲಿ ಅವರನ್ನು ಬಂಧಿಸಿದ್ದರಿಂದ, ಕಾಂಗ್ರೆಸ್‌ನ ಇತರ ಕಾರ್ಯಕರ್ತರು ಆ ಯಾತ್ರೆಯನ್ನು ಮುಂದುವರಿಸಿದರು.

ಈ ಸತ್ಯಾಗ್ರಹದ ಸಮಯದಲ್ಲಿ ಸುಮಾರು 60000 ಜನರನ್ನು ಬ್ರಿಟಿಷ್ ಆಡಳಿತ ಬಂಧಿಸಿತು, ಅಲ್ಲಲ್ಲಿ ಕೆಲವು ಕಾರ್ಯಕರ್ತರು ಮೃತಪಟ್ಟರು. ಬ್ರಿಟಿಷರ ವಿರುದ್ಧ ನಮ್ಮ ದೇಶದ ಹೋರಾಟದ ವಿವರಗಳು ಜಗತ್ತಿಗೆ ಪ್ರಚುರಗೊಳ್ಳುವಲ್ಲಿ ಈ ಸತ್ಯಾಗ್ರಹದ ಪಾತ್ರ ಹಿರಿದು.

ಕಾಂಗ್ರೆಸ್ ಪಕ್ಷವು ಪೂರ್ಣ ಸ್ವರಾಜ್ಯಕ್ಕೆ ಕರೆ ನೀಡಿದ್ದು 26.1.1930ರಂದು; ಅದರ ನೆನಪಿಗಾಗಿ, 1947ರ ತನಕ ಜನವರಿ 26 ರಂದು ಸಾಂಕೇತಿಕವಾಗಿ ಸ್ವಾತಂತ್ರ್ಯ ದಿನವನ್ನು ಆಚರಿಸಲಾಗುತ್ತಿತ್ತು! ಪೂರ್ಣ ಸ್ವರಾಜ್ಯಕ್ಕೆ ಕರೆ ನೀಡಿದ ನಂತರ, ಆ ನಿಟ್ಟಿನಲ್ಲಿ ಹೋರಾಟ ಮುಂದುವರಿಸಲು ಗಾಂಧೀಜಿಯವರಿಗೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಜವಾಬ್ದಾರಿಯನ್ನು ನೀಡಿತು. ಅಸಹಕಾರ ಚಳವಳಿಯನ್ನು ಸೂಚಿಸಿದ ಗಾಂಧೀಜಿಯವರ ಸಲಹೆಯನ್ನುಕಾಂಗ್ರೆಸ್ ಒಪ್ಪಿ, ಆ ಕುರಿತು ಯೋಚನೆ ಮುಂದುವರಿದಾಗ, ಉಪ್ಪಿನ ಮೇಲಿನ ತೆರಿಗೆಯ ವಿರುದ್ಧ ಹೋರಾಟವನ್ನು ಮುಂದುವರಿಸಿದರೆ, ಭಾರತದ ಜನಸಾಮಾನ್ಯರ ಬೆಂಬಲ ಪಡೆಯಬಹುದು ಎಂಬ ಯೋಚನೆ ಗಾಂಧೀಜಿಯವರದ್ದು.

### ಇದರ ವಿಶೇಷವೆಂದರೆ....

- ಇವರ ಹೇಳಿಕೆಗಳನ್ನು ಕೇಳಿಸಿಕೊಳ್ಳಲು ಎಲ್ಲಾ ಪತ್ರಿಕಾ ಪ್ರತಿನಿಧಿಗಳಿಗೂ ಅವಕಾಶವಿತ್ತು; ಅಂದು ಸಂಪೂರ್ಣವಾಗಿ ಬ್ರಿಟಿಷರ ವಶದಲ್ಲಿದ್ದ ಪತ್ರಿಕಾ ರಂಗವು ಗಾಂಧೀಜಿಯವರ ಹೇಳಿಕೆಗಳನ್ನು ದೊಡ್ಡದಾಗಿ ಪ್ರಕಟಿಸುತ್ತಿದ್ದವು.
- ಜತೆಗೆ, ಅಮೆರಿಕ ಮತ್ತು ಯುರೋಪಿನ ಹಲವು ಪತ್ರಿಕಾ ಪ್ರತಿನಿಧಿಗಳು ಗಾಂಧೀಜಿಯವರನ್ನು ಭೇಟಿ ಮಾಡಲು ಬ್ರಿಟಿಷ್ ಸರಕಾರ ಅನುಮತಿ ನೀಡಿತ್ತು.
- ಬಹುಷಃ, ಇಂತಹ ಅಹಿಂಸಾತ್ಮಕ ಹೋರಾಟಕ್ಕೆ ಪ್ರಚಾರ ದೊರಕಿದರೆ, ತನ್ನ ನಿರಂತರ ಆಡಳಿತಕ್ಕೆ ಲಾಭವೇ ಹೊರತು ನಷ್ಟವಿಲ್ಲ ಎಂದು ಬ್ರಿಟಿಷ್ ಸರಕಾರ ಯೋಚಿಸಿತ್ತು, ಆದ್ದರಿಂದಲೇ ಗಾಂಧೀಜಿಯವರ ಪತ್ರಿಕಾ ಹೇಳಿಕೆ, ವಿದೇಶಿ ಪತ್ರಕರ್ತರ ಸಂದರ್ಶನ, ಯಾತ್ರೆಯ ಚಲನಚಿತ್ರೀಕರಣಗಳಿಗೆ ಬ್ರಿಟಿಷ್ ಅಧಿಕಾರಶಾಹಿಯು ಅನುಮತಿ ಮತ್ತು ಅವಕಾಶ ನೀಡಿತ್ತು ಎನಿಸುತ್ತದೆ.
- ಆಗಿನ ದಿನಗಳಲ್ಲಿ ಎಲ್ಲಾ ಪತ್ರಿಕೆಗಳು, ಮಾಧ್ಯಮಗಳು ಬ್ರಿಟಿಷರ ಅನುಮತಿಯ ಮೇರೆಗೆ ಸುದ್ದಿ ಪ್ರಕಟಿಸುತ್ತಿದ್ದವು.
- ಈ ಯಾತ್ರೆಯ ಪ್ರಚಾರ ಹೇಗಿತ್ತೆಂದರೆ, ಪ್ರತಿ ದಿನ ಯಾವ ಹಳ್ಳಿಯಲ್ಲಿ ತಂಡ ತಂಗುತ್ತದೆ ಎಂಬ ವಿವರವೂ ಸಹ ಅಂತಾರಾಷ್ಟ್ರೀಯ ಮಟ್ಟದ ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದವು.
- ದುಬಾರಿ ವಿದೇಶಿ ಕ್ಯಾಮೆರಾಗಳೊಂದಿಗೆ ವಿದೇಶಿ ಪತ್ರಕರ್ತರು ಸಾಬರಮತಿ ಮತ್ತು ದಂಡಿಯಲ್ಲಿ ಬೀಡುಬಿಟ್ಟಿದ್ದರು.

ಜನಸಾಮಾನ್ಯರು, ಕಡು ಬಡವರು ಅಗತ್ಯವಾಗಿ ಸೇವಿಸುತ್ತಿದ್ದ ಉಪ್ಪಿನ ಮೇಲೆ ಅಧಿಕ ತೆರಿಗೆಯನ್ನು ವಿಧಿಸಿ, ಬ್ರಿಟಿಷರು ಅಪಾರ ಧನ ಸಂಗ್ರಹ ಮಾಡುತ್ತಿದ್ದರು. ಅದರಲ್ಲೂ ಮುಖ್ಯವಾಗಿ, ಬಿಸಿಲಿನ ಬೇಗೆ ಜಾಸ್ತಿಯಾಗಿರುವ ನಮ್ಮ ದೇಶದಲ್ಲಿ ನಿರ್ಜಲೀಕರಣವನ್ನು ತಡೆಯಲು ಎಲ್ಲರೂ ಉಪ್ಪನ್ನು ತಕ್ಕ ಪ್ರಮಾಣದಲ್ಲಿ ನಿರಂತರವಾಗಿ ಸೇವಿಸಬೇಕು; ಅದರ ಮೇಲೆ ತೆರಿಗೆ ವಿಧಿಸಿ, ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ ಉಪ್ಪನ್ನು ಸಾಗಿಸುವಾಗ ಅಧಿಕ ಮೊತ್ತದ ತೆರಿಗೆಯನ್ನು ಬ್ರಿಟಿಷರು ಸಂಗ್ರಹಿಸುತ್ತಿದ್ದರು.

ಇದೊಂದು ಕ್ರೂರ ತೆರಿಗೆ ಎಂದು ಹಲವು ಅಧಿಕಾರಿಗಳು, ಯುರೋಪಿನ ತಜ್ಞರು ಹೇಳಿದ್ದರೂ, ತೆರಿಗೆ ಸಂಗ್ರಹ ನಿಂತಿರಲಿಲ್ಲ. ಇಪ್ಪತ್ತನೆಯ ಶತಮಾನದ ಮೊದಲ ಭಾಗದಲ್ಲಿ ಬ್ರಿಟಿಷರು ಭಾರತದಿಂದ ಸಂಗ್ರಹಿಸುತ್ತಿದ್ದ ಧನದಲ್ಲಿ, ಶೇ.10ರಷ್ಟು ಉಪ್ಪಿನ ತೆರಿಗೆಯಿಂದಲೇ ಬರುತ್ತಿತ್ತು!

ನಮ್ಮ ದೇಶದ ಭಾಗಗಳನ್ನು ಒಂದೊಂದಾಗಿ ವಶಕ್ಕೆ ಪಡೆದ ನಂತರ, ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಯು, ಮೊದಮೊದಲು ನಡೆಸಿದ ಲೂಟಿಗಳಲ್ಲಿ ಈ ಉಪ್ಪಿನ ಮೇಲಿನ ತೆರಿಗೆಯೂ ಒಂದು. ರಾಬರ್ಟ್ ಕ್ಲೈವ್‌ನು ಬಂಗಾಳದಲ್ಲಿ ಅಧಿಕ ಪ್ರಮಾಣದ ಉಪ್ಪಿನ ತೆರಿಗೆಯನ್ನು ಸಂಗ್ರಹಿಸಿ, ಅದರ ದೊಡ್ಡ ಭಾಗವನ್ನು ಇಂಗ್ಲೆಂಡಿನ ಅಧಿಕಾರ ಶಾಹಿಗೆ ನೀಡಿ, ಅವರನ್ನು ಸಂಪ್ರೀತಗೊಳಿಸುತ್ತಿದ್ದ. ಹಣ ಪಡೆದ ಬ್ರಿಟಿಷ್ ಅಧಿಕಾರ ಶಾಹಿಯು, ಈಸ್ಟ್ ಇಂಡಿಯಾ ಕಂಪೆನಿಯ ಇಂತಹ ಕ್ರೂರ ಪದ್ಧತಿಗಳಿಗೆ ಸಮ್ಮತಿಯನ್ನೂ ನೀಡುತ್ತಿತ್ತು.

ಜತೆಗೆ, ಉಪ್ಪಿನ ಮೇಲಿನ ತೆರಿಗೆಯು ಅವರ ಆದಾಯದ ಪ್ರಮುಖ ಸೆಲೆಯಾಗಿದ್ದರಿಂದಲೇ, 1857ರ ನಂತರವೂ, ಅಂದರೆ ಬ್ರಿಟನ್ ರಾಣಿಯ ಆಧಿಪತ್ಯದ ನಂತರವೂ, ಉಪ್ಪಿನ ತೆರಿಗೆ ಮುಂದುವರಿಯಿತು. ಸಮುದ್ರ ತೀರದ ಪ್ರಾಂತ್ಯ ಮತ್ತು ರಾಜ್ಯಗಳಿಂದ ಉಪ್ಪನ್ನು ಸಲೀಸಾಗಿ ಒಳನಾಡಿಗೆ ಸಾಗಿಸದೇ ಇರುವಂತೆ ತಡೆಯಲು, 2500 ಕಿ.ಮೀ. ಉದ್ದದ ಮುಳ್ಳಿನ ಗಿಡಗಳ ಬೇಲಿಯನ್ನು ನಿರ್ಮಿಸಿ (ಉದಾ ಪಾಪಾಸು ಕಳ್ಳಿ), ಅದನ್ನು ಕಾಯಲು 12000ಕ್ಕೂ ಅಧಿಕ ಸಿಬ್ಬಂದಿ ನೇಮಿಸಿ, ನಿರ್ದಾಕ್ಷಿಣ್ಯವಾಗಿ ತೆರಿಗೆ ಸಂಗ್ರಹಿಸುತ್ತಿದ್ದರು!

ಈ ಮುಳ್ಳು ಬೇಲಿಯ ಕಥೆಯೇ ಭಯಾನಕ, ಕ್ರೂರ. ನಮ್ಮ ದೇಶದಲ್ಲಿ ಉಪ್ಪಿನ ಮೇಲೆ ಅಧಿಕ ತೆರಿಗೆ ಸಂಗ್ರಹವನ್ನು ಕಾನೂನುಬದ್ಧಗೊಳಿಸಲು, ಬ್ರಿಟಿಷ್ ಸರಕಾರವು ಉಪ್ಪಿನ ಅಧಿನಿಯಮ 1882ನ್ನು ಜಾರಿಗೆ ತಂದಿತ್ತು!

ಬ್ರಿಟಿಷ್ ರಾಜ್ ಆಡಳಿತದ ಉದ್ದಕ್ಕೂ, ನಮ್ಮ ದೇಶದಿಂದ ಪಡೆದ ಒಟ್ಟು ಆದಾಯದ ಶೇ.8.2ರಷ್ಟು ಉಪ್ಪಿನ ತೆರಿಗೆಯಿಂದ ಬಂದಿತ್ತು. ಒಂದು ಪ್ರಾಂತ್ಯದಿಂದ ಇನ್ನೊಂದು ಪ್ರಾಂತ್ಯಕ್ಕೆ ಉಪ್ಪು ಸಾಗಿಸಲು ಅಧಿಕ ತೆರಿಗೆ ನೀಡಬೇಕಾಗಿತ್ತು. ಒಳನಾಡಿನಲ್ಲಿ ಉಪ್ಪನ್ನು ಖರೀದಿಸುತ್ತಿದ್ದ ಬಡವರಿಗೆ ಇದೊಂದು ದೊಡ್ಡ ಹೊರೆಯಾಗಿತ್ತು.

ಇವೆಲ್ಲಾ ಅರಿವಿದ್ದ ಗಾಂಧೀಜಿಯವರು, ಅಸಹಕಾರ ಚಳವಳಿಯ ಪ್ರಮುಖ ಭಾಗವಾಗಿ, ಉಪ್ಪಿನ ತೆರಿಗೆ ಇಳಿಸುವಂತೆ ಬ್ರಿಟಿಷರನ್ನು ಒತ್ತಾಯಿಸಲು, ತಮ್ಮ ಹೋರಾಟವನ್ನು ರೂಪಿಸಿದರು.



1930ರ ಮಾರ್ಚ್ 12ರಿಂದ ಎಪ್ರಿಲ್ 6ರ ತನಕ ನಡೆದ ಆ ಅಭೂತಪೂರ್ವ 387 ಕಿ.ಮೀ. ಯಾತ್ರೆಯು, ಕಾಂಗ್ರೆಸ್‌ನ ಹೋರಾಟದ ಉನ್ನತ ಕ್ಷಣಗಳಲ್ಲಿ ಒಂದು. ಈ ರೀತಿ ಒಂದು ಪಾದಯಾತ್ರೆಯನ್ನು ನಡೆಸುತ್ತೇವೆ, ಅದು ಸಂಪೂರ್ಣ ಅಹಿಂಸಾತ್ಮಕವಾಗಿರಲಿದೆ ಎಂದು ಗಾಂಧೀಜಿಯವರು ಫೆಬ್ರವರಿ 5 ರಿಂದಲೇ ಹೇಳಿಕೆ ನೀಡತೊಡಗಿದರು.

ಸಾಬರಮತಿ ಆಶ್ರಮದಲ್ಲಿ ಆಗಾಗ ಪತ್ರಿಕಾ ಪ್ರತಿನಿಧಿಗಳ ಸಭೆಗಳನ್ನು ಕರೆದು, ತಾನೇಕೆ ಈ ರೀತಿ ಉಪ್ಪಿನ ಸತ್ಯಾಗ್ರಹ ಮಾಡುತ್ತಿದ್ದೇನೆ ಎಂದು ವಿವರಿಸುತ್ತಿದ್ದರು. ಗಾಂಧೀಜಿಯವರ ಪ್ರಾರ್ಥನಾ ಸಭೆಗಳೇ ಅವರ ಪತ್ರಿಕಾಗೋಷ್ಠಿಗಳೂ ಆಗಿದ್ದವು. ಜೀವನ್ಮರಣದ ಹೋರಾಟವೊಂದನ್ನು ನಾವು ಕೈಗೆತ್ತಿಕೊಳ್ಳುತ್ತಿದ್ದೇವೆ. ಇದೊಂದು ಪವಿತ್ರ ಯುದ್ಧ; ಎಲ್ಲಾ ರೀತಿಯ ತ್ಯಾಗಕ್ಕೂ ನಾವು ಸಿದ್ಧರಿದ್ದೇವೆ ಎಂದು ಘೋಷಿಸಿದರು.

ವಿಶೇಷವೆಂದರೆ, ಇವರ ಹೇಳಿಕೆಗಳನ್ನು ಕೇಳಿಸಿಕೊಳ್ಳಲು ಎಲ್ಲಾ ಪತ್ರಿಕಾ ಪ್ರತಿನಿಧಿಗಳಿಗೂ ಅವಕಾಶವಿತ್ತು; ಅಂದು ಸಂಪೂರ್ಣವಾಗಿ ಬ್ರಿಟಿಷರ ವಶದಲ್ಲಿದ್ದ ಪತ್ರಿಕಾ ರಂಗವು ಗಾಂಧೀಜಿಯವರ ಹೇಳಿಕೆಗಳನ್ನು ದೊಡ್ಡದಾಗಿ ಪ್ರಕಟಿಸುತ್ತಿದ್ದವು. ಜತೆಗೆ, ಅಮೆರಿಕ ಮತ್ತು ಯುರೋಪಿನ ಹಲವು ಪತ್ರಿಕಾ ಪ್ರತಿನಿಧಿಗಳು ಗಾಂಧೀಜಿಯವರನ್ನು ಭೇಟಿ ಮಾಡಲು ಬ್ರಿಟಿಷ್ ಸರಕಾರ ಅನುಮತಿ ನೀಡಿತ್ತು.

ಬಹುಷಃ, ಇಂತಹ ಅಹಿಂಸಾತ್ಮಕ ಹೋರಾಟಕ್ಕೆ ಪ್ರಚಾರ ದೊರಕಿದರೆ, ತನ್ನ ನಿರಂತರ ಆಡಳಿತಕ್ಕೆ ಲಾಭವೇ ಹೊರತು ನಷ್ಟವಿಲ್ಲ ಎಂದು ಬ್ರಿಟಿಷ್ ಸರಕಾರ ಯೋಚಿಸಿತ್ತು, ಆದ್ದರಿಂದಲೇ ಗಾಂಧೀಜಿಯವರ ಪತ್ರಿಕಾ ಹೇಳಿಕೆ, ವಿದೇಶಿ ಪತ್ರಕರ್ತರ ಸಂದರ್ಶನ, ಯಾತ್ರೆಯ ಚಲನಚಿತ್ರೀಕರಣಗಳಿಗೆ ಬ್ರಿಟಿಷ್ ಅಧಿಕಾರಶಾಹಿಯು ಅನುಮತಿ ಮತ್ತು ಅವಕಾಶ ನೀಡಿತ್ತು ಎನಿಸುತ್ತದೆ.

ಆಗಿನ ದಿನಗಳಲ್ಲಿ ಎಲ್ಲಾ ಪತ್ರಿಕೆಗಳು, ಮಾಧ್ಯಮಗಳು ಬ್ರಿಟಿಷರ ಅನುಮತಿಯ ಮೇರೆಗೆ ಸುದ್ದಿ ಪ್ರಕಟಿಸುತ್ತಿದ್ದವು. ಈ ಯಾತ್ರೆಯ ಪ್ರಚಾರ ಹೇಗಿತ್ತೆಂದರೆ, ಪ್ರತಿ ದಿನ ಯಾವ ಹಳ್ಳಿಯಲ್ಲಿ ತಂಡ ತಂಗುತ್ತದೆ ಎಂಬ ವಿವರವೂ ಸಹ ಅಂತಾರಾಷ್ಟ್ರೀಯ ಮಟ್ಟದ ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದವು. ದುಬಾರಿ ವಿದೇಶಿ ಕ್ಯಾಮೆರಾಗಳೊಂದಿಗೆ ವಿದೇಶಿ ಪತ್ರಕರ್ತರು ಸಾಬರಮತಿ ಮತ್ತು ದಂಡಿಯಲ್ಲಿ ಬೀಡುಬಿಟ್ಟಿದ್ದರು.


ಉಪ್ಪಿನ ಸತ್ಯಾಗ್ರಹದ ನಾಯಕತ್ವ ವಹಿಸಿ, ಅದರಲ್ಲಿ ಪಾಲ್ಗೊಳ್ಳುವ ಪ್ರಮುಖರನ್ನು ಗಾಂಧೀಜಿಯವರೇ ಸ್ವತಃ ಆಯ್ಕೆ ಮಾಡಿದ್ದರು; ಮತ್ತು ಅವರಲ್ಲಿ ಹೆಚ್ಚಿನವರು ಆಶ್ರಮದವರು ಮತ್ತು ಅಹಿಂಸೆಯ ಸಿದ್ಧಾಂತಗಳನ್ನು ಗಾಂಧೀಜಿಯವರಿಂದ ಸ್ವತಃ ಬೋಧಿಸಲ್ಪಟ್ಟವರು. ಈ ನಡುವೆ 2.3.1930ರಂದು ಅಂದಿನ ವೈಸ್‌ರಾಯ್ ಇರ್ವಿನ್‌ಗೆ ಪತ್ರ ಬರೆದು, ತಾನು ಈ ರೀತಿ ಅಹಿಂಸಾತ್ಮಕ ಹೋರಾಟ ಆರಂಭಿಸಲಿದ್ದೇನೆ, ಇದನ್ನು ನಿಲ್ಲಿಸಬೇಕಾದರೆ, 11 ಬೇಡಿಕೆಗಳಿವೆ ಮತ್ತು ಅದರಲ್ಲಿ ಉಪ್ಪಿನ ಮೇಲಿನ ತೆರಿಗೆಯನ್ನು ತೆಗೆಯುವುದೂ ಒಂದು ಎಂದು ಗಾಂಧೀಜಿ ಹೇಳಿದ್ದರು.

ಆದರೆ ಇರ್ವಿನ್‌ನು ಮೌನವಾಗಿದ್ದನು, ಮಾತ್ರವಲ್ಲ ಈ ಕುರಿತು ಚರ್ಚಿಸಲು ಗಾಂಧೀಜಿಯವರ ಜತೆ ಮಾತನಾಡಲು ಸಹ ನಿರಾಕರಿಸಿದನು. 78 ಆಯ್ದ ಸತ್ಯಾಗ್ರಹಿಗಳೊಂದಿಗೆ 12.3.1930 ರಂದು ಗಾಂಧೀಜಿಯವರು ಸಾಬರಮತಿಯಿಂದ ಹೊರಟರು; ಖಾದಿ ಧರಿಸಿದ್ದ ಸಾವಿರಾರು ಅನುಯಾಯಿಗಳು ಅವರ ಹಿಂದೆ ಸಾಲಾಗಿ ನಡೆದರು. ವಿದೇಶಿ ಪತ್ರಿಕೆಗಳು ಇವರ ಯಾತ್ರೆಯನ್ನು ಒಂದು ಶ್ವೇತ ನದಿ ಹರಿದಂತೆ ಇತ್ತು ಎಂದು ವರ್ಣಿಸಿದವು.

ಸಾಬರಮತಿ ಆಶ್ರಮದಲ್ಲಿ ಈ ಯಾತ್ರೆಯನ್ನು ನೋಡಲು ಸುಮಾರು 1,00,000 ಲಕ್ಷ ಜನ ಸೇರಿದ್ದರೆಂದು, ಬ್ರಿಟಿಷರ ಸಮ್ಮತಿಯ ಮೇರೆಗೆ ಮುದ್ರಣಗೊಳ್ಳುತ್ತಿದ್ದ ದ ಸ್ಟೇಟ್ಸ್‌ಮನ್ ಪತ್ರಿಕೆ ಬರೆದಿತ್ತು. ಇದಕ್ಕಿಂತ ಹೆಚ್ಚು ಜನರು ಸೇರಿದ್ದರೆಂದು ವಿದೇಶಿ ಪತ್ರಿಕೆಗಳು ಬರೆದಿದ್ದವು. ಮೊದಲ ದಿನ 20 ಕಿ.ಮೀ. ನಡೆದು ಹಳ್ಳಿಯೊಂದರಲ್ಲಿ ತಂಗಿದರು; ಅಲ್ಲಿ ನೆರೆದಿದ್ದ 4000 ಜನರನ್ನುದ್ದೇಶಿಸಿ ಗಾಂಧೀಜಿ ಭಾಷಣ ಮಾಡಿ, ಉಪ್ಪಿನ ಮೇಲಿನ ತೆರಿಗೆ ಎಷ್ಟು ಕ್ರೂರ ಎಂಬುದನ್ನು ವಿವರಿಸುತ್ತಲೇ, ಪೂರ್ಣ ಸ್ವರಾಜ್ಯಕಾಗಿ ನಡೆಯುತ್ತಿರುವ ಅಹಿಂಸಾತ್ಮಕ ಹೋರಾಟ ಇದು ಎಂದು ಹೇಳಿದರು.

ಕೊನೆ ಕೊನೆಗೆ ಯಾತ್ರೆಯು ಮೂರು ಕಿ.ಮೀ. ಉದ್ದವಿತ್ತು. ಈ ಯಾತ್ರೆಗೆ ನ್ಯೂಯಾರ್ಕ್ ಟೈಮ್ಸ್ ನೀಡಿದ ಬೆಂಬಲ ವಿಶೇಷವಾದದ್ದು; ಗುಜರಾತ್‌ನ ಕುಗ್ರಾಮಗಳಲ್ಲಿ ಜನರು ನಡೆಸುತ್ತಿದ್ದ ಅಹಿಂಸಾತ್ಮಕ ಹೋರಾಟಕ್ಕೆ ದೂರದ ಅಮೆರಿಕದಿಂದ ಹೊರಬರುವ ಆ ಪತ್ರಿಕೆ ಕವರೇಜ್ ನೀಡಿತ್ತು! ಎಪ್ರಿಲ್ 6 ಮತ್ತು 7 ರಂದು ಎರಡು ಪುಟಗಳ ವಿಶೇಷ ವರದಿಗಳನ್ನು ಪ್ರಕಟಿಸಿತ್ತು.

ಟೈಮ್ ಪತ್ರಿಕೆಯು ವಿಶೇಷ ಕವರೇಜ್ ನೀಡಿತು ಮತ್ತು ನಂತರ, ಆ ವರ್ಷದ ವ್ಯಕ್ತಿಯಾಗಿ ಗಾಂಧೀಜಿಯವರನ್ನು ಆಯ್ಕೆ ಮಾಡಿತ್ತು. ಬ್ರಿಟಿಷರ ವಿರುದ್ಧ ನಡೆಯುತ್ತಿದ್ದ ಹೋರಾಟಗಳಿಗೆ ಅಮೆರಿಕದವರು ಬೆಂಬಲ, ಪ್ರಚಾರ ನೀಡುತ್ತಿದ್ದುದು ವಿಶೇಷ ವಿದ್ಯಮಾನ.



ದಂಡಿಯ ಸಮುದ್ರತೀರಕ್ಕೆ ಎಪ್ರಿಲ್ 5 ರಂದು ಆಗಮಿಸಿದ ಗಾಂಧೀಜಿಯವರು, ಅಲ್ಲಿನ ನೆಲದಲ್ಲಿ ತಯಾರಿಸಿದ್ದ ಒಂದು ಮುಷ್ಟಿ ಉಪ್ಪನ್ನು ಕೈಗೆತ್ತಿಕೊಂಡರು; ಆಗ ಅಲ್ಲಿ ನೆರೆದಿದ್ದ ಛಾಯಾಚಿತ್ರ ಗ್ರಾಹಕರು ತೆಗೆದ ಚಿತ್ರ ಸಾಕಷ್ಟು ಪ್ರಸಿದ್ಧ. ಕೈಯಲ್ಲಿ ಉಪ್ಪನ್ನು ಹಿಡಿದ ಗಾಂಧೀಜಿಯವರು ಇದರ ಮೂಲಕ ನಾನು ಈಗ ಬ್ರಿಟಿಷ್ ಸಾಮ್ರಾಜ್ಯದ ತಳಪಾಯವನ್ನೇ ಅಲುಗಾಡಿಸುತ್ತಿದ್ದೇನೆ ಎಂದು ಘೋಷಿಸಿದರು. ಈ ಹೇಳಿಕೆ ಸಹ ವಿಶ್ವಪ್ರಸಿದ್ಧ; ಆದರೆ, ಈಗ ಗಮನಿಸಿದರೆ, ಬ್ರಿಟಿಷರು ನಮ್ಮ ದೇಶವನ್ನು ತೊರೆಯಲು ಮುಂದಿನ 17 ವರ್ಷ ಕಾಯಬೇಕಾಯಿತು!

ಆ ಮಹಾನ್ ಸತ್ಯಾಗ್ರಹವು, ಅತಿ ಹೆಚ್ಚಿನ ಪ್ರಚಾರ ಪಡೆದರೂ, ವಿದೇಶಗಳಲ್ಲಿ ಭಾರತದ ಪರವಾಗಿ ಸಹಾನುಭೂತಿ ಗಳಿಸಲು ನೆರವಾದರೂ, ಬ್ರಿಟಿಷ್ ಸಾಮ್ರಾಜ್ಯದ ತಳಪಾಯವನ್ನು ಅಲುಗಾಡಿಸಲು ಸಾಧ್ಯವಾಗಲಿಲ್ಲ. ದಂಡಿಯ ಸಮುದ್ರ ತೀರದಲ್ಲಿ ಉಪ್ಪು ನೀರನ್ನು ಕುದಿಸಿ ಉಪ್ಪನ್ನು ತಯಾರಿಸಿದ ಗಾಂಧೀಜಿಯವರ ಕಾರ್ಯವನ್ನು, ದೇಶದುದ್ದಗಲಕ್ಕೂ ಹಳ್ಳಿ ಹಳ್ಳಿಗಳ ಜನರು ಅನುಕರಿಸಿದರು, ಎಲ್ಲೆಲ್ಲೂ ಉಪ್ಪು ತಯಾರಿಸಿದರು. ದಂಡಿಯಿಂದ 40 ಕಿ.ಮೀ. ದೂರದಲ್ಲಿದ್ದ ಧರಾಸನಾ ಉಪ್ಪಿನ ಕಾರ್ಖಾನೆಗೆ ದಾಳಿ ಇಡುತ್ತೇನೆ ಎಂದು ವೈಸ್‌ರಾಯ್ ಇರ್ವಿನ್‌ಗೆ ಪತ್ರ ಬರೆದರು; ಆಗ ಪೊಲೀಸರು, 4.5.1930ರಂದು ಗಾಂಧೀಯವರನ್ನು ಬಂಧಿಸಿದರು.

ಉಪ್ಪಿನ ಕಾರ್ಖಾನೆಗೆ ಲಗ್ಗೆಯಿಟ್ಟ ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ಲಾಠಿಯಿಂದ ಬಡಿದರು; ತಲೆ ಒಡೆದರು, ಹೊಟ್ಟೆ ಮತ್ತು ವೃಷಣಗಳಿಗೆ ತುಳಿದರು; ಕನಿಷ್ಠ ಇಬ್ಬರು ಮೃತಪಟ್ಟರು. ಲಾಠಿಯಿಂದ ಬಡಿಯುತ್ತಿದ್ದ ಪೊಲೀಸರ ಎದುರು ಹೋಗಿ ನಿಲ್ಲುತ್ತಿದ್ದ ಸತ್ಯಾಗ್ರಹಿಗಳನ್ನು ಕಂಡು, ಲಾಠಿ ಏಟು ತಿನ್ನುತ್ತಿದ್ದವರ ನೋವು, ಗಾಯಗಳನ್ನು ಕಂಡು ವಿದೇಶಿ ಪತ್ರಕರ್ತರು ನಿಬ್ಬೆರಗಾದರು! ಏಟು ತಿನ್ನುತ್ತಿರುವ ಸತ್ಯಾಗ್ರಹಿಗಳಿಂದ, ಇಂತಹ ಅಹಿಂಸೆ ಹೇಗೆ ಸಾಧ್ಯ ಎಂದು ಅಚ್ಚರಿಗೊಳಗಾದರು; ಪೊಲೀಸರ ಈ ದಬ್ಬಾಳಿಕೆಯು ಅಮೆರಿಕ ಮತ್ತು ಯುರೋಪಿನ ಪತ್ರಿಕೆಗಳಲ್ಲಿ ವಿವರವಾಗಿ ವರದಿಯಾಯಿತು.

ಈ ಸತ್ಯಾಗ್ರಹದ ಪರಿಣಾಮವಾಗಿ, 5.3.1931ರಂದು, ಅಂದರೆ ಒಂದು ವರ್ಷದ ನಂತರ, ಗಾಂಧಿ ಇರ್ವಿನ್ ಒಪ್ಪಂದ ಜಾರಿಗೆ ಬಂತು. ಅದರ ಪ್ರಕಾರ 90000 ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲಾಯಿತು. ಆದರೆ ಉಪ್ಪಿನ ಮೇಲಿನ ತೆರಿಗೆ ಮುಂದುವರಿಯಿತು. ಸಮುದ್ರ ತೀರದಲ್ಲಿರುವ ವ್ಯಕ್ತಿಗಳು ಉಪ್ಪನ್ನು ಮುಕ್ತವಾಗಿ ತಯಾರಿಸಬಹುದು ಎಂದು ಸರಕಾರ ಅನುಮತಿ ನೀಡಿತೇ ಹೊರತು, ದೇಶದಾದ್ಯಂತ ಉಪ್ಪಿನ ಮೇಲಿನ ತೆರಿಗೆ ರದ್ದುಗೊಳ್ಳಲಿಲ್ಲ.

ಮಾತ್ರವಲ್ಲ, ಆ ತೆರಿಗೆಯು ಮುಂದಿನ 17 ವರ್ಷ ಮುಂದುವರಿಯಿತು! ಕೊನೆಗೆ, 6.4.1946ರಂದು ಗಾಂಧೀಜಿಯವರ ಮನವಿಯ ಮೇರೆಗೆ ವೈಸ್‌ರಾಯ್ ಎಕ್ಸಿಕ್ಯುಟಿವ್ ಕೌನ್ಸಿಲ್‌ನ ಸದಸ್ಯ ರೋಲ್ಯಾಂಡ್ಸ್ ಎಂಬಾತ ಉಪ್ಪಿನ ತೆರಿಗೆ ರದ್ದುಗೊಳಿಸುವ ಆದೇಶ ನೀಡಿದ; ಆದರೆ ವೈಸ್‌ರಾಯ್ ವಾವೆಲ್‌ನು ಅದನ್ನು ತಿರಸ್ಕರಿಸಿದ. ಆ ನಂತರ, ಜವಹರ್‌ಲಾಲ್ ನೆಹರೂ ಅವರು ಮುಖ್ಯಸ್ಥರಾಗಿದ್ದ ಮಧ್ಯಂತರ ಸರಕಾರ (ಇಂಟರಿಮ್ ಗವರ್ನಮೆಂಟ್ ಆಫ್ ಇಂಡಿಯಾ)ವು ಉಪ್ಪಿನ ಮೇಲಿನ ತೆರಿಗೆಯನ್ನು 1947ರಲ್ಲಿ ರದ್ದುಗೊಳಿಸಿತು.

1930ರಲ್ಲಿ ಸಾವಿರಾರು ಜನರು ಲಾಠಿ ಏಟು ತಿಂದ ಉಪ್ಪಿನ ಸತ್ಯಾಗ್ರಹದ ಫಲ ಉಣ್ಣಲು 1947ರ ತನಕ, ಅಂದರೆ ಬ್ರಿಟಿಷರು ನಮ್ಮ ದೇಶವನ್ನು ತೊರೆಯುವ ವರ್ಷದ ತನಕ ಕಾಯಬೇಕಾಯಿತು!


**– ಶಶಿಧರ** ಹಾಲಾಡಿ

## ಜಾಂಡಿಸ್ ಬಂದಾಗ ನಮ್ಮ ಕಣ್ಣು, ಚರ್ಮ ಹಳದಿ ಬಣ್ಣಕ್ಕೆ ತಿರುಗಲು ಕಾರಣವೇನು?

ಕಾಮಾಲೆ ನಾವು ಅಂದು ಕೊಂಡಷ್ಟು ಸಾಮಾನ್ಯ ಕಾಯಿಲೆ ಅಲ್ಲ. ಇದೊಂದು ಯಕೃತ್ತಿನ ಕಾರ್ಯಕ್ಕೆ ಸಂಬಂಧಿತ ಕಾಯಿಲೆಯಾಗಿದ್ದು ಇದನ್ನು ನಿರ್ಲಕ್ಷ್ಯ ಮಾಡದೆಯೇ ಆರೋಗ್ಯ ಕಾಪಾಡಿಕೊಳ್ಳುವುದು ಬಹಳ ಮುಖ್ಯ. ಸಮತೋಲಿತ ಆಹಾರ ಸೇವನೆ, ನಿಯಮಿತ ವ್ಯಾಯಾಮ ಮಾಡುವ ಮೂಲಕ ಯಕೃತ್ತು ಚೆನ್ನಾಗಿರುವಂತೆ ನೋಡಿಕೊಳ್ಳಬಹುದು. ಆದರೆ ಈ ಕಾಮಾಲೆ ರೋಗ ಯಾಕೆ ಬರುತ್ತೆ? ಜಾಂಡಿಸ್ ಬಂದಾಗ ಕಣ್ಣಿನ ಬಿಳಿ ಭಾಗ, ನಮ್ಮ ಚರ್ಮ, ಉಗುರು ಹಳದಿ ಬಣ್ಣಕ್ಕೆ ತಿರುಗುವುದಕ್ಕೆ ಕಾರಣವೇನು ಎನ್ನುವುದನ್ನು ನೋಡೋಣ.

ಕಾಮಾಲೆ ಒಂದು ಸಾಮಾನ್ಯ ಆರೋಗ್ಯ ಸಮಸ್ಯೆ ಅಲ್ಲವೇ ಅಲ್ಲ. ಆದರೆ ದೇಹ ಹಳದಿಯಾದಾಗಲೇ ಇದನ್ನು ಗುರುತಿಸಲಾಗುತ್ತದೆ. ಕಾಮಾಲೆ, ಜಾಂಡಿಸ್ ಅಥವಾ ಹಳದಿ ರೋಗದಿಂದ ಕಣ್ಣು, ಚರ್ಮ ಎಲ್ಲವೂ ಹಳದಿಯಾಗಿ ಗೋಚರಿಸುತ್ತವೆ. ಕೆಲವೊಮ್ಮೆ ಇದನ್ನು ನಿರ್ಲಕ್ಷಿಸುವುದರಿಂದ ನಮ್ಮ ದೇಹಕ್ಕೆ ಅಪಾಯ ಹೆಚ್ಚಾಗಬಹುದು, ಏಕೆಂದರೆ ಇದನ್ನು ಪ್ರಾಥಮಿಕ ಹಂತದಲ್ಲಿಯೇ ಗುರುತಿಸಿ ಗುಣಪಡಿಸಿಕೊಳ್ಳದಿದ್ದರೆ ಇದು ತೀವ್ರ ಹಂತಕ್ಕೆ ತಲುಪುವ ಸಾಧ್ಯತೆ ಇರುತ್ತದೆ. ಹಾಗಾಗಿಯೇ ಮೊದಲು ಇವುಗಳಿಗೆ – ಸರಿಹೊಂದುವ ಮದ್ದನ್ನು ಮಾಡಬೇಕು. ಇದಕ್ಕೆ ನಾಟಿ ಔಷಧಿಯನ್ನೇ ಹೆಚ್ಚು ಆಯ್ಕೆ ಮಾಡುವುದರಿಂದ ಇದರಿಂದ ಆಗುವ ಅಪಾಯ ಕೂಡ ಕಡಿಮೆಯಾಗುತ್ತದೆ. ಜೊತೆಗೆ ಈ ಸಮಯದಲ್ಲಿ ಹೆಚ್ಚಿನ ಆರೈಕೆ, ವಿಶ್ರಾಂತಿ ರೋಗಿಗೆ ಬೇಕಾಗುತ್ತದೆ. ಆದರೆ ನಿಮಗೆ ಗೊತ್ತಾ? ಈ ರೋಗ ಬರುವುದಕ್ಕೆ ಕಾರಣವೇನು? ಯಾಕೆ ಕಾಮಾಲೆ ಅಥವಾ ಜಾಂಡಿಸ್ ಬಂದಾಗ ಕಣ್ಣಿನ ಬಿಳಿ ಭಾಗ, ನಮ್ಮ ಚರ್ಮ, ಉಗುರು ಹಳದಿ ತಿರುಗುತ್ತದೆ? ಈ ಎಲ್ಲಾ ಪ್ರಶ್ನೆಗೆ ಮಾಹಿತಿ ಈ ಲೇಖನದಲ್ಲಿದೆ.

ಸಾಮಾನ್ಯವಾಗಿ ಜಾಂಡಿಸ್ ಎಂಬ ಆರೋಗ್ಯ ಸಮಸ್ಯೆಯ ಬಗ್ಗೆ ತಿಳಿದುಕೊಂಡಾಗ ಮಾತ್ರ, ಅವುಗಳನ್ನು ವಾಸಿ ಮಾಡುವುದು ಹೇಗೆ ಎಂಬುದು ಅರ್ಥವಾಗುತ್ತದೆ. ಹಾಗಾಗಿ ಜಾಂಡಿಸ್ ಬಂದಾಗ ನಮ್ಮ ಕಣ್ಣು ಮತ್ತು ಚರ್ಮವು ಏಕೆ ಹಳದಿ ಬಣ್ಣಕ್ಕೆ ತಿರುಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಿ. ಆರೋಗ್ಯ ತಜ್ಞರು ಹೇಳುವ ಪ್ರಕಾರ, ಕೆಂಪು ರಕ್ತ ಕಣಗಳಲ್ಲಿ ಬಿಲಿರುಬಿನ್ ಕಂಡುಬರುತ್ತದೆ. ಸಾಂದರ್ಭಿಕವಾಗಿ, ದೇಹದಲ್ಲಿ ಕೆಂಪು ರಕ್ತ ಕಣಗಳು ರೂಪುಗೊಂಡು ಸಾಯುತ್ತವೆ. ಯಕೃತ್ತು ಸತ್ತ ಜೀವಕೋಶಗಳನ್ನು ಫಿಲ್ಟರ್ ಮಾಡುತ್ತದೆ. ಅದು ಸಾಧ್ಯವಾಗದಿದ್ದಾಗ, ರಕ್ತದಲ್ಲಿನ ಬಿಲಿರುಬಿನ್ ಪ್ರಮಾಣವು ಹೆಚ್ಚಾಗಲು ಪ್ರಾರಂಭಿಸುತ್ತದೆ. ಇದು ದೇಹದ ಇತರ ಭಾಗಗಳನ್ನು ತಲುಪುತ್ತದೆ. ಆಗ ನಮ್ಮ ದೇಹ ಪೂರ್ತಿ ಹಳದಿ ಬಣ್ಣಕ್ಕೆ ತಿರುಗುತ್ತದೆ. ಇದನ್ನು ಕಾಮಾಲೆ ಎಂದು ಕರೆಯಲಾಗುತ್ತದೆ. ಈ ರೋಗವನ್ನು ರಕ್ತ ಪರೀಕ್ಷೆಯ ಮೂಲಕ ಗುರುತಿಸಬಹುದಾಗಿದೆ.




ಜಾಂಡಿಸ್ ಲಕ್ಷಣಗಳು: ಕಣ್ಣು, ಒಸಡು ಮೂತ್ರ ಮತ್ತು ಚರ್ಮ ಹಳದಿ ಬಣ್ಣಕ್ಕೆ ತಿರುಗುವುದು, ಹಸಿವು ಕಡಿಮೆಯಾಗುವುದು, ವಾಂತಿ ಹೆಚ್ಚಾಗುವುದು, ಏನನ್ನೂ ತಿನ್ನಲು ಇಷ್ಟವಿಲ್ಲದಿರುವುದು, ಹೊಟ್ಟೆ ನೋವು, ದಣಿದ ಭಾವನೆ, ತೂಕ ಇಳಿಕೆ, ಆರಂಭಿಕ ಹಂತದ ವೈರಲ್ ಜ್ವರ, ಶೀತದ ಅನುಭವ, ಕಪ್ಪು ಬಣ್ಣದ ಮಲ. ಇದರಿಂದ ನಮ್ಮನ್ನು ರಕ್ಷಿಸಿಕೊಳ್ಳುವುದು ಹೇಗೆ ಎನ್ನುವುದನ್ನು ತಿಳಿಯೋಣ: ಕಲುಷಿತ ಆಹಾರ ಸೇವನೆ ಮಾಡುವುದನ್ನು ತಪ್ಪಿಸಿ. ಮದ್ಯ ಸೇವಿಸಬಾರದು. ಕಾಯಿಸಿ, ಆರಿಸಿದ ನೀರನ್ನು ಕುಡಿಯಬೇಕು. ಎಣ್ಣೆಯುಕ್ತ ಆಹಾರವನ್ನು ತಪ್ಪಿಸಿ ಜಂಕ್ ಫುಡ್ ನಿಂದ ದೂರವಿರಿ. ತಿನ್ನುವಾಗ ಶುಚಿತ್ವಕ್ಕೆ ವಿಶೇಷ ಗಮನ ಕೊಡಿ. ಯಾವುದೇ ಲಕ್ಷಣಗಳು ಕಂಡುಬಂದರೆ ವೈದ್ಯರನ್ನು ಸಂಪರ್ಕಿಸ ಬೇಕು.

ಜಾಂಡಿಸ್ ಬರುವುದಕ್ಕೆ ಕಾರಣಗಳು: ಹೆಪಟೈಟಿಸ್ ಎ, ಬಿ, ಸಿ, ಡಿ ಮತ್ತು ಇ ನಂತಹ ವೈರಲ್ ಸೋಂಕುಗಳಿಂದ ಈ ಸಮಸ್ಯೆಗಳು ಉಂಟಾಗಬಹುದು. ಪ್ಯಾರಸಿಟಮಾಲ್ ನಂತಹ ಕೆಲವು ಔಷಧಿಗಳ ಮಿತಿಮೀರಿದ ಸೇವನೆಯಿಂದಲೂ ಕೂಡ ಈ ರೀತಿಯ ಸಮಸ್ಯೆ ಕಾಣಿಸಿಕೊಳ್ಳಬಹುದು. ವಿಷಕಾರಿ ಅಣಬೆ, ಇನ್ನಿತರ ವಿಷಕಾರಿ ಪದಾರ್ಥಗಳ ಸೇವನೆಯು ಇದಕ್ಕೆ ಕಾರಣವಾಗಬಹುದು. ಪಿತ್ತರಸ ನಾಳಗಳು ಅಥವಾ ಪಿತ್ತಕೋಶದ ಅಡಚಣೆಯು ಯಕೃತ್ತಿನ ಸಮಸ್ಯೆಗಳನ್ನು ಉಂಟುಮಾಡಬಹುದು.

## ಸರ್ವಜನಾಂಗದ ಶಾಂತಿಯ ತೋಟ

ಭಾರತ ಸರ್ವಜನಾಂಗದ ಶಾಂತಿಯ ತೋಟ
ಸರ್ವಧರ್ಮಗಳ ಸಮನ್ವಯದ ಸ್ನೇಹದ ಕೂಟ
ಜಾತಿ ಧರ್ಮಗಳು ಹಲವಿದ್ದರೂ ಭಾವೈಕ್ಯತೆಯೊಂದೆ
ಭಾಷೆಗಳು ಬೇರೆಯಾದರು ನುಡಿವ ನಾಲಿಗೆಯೊಂದೆ
ಹಿಂದೂ ಮುಸ್ಲಿಂ ಕ್ರೈಸ್ತ ಬೌದ್ಧರೆಲ್ಲರೂ ಒಂದೇ
ರಾಮಾಯಣ ಮಹಾಭಾರತ ಕುರಾನ್ ಮಂತ್ರವೊಂದೆ
ಹುತ್ತಿ ಬಿತ್ತುವ ಬೆಳೆಗೆ ಮಳೆಯ ಹನಿಯೊಂದೆ
ಹಗಲು ರಾತ್ರಿ ಬೆಳಕು ನೀಡೋ ಸೂರ್ಯಚಂದ್ರರೊಂದೆ
ಉಸಿರಾಡುವ ಗಾಳಿ ತಿನ್ನುವ ಅನ್ನವೊಂದೆ
ಮಡಿಮೈಲಿಗೆಯಾದರೆ ಸ್ವಚ್ಛಗೊಳಿಸೋ ಗಂಗೆಯೊಂದೆ
ಸ್ನೇಹ ಪ್ರೀತಿಯ ಬೆಸೆಯುವ ಮನದ ಭಾವವೊಂದೆ
ಕಷ್ಟಕಾಲದಿ ಸಹಾಯಹಸ್ತ ಚಾಚುವ ಭಾರತ ನಾಡೊಂದೆ
ಸರ್ವ ಜನರಿಗೂ ನ್ಯಾಯ ನೀಡುವ ಸಂವಿಧಾನವೊಂದೆ
ಭಾರತಾಂಬೆಗೆ ಕೀರಿಟಪ್ರಾಯ ತ್ರಿವರ್ಣ ಧ್ವಜವೊಂದೆ
ಸರ್ವಧರ್ಮಗಳು ಬೋಧಿಸುವ ನೀತಿಯ ಪಾಠವೊಂದೆ
ಎಲ್ಲರ ಸಂಪ್ರದಾಯಗಳಿಗೂ ಬೆಲೆನೀಡುವ ಪುಣ್ಯಭೂಮಿಯೊಂದೆ
ಹಬ್ಬಗಳು ಬೇರೆಯಾದರು ಶುಭಕೋರುವ ಮನಗಳೊಂದೆ
ಅತಿಥಿ ಸತ್ಕಾರದ ಸಂಸ್ಕೃತಿ ಜಗತ್ತಿಗೆಲ್ಲ ಮಾದರಿಯೊಂದೆ
ಸಾವುನೋವಿಗೆ ಮನಮೀಡಿವ ಹೃದಯಗಳ ನೋವೊಂದೆ
ಸತ್ಯಧರ್ಮವ ಪರಿಪಾಲಿಸುವ ಮೌಲ್ಯದ ಜನರೊಂದೆ
ದೃಷ್ಟತನವ ಖಂಡಿಸುವ ದಿಟ್ಟತನದ ಮನಗಳೊಂದೆ
ತಾಯ್ನೆಲದ ವಿರೋಧಿಗಳ ಹುಟ್ಟಡಗಿಸುವ ಯೋಧರೊಂದೆ
ಸಹಬಾಳ್ವೆಯ ಸಮನ್ವಯದ ಕ್ರಾಂತಿಮಾಡಿದ ಬಸವಣ್ಣನ ನಾಡೊಂದೆ
ಸರ್ವರಿಗೂ ಸಮಾನತೆ ಸ್ವಾತಂತ್ರ್ಯ ನೀಡಿದ
ಭಾರತ ನೆಲವೊಂದೆ

**– ಕಾಡಜ್ಜಿ** ಮಂಜುನಾಥ



# ಬಲಾಢ್ಯ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮುತ್ತಿದೆ ಭಾರತ

## ತಾಲ್ಲೂಕು ಕ್ರೀಡಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ 79ನೇ ಸ್ವಾತಂತ್ರ್ಯೋತ್ಸವದಲ್ಲಿ ಶಾಸಕ ಸಿ.ಎನ್.ಬಾಲಕೃಷ್ಣ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಹಲವಾರು ಮಹಾತ್ಮರ ತ್ಯಾಗ, ಬಲಿದಾನದ ಫಲವಾಗಿ ದೇಶವು ಸರ್ವಸ್ವತಂತ್ರವಾಗಿ, ಅಭಿವೃದ್ಧಿಯಲ್ಲಿ ದಾಪುಗಾಲಿಟ್ಟು, ಪ್ರಪಂಚದಲ್ಲೇ ಬಲ್ಯಾಢ್ಯ ಅರ್ಥಿಕ ಶಕ್ತಿಯಾಗಿ ಹೊರಹೊಮ್ಮುತ್ತಿದೆ. ದೇಶದ ಐಕ್ಯತೆ, ಸಮಗ್ರತೆಗಳನ್ನು ಕಾಪಾಡಿಕೊಂಡು ದೇಶವನ್ನು ಮುನ್ನಡೆಸುವ ಗುರುತರ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ ಎಂದು ಶಾಸಕ ಡಾ.ಸಿ.ಎನ್.ಬಾಲಕೃಷ್ಣ ತಿಳಿಸಿದರು.

ತಾಲ್ಲೂಕು ಹಬ್ಬಗಳ ಆಚರಣೆಯ ಸಮಿತಿ ವತಿಯಿಂದ ಕ್ರೀಡಾಂಗಣದಲ್ಲಿ ಆಚರಿಸಲಾದ 79ನೇ ಸ್ವಾತಂತ್ರ್ಯ ದಿನಾಚರಣೆ ಮಹೋತ್ಸವದಲ್ಲಿ ಮಾತನಾಡಿದ ಅವರು, ಸಂವಿಧಾನದಲ್ಲಿ ನಂಬಿಕೆ ಇಟ್ಟು ಗೌರವ ನೀಡುವುದರೊಂದಿಗೆ ನಮ್ಮ ಕರ್ತವ್ಯ ನಿಭಾಯಿಸಬೇಕಿದೆ. ಐಕ್ಯತೆ ಹಾಗೂ ಸಮಗ್ರತೆಯಿಂದ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಎಲ್ಲರೂ ಕೈಜೋಡಿಸಬೇಕಿದೆ. ದೇಶದಲ್ಲಿ ಹುಟ್ಟಿರುವ ನಾವುಗಳು ಈ ದೇಶಕ್ಕಾಗಿ ಏನನ್ನಾದರೂ ಕೊಡುಗೆ ನೀಡುವಲ್ಲಿ ಮುಂದಾಗಿ ದೇಶದ ಐಕ್ಯತೆ, ಒಗ್ಗಟ್ಟು, ಸಮಗ್ರತೆ ಕಾಪಾಡುವುದು ಪ್ರತಿ ಭಾರತೀಯನ ಕರ್ತವ್ಯವಾಗಿದೆ ಎಂದರು.

ದೇಶವು ಸ್ವಾತಂತ್ರ್ಯ ನಂತರ ಅಭಿವೃದ್ಧಿ ಸಲುವಾಗಿ ಪಂಚವಾರ್ಷಿಕ ಯೋಜನೆಗಳನ್ನು ಅಳವಡಿಸಿಕೊಂಡು ಅಮೂಲಾಗ್ರ ಅಭಿವೃದ್ಧಿ ಸಾಧಿಸಿದ ಕೀರ್ತಿ ಹೊಂದಿದೆ. ಕೃಷಿ, ಆರೋಗ್ಯ, ಶೈಕ್ಷಣಿ ಕ, ಮೂಲಭೂತ ಸೌಲಭ್ಯಗಳ ಸಾಕಾರದೊಂದಿಗೆ ಚಂದ್ರಯಾನ-3ರ ಯಶ್ವಸಿ ಉಡಾವಣೆ ಈ ದೇಶದ ಹಿರಿಮೆಯನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿಸಿದೆ. ಇಂದು ನಮ್ಮ ದೇಶ ಸ್ವಾವಲಂಬಿಯಾಗಿ ಬೆಳೆದಿದ್ದು, ಶೈಕ್ಷಣಿಕವಾಗಿ ಸಾಮಾಜಿಕವಾಗಿ ವೈಜ್ಞಾನಿಕವಾಗಿ ಬೆಳೆದಿರುವುದು ನಮ್ಮೆಲ್ಲರ ಹೆಮ್ಮೆ ಎಂದರು.

ತಾಲ್ಲೂಕು ದಂಡಾಧಿಕಾರಿ ಜಿ.ಎಸ್.ಶಂಕರಪ್ಪ ಧ್ವಜ ಸಂದೇಶ ನೀಡಿ,



ಸ್ವಾತಂತ್ರ್ಯ ದಿನವನ್ನು ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಯಿಂದ 1947 ರಲ್ಲಿ ದೇಶ ಬಿಡುಗಡೆ ಹೊಂದಿದ ದಿನವಾಗಿ ಗುರುತಿಸಲು ಆಚರಣೆ ಮಾಡಲಾಗುತ್ತದೆ. ಈ ದಿನದಂದು ದೇಶಭಕ್ತಿಯ ಉತ್ಸಾಹ, ಧ್ವಜಾರೋಹಣ, ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ನಾಯಕರ ಭಾಷಣ ದೇಶದ ಎಲ್ಲೆಡೆ ಕಂಡು ಬರುತ್ತವೆ. ಸ್ವಾತಂತ್ರ್ಯ ಹೋರಾಟಗಾರರ ತ್ಯಾಗವನ್ನು ಸ್ಮರಿಸಬೇಕಾಗಿದೆ. ಸ್ವತಂತ್ರದ ಮಹತ್ವದ ಜತೆಗೆ, ಇಂದು ನಮ್ಮ ಹೊಣೆ, ಜವಾಬ್ದಾರಿಗಳೇನು ಎಂಬುದನ್ನು ಅರ್ಥ ಮಾಡಿಕೊಂಡು ದೇಶಕ್ಕೆ ನಾವು ಸಹ ಏನಾದರೂ ಕೊಡುಗೆ ನೀಡಬೇಕಾಗಿದೆ ಎಂದರು.

ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಎನ್.ಕುಮಾರ್, ಎಸ್.ಎನ್. ಸುಕುಮಾರ, ನಾಗರಾಜು, ಜೆ.ಎಂ.ಸುಧಾ, ಯೋಗೇಂದ್ರಕುಮಾರ್, ಪುಟ್ಟೇಗೌಡ, ಸಿ ವಿ.ಸಂಧ್ಯಾ, ಶಶಿಕಲ, ಡಾ.ಹರೀಶ್, ಟಿ.ಎನ್.ರಮೇಶ್, ತಸ್ಕೀನ್ ಫಾತಿಮಾ, ಬಿ.ಎಸ್.ರೋಹಿತ್, ವರುಣ್ ಚಕ್ರವರ್ತಿ, ರಘು, ಡಾ.ಪೂರ್ಣಿಮಾ, ಗಿರೀಶ್, ಗೋವಿಂದೇಗೌಡ ಅವರನ್ನು ಗೌರವಿಸಲಾಯಿತು. ಮೂರು ಶಾಲೆಗಳಿಂದ ದೇಶಭಕ್ತಿ ಸಾರುವ ಕುರಿತಾಗಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪಟ್ಟಣದ ಪೂರ್ಣಚಂದ್ರ ಪಬ್ಲಿಕ್ ಶಾಲೆ ಪ್ರಥಮ ಸ್ಥಾನವನ್ನು, ಗೂರಮಾರನಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆ, ದ್ವಿತೀಯ ಸ್ಥಾನವನ್ನು ಮತ್ತು ಮೂರನೇ ಸ್ಥಾನವನ್ನು ವಿವೇಕಾನಂದ ಅಂತರರಾಷ್ಟ್ರೀಯ ಶಾಲೆಗಳು ಪಡೆದವು.

ಪುರಸಭಾಧ್ಯಕ್ಷ ಸಿ.ಎನ್.ಮೋಹನ್, ಉಪಾಧ್ಯಕ್ಷೆ ಕವಿತಾ ರಾಜು, ಸ್ಥಾಯಿ ಸಮಿತಿ ಅಧ್ಯಕ್ಷ ಎಸ್.ಎ.ಗಣೇಶ್, ಸದಸ್ಯರಾದ ರಾಣಿಕೃಷ್ಣ, ರೇಖಾ ಅನಿಲ್, ಬನಶಂಕರಿ ರಘು, ಲಕ್ಷ್ಮಮ್ಮ, ರಾಧಾ ಮಂಜುನಾಥ್, ಸುಜಾತ, ನವೀನ್‌ಕುಮಾರ್, ರಾಮಕೃಷ್ಣ, ಮುಖ್ಯಾಧಿಕಾರಿ ಆರ್. ಯತೀಶ್ ಕುಮಾರ್, ನಗರ ಯೋಜನ ಪ್ರಾಧಿಕಾರದ ಅಧ್ಯಕ್ಷ ಜಿ.ಆರ್.ಮೂರ್ತಿ, ಟಿಎಪಿಸಿಎಂಎಸ್ ಅಧ್ಯಕ್ಷ ಎಂ.ಆರ್. ಅನಿಲ್‌ಕುಮಾರ್, ಗ್ಯಾರಂಟಿ ಸಮಿತಿ ತಾಲ್ಲೂಕು ಅಧ್ಯಕ್ಷ ಪ್ರಕಾಶ್‌ಗೌಡ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಬಿ.ಎನ್. ಮಂಜುನಾಥ್, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ಆರ್. ಮಂಜುನಾಥ, ಕಸಾಪ ತಾಲ್ಲೂಕು ಅಧ್ಯಕ್ಷ ಹೆಚ್.ಎನ್.ಲೋಕೇಶ್, ಬಿಇಒ ಹೆಚ್.ಎನ್.ದೀಪಾ, ಬಿಆರ್‌ಸಿ ಕೆ.ಎನ್.ಅನಿಲ್, ಸಿಡಿಪಿಒ ಇಂದ್ರ, ದೈಹಿಕ ಪರಿವೀಕ್ಷಕ ಆನಂದ್, ತಾಲ್ಲೂಕು ಪಂಚಾಯಿತಿ ಸಿಇಒ ಜಿ.ಆರ್.ಹರೀಶ್, ನಗರ ಠಾಣಾ ವೃತ್ತ ನಿರೀಕ್ಷಕ ರಘುಪತಿ ಸೇರಿ ಪುರಸಭಾ ನಾಮನಿರ್ದೇಶನ ಸದಸ್ಯರು, ಕೆಡಿಪಿ ಸದಸ್ಯರು ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಉಪಸ್ಥಿತರಿದ್ದರು

# ಶಾಂತಿಯುತವಾಗಿ ಹಬ್ಬ ಆಚರಿಸಿ



• ಪ್ರಜೋದಯ ವರದಿ

**ಬೇಲೂರು:** ಗೌರಿ ಗಣೇಶ ಹಾಗೂ ಈದ್ ಮಿಲಾದ್ ಹಬ್ಬಗಳನ್ನು ಶಾಂತಿಯುತವಾಗಿ ಸಂತೋಷದಿಂದ ಆಚರಿಸಲು ಪ್ರತಿಯೊಬ್ಬರೂ ಮುಂದಾಗಬೇಕು ಎಂದು ಹಳೇಬೀಡು ಪೊಲೀಸ್ ವೃತ್ತ ನಿರೀಕ್ಷಕ ಜಗದೀಶ್ ಹೇಳಿದರು.

ಗಣೇಶ ಚತುರ್ಥಿ ಹಾಗೂ ಈದ್ ಮಿಲಾದ್ ಹಬ್ಬದ ಅಂಗವಾಗಿ ಬೇಲೂರು ಪಟ್ಟಣದ ಹಳೇಬೀಡು ಪೊಲೀಸ್ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಗುರುವಾರ ಸಂಜೆ ಕರೆಯಲಾಗಿದ್ದ ಜನ ಸಂಪರ್ಕ ಸಭೆಯಲ್ಲಿ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ಸಾಲು ಸಾಲು ಹಬ್ಬಗಳು ಬರುತ್ತಿವೆ. ಈ ಸಂದರ್ಭ ಯಾವುದೇ ಊಹಾಪೋಹಗಳಿಗೆ ಕಿವಿಗೊಡದೆ ಸತ್ಯವನ್ನು ಅರಿಯಲು ಮುಂದಾಗಬೇಕು. ಮತ್ತು ಏನಾದರೂ ವಿಚಾರಗಳಿದ್ದಲ್ಲಿ ಕಚೇರಿಗೆ ಬಂದು ನನಗೆ ಅಥವಾ ನಮ್ಮ ಸಿಬ್ಬಂದಿಗೆ ಮಾಹಿತಿ ನಿಡಿದರೆ ನಾವು ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದರು.

ಯಾರೂ ಸಹ ಕಾನೂನು ಮೀರಿ ನಡೆದುಕೊಳ್ಳಬಾರದು. ಗೌರಿ ಗಣೇಶ ಹಾಗೂ ಈದ್ ಮಿಲಾದ್ ಹಬ್ಬಗಳನ್ನು ಎಲ್ಲ ಧರ್ಮಿಯರು ಸೌಹಾರ್ದದಿಂದ ಶಾಂತಿಯುತವಾಗಿ ಆಚರಿಸಬೇಕು ಎಂದು ಸೂಚಿಸಿದರು.

ಕಸಾಪ ಗೌರವ ಕಾರ್ಯದರ್ಶಿ ಬಿ.ಬಿ.ಶಿವರಾಜ್, ದಸಂಸ ಮುಖಂಡ ದೇವರಾಜ್, ಹೊನ್ನಯ್ಯ, ವೆಂಕಟೇಶ್, ಗಣೇಶ್, ತಿಮ್ಮರಾಜು, ಮಹೇಶ್, ರಮೇಶ್ ಇತರರು ಹಾಜರಿದ್ದರು.

# ಪಂಚ ಮಾತೃಕೇಯರಿಗೆ ವಿಶೇಷ ಪೂಜೆ

• ಪ್ರಜೋದಯ ವರದಿ

**ಅರಸೀಕೆರೆ:** ವರಮಹಾಲಕ್ಷ್ಮಿ ಹಬ್ಬದ ಅಂಗವಾಗಿ ಕರಿಯಮ್ಮ ದೇವಿ ಸಮೇತ ಮೂಲ ಸನ್ನಿಧಾನದಲ್ಲಿ ನೆಲೆಸಿರುವ ಪಂಚ ಮಾತೃಕೇಯರಿಗೆ ವಿಶೇಷ ಪೂಜೆ ನಡೆದವು ಶ್ರದ್ಧಾ ಭಕ್ತಿಯೊಂದಿಗೆ ದೇವಾಲಯಕ್ಕೆ ಆಗಮಿಸಿದ ಭಕ್ತರು ಗ್ರಾಮದೇವತೆಯರಿಗೆ ಪೂಜೆ ಸಲ್ಲಿಸಿ ದರ್ಶನ ಮಾಡಿ ಪುನೀತರಾದರು.

ಊರ ಒಳಗಿನ ಮಲಿಗೆಮ್ಮ ದೇವಾಲಯ ಹಾಗೂ ಮೂಲ ಸನ್ನಿಧಾನವಾಗಿರುವ ಕರಿಯಮ್ಮ ದೇವಾಲಯದಲ್ಲಿ ಗ್ರಾಮ ದೇವತೆಯರ ಮೂಲ ವಿಗ್ರಹಕ್ಕೆ ಕ್ಷೀರಭಿಷೇಕ ಸೇರದಂತೆ ನಾನಾ ಅಭಿಷೇಕಗಳು ವಿವಿಧ ಅರ್ಚನೆಗಳು ದೇವಾಲಯದ ಸಂಪ್ರದಾಯದಂತೆ ನಡೆದವು.

ಕರಿಯಮ್ಮ ದೇವಿ ಸಮೇತ ಪಂಚ



ಮಾತೃಕೇಯರಿಗೆ ಮಾಡಲಾಗಿದ್ದ ವಿಶೇಷ ಅಲಂಕಾರ ಭಕ್ತರ ಕಣ್ಮನ ಸೆಳೆಯುವಂತಿತ್ತು. ಮಹಾ ಮಂಗಳಾರತಿ ವೇಳೆ ದೇವಾಲಯದ ಅಭಿವೃದ್ಧಿ ಸಮಿತಿಯ ಪದಾಧಿಕಾರಿಗಳು ಹಾಗೂ ನೂರಾರು ಸಂಖ್ಯೆಯಲ್ಲಿ ಭಕ್ತರು ಉಪಸ್ಥಿತರಿದ್ದರು ದೇವಾಲಯಕ್ಕೆ ಆಗಮಿಸಿದ ಭಕ್ತರಿಗೆ ತೀರ್ಥ ಹಾಗೂ ಪ್ರಸಾದ ವಿತರಿಸಲಾಯಿತು.

**ನಾನಾ ದೇವಾಲಯಗಳಲ್ಲಿ ಪೂಜೆ:** ವರಮಹಾಲಕ್ಷ್ಮಿ ಹಬ್ಬದ ಅಂಗವಾಗಿ ತಾಲೂಕಿನ ಸುಕ್ಷೇತ್ರ ಮಾಲೇಕಲ್ ಅಮರಗಿರಿ ತಿರುಪತಿಯ ಲಕ್ಷ್ಮಿ ವೆಂಕಟರಮಣ ಸ್ವಾಮಿ ದೇವಾಲಯ ಸೇರಿದಂತೆ ಗುತ್ತಿನಕೆರೆ ರಂಗನಾಥ ಸ್ವಾಮಿ ದೇವಾಲಯ, ಬಿಳಿಕಲ್ ರಂಗನಾಥ ಸ್ವಾಮಿ, ಬೆಟ್ಟದಪುರದ ರಂಗನಾಥ ಸ್ವಾಮಿ ಹಾಗೂ ಜಾವಗಲ್ ಲಕ್ಷ್ಮಿ ರಂಗನಾಥ ಸ್ವಾಮಿ, ಹಾರನಹಳ್ಳಿ ಚನ್ನಕೇಶ್ವರ ದೇವಾಲಯಗಳಲ್ಲೂ ಸಹ ವಿಶೇಷ ಪೂಜೆ ನಡೆದವು. ಭಕ್ತರು ಆನಂದದಿಂದ ಮಿಂದೆದ್ದರು.

# ಪೋಷಕರು ಮಕ್ಕಳಲ್ಲಿ ದೇಶಾಭಿಮಾನ ಬೆಳೆಸಬೇಕು

• ಪ್ರಜೋದಯ ವರದಿ

**ಹಾಸನ:** ನಮ್ಮ ಭಾರತ ದೇಶ ಮುಂದಿನ ದಿನಗಳಲ್ಲಿ ವಿಶ್ವಕ್ಕೆ ಮಾದರಿ ದೇಶವಾಗಬೇಕು. ಪ್ರಸ್ತುತ ಸನ್ನಿವೇಶದಲ್ಲಿ ಎದುರಿಸುತ್ತಿರುವ ಸವಾಲುಗಳನ್ನು ಸಮರ್ಥವಾಗಿ ಪರಿಹರಿಸಿಕೊಂಡು ಸರ್ವ ಕ್ಷೇತ್ರಗಳಲ್ಲೂ ಮುನ್ನಡೆ ಸಾಧಿಸಬೇಕು. ಸ್ವಾತಂತ್ರ್ಯವು ನಮ್ಮ ಹಕ್ಕಾಗಿದ್ದು, ಎಲ್ಲೂ ದುರುಪಯೋಗವಾಗದಂತೆ ಎಚ್ಚರಿಕೆ ವಹಿಸಬೇಕು ಮತ್ತು ಇಂದಿನ ಮಕ್ಕಳಲ್ಲಿ ದೇಶಾಭಿಮಾನ ಬೆಳೆಯಬೇಕು ಎಂದು ಗಂಧದ ಕೋಠಿ ಅವರಣದಲ್ಲಿರುವ ಜಿ.ಜಿ.ಜೆ.ಸಿ. ಪ್ರಧಾನ ಶಾಲೆಯ ಉಪಪ್ರಾಂಶುಪಾಲ ಮಂಜುನಾಥ್ ಹೇಳಿದರು.

ನಗರದ ಆರ್.ಸಿ. ರಸ್ತೆಯಲ್ಲಿರುವ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರಧಾನ) ಹಾಗೂ ಪ್ರೌಢಶಾಲಾ ವಿಭಾಗ ಇಲ್ಲಿ ಆಯೋಜನೆಗೊಂಡಿದ್ದ 79ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮಾತನಾಡಿದ ಅವರು, ಒಂದೊಮ್ಮೆ



ವ್ಯಾಪಾರಕ್ಕಾಗಿ ಬಂದ ಪರಕೀಯರು ನಮ್ಮ ದೇಶದ ಸಂಪತ್ತನ್ನು ಶತಮಾನಗಳ ಕಾಲ ಲೂಟಿ ಮಾಡಿದರು. ನಮ್ಮ ಸ್ವಾತಂತ್ರ್ಯವನ್ನು ಕಬಳಿಸಿದರು. ನಮ್ಮ ರಾಷ್ಟ್ರವನ್ನು ಮತ್ತೆ ಸ್ವಾತಂತ್ರ್ಯಗೊಳಿಸಲು ಮಹಾತ್ಮಾ ಗಾಂಧೀಜಿ ಅವರ ನಾಯಕತ್ವದಲ್ಲಿ ನಿರಂತರ ಹೋರಾಟ ಮಾಡಿ ಸ್ವಾತಂತ್ರ್ಯವನ್ನು ಗಳಿಸಿದ್ದೇವೆ. ಇದನ್ನು ಉಳಿಸಿ ಮುಂದುವರಿಸಿಕೊಂಡು ಹೋಗುವುದು ನಮ್ಮೆಲ್ಲರ ಮುಖ್ಯ ಜವಾಬ್ದಾರಿಯಾಗಬೇಕು ಎಂದರು.

ಪ್ರೌಢಶಾಲಾ ವಿಭಾಗದ ಸಹ ಶಿಕ್ಷಕ ಕೆ.ಎನ್. ಚಿದಾನಂದ ಅವರು ಮಾತನಾಡಿ, ಸ್ವಾತಂತ್ರ್ಯವೆಂದರೆ ಬರೀ ಹಕ್ಕಲ್ಲ, ಸ್ವಾಭಿಮಾನಿ ಹೋರಾಟದ ಪ್ರತಿಫಲವಾಗಿದೆ. ಸ್ವಾತಂತ್ರ್ಯ ದಿನಾಚರಣೆ ಕೇವಲ ಹಬ್ಬವಲ್ಲ ಅದು ಭಾರತೀಯರ ತ್ಯಾಗ ಬಲಿದಾನಗಳನ್ನು ಸ್ಮರಿಸುವ ಸುವರ್ಣ ಸಂದರ್ಭವಾಗಿದೆ. ಭಾರತದ ಇತಿಹಾಸದಲ್ಲೇ ಸುವರ್ಣಾಕ್ಷರಗಳಲ್ಲಿ ದಾಖಲೆಯಾದ ಚಿರಸ್ಮರಣೀಯ ದಿನವೆಂದರೆ 1947ರ ಆಗಸ್ಟ್ 15. ಈ ದಿನದಂದು ನಮ್ಮ ಭಾರತವು ದೇಶವು ಬೃಹತ್ ವಸಾಹತುಶಾಹಿ ಇಂಗ್ಲಿಷರ ಆಳ್ವಿಕೆಯಿಂದ ಬಿಡುಗಡೆಯಾದ ಕ್ಷಣ. ನಮ್ಮ ಸ್ವತಂತ್ರ ಭಾರತವು ಭವಿಷ್ಯದ ದೃಷ್ಟಿಕೋನ ಹೊಂದಿದ್ದು, 2047 ರಲ್ಲಿ ವಿಶ್ವಗುರು ಭಾರತವಾಗಬೇಕು ಎಂಬ ಗುರಿಯನ್ನು ಹೊಂದಿದೆ. ವಿಜ್ಞಾನ- ತಂತ್ರಜ್ಞಾನದಲ್ಲಿ ಸ್ವಾವಲಂಬನೆ ಸಾಧಿಸುವುದು, ಗ್ರಾಮೀಣ ಮತ್ತು ನಗರಾಭಿವೃದ್ಧಿಯಲ್ಲಿ ಸಮತೋಲನ ಕಾಪಾಡಿಕೊಳ್ಳುವುದು, ವಿಶ್ವಸಹಕಾರ, ಶಾಂತಿ ಮತ್ತು ಮಾನವ ಹಕ್ಕುಗಳ ರಕ್ಷಣೆ ಮಾಡುವುದು ಅತೀ ಮುಖ್ಯವಾಗಿದೆ ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಅನ್ನಪೂರ್ಣರವರು ಧ್ವಜಾರೋಹಣ ನೆರವೇರಿಸಿ ಸ್ವಾತಂತ್ರ್ಯ ದಿನಾಚರಣೆಯ ಶುಭ ಸಂದೇಶವನ್ನು ನೀಡಿದರು. ಕಾಲೇಜಿನ ಎಲ್ಲಾ ಉಪನ್ಯಾಸಕರು, ಪ್ರೌಢಶಾಲೆಯ ಎಲ್ಲಾ ಸಹ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಹಾಜರಿದ್ದರು.



**ಹಾಸನ: ರೋಟರಿ ಕ್ಲಬ್ ಆಫ್ ಹಾಸನ ರಾಯಲ್ ವತಿಯಿಂದ ನಗರದ ಬೆಸ್ಟ್ ಪ್ರಥಮ ದರ್ಜೆ ಕಾಲೇಜಿನಲ್ಲಿ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಶುಕ್ರವಾರ ಧ್ವಜಾರೋಹಣ ನಡೆಸಲಾಯಿತು.**

**ರೋಟರಿ ಜೋನ್ 9ರ ಮಾಜಿ ವಲಯ ಸೇನಾನಿ ಡಾ.ಬಿ. ವಿಕ್ರಂ, ರಾಯಲ್ ಕ್ಲಬ್ ಮಾಜಿ ಖಜಾಂಚಿ ಡಾ.ಎಂ.ಡಿ.ನಿತ್ಯಾನಂದ, ಕಾರ್ಯದರ್ಶಿ ಆರ್.ಟಿ. ಪುನೀತ್, ಸರ್ಜೆಂಟ್ ಆಫ್ ಆರ್ಮ್ಸ್ ಮಹೇಶ್, ಸದಸ್ಯರಾದ ಅನೀಲ್ ರೈ, ಅತೀತ್, ಮುರಳಿ ಹಾಗೂ ಹಾಸನಾಂಬ ರೂರಲ್ ಎಜುಕೇಶನ್ ಟ್ರಸ್ಟ್‌ನ ಖಜಾಂಚಿ ಈಶ್ವರಪ್ಪ, ಬೆಸ್ಟ್ ಕಾಲೇಜಿನ ಶರತ್, ಸಿಬ್ಬಂದಿ ಹಾಜರಿದ್ದರು.**

# ಅಣುಬಾಂಬ್ ಬೆದರಿಕೆ ಮುಂದುವರಿಸಿದರೆ ಸೂಕ್ತ ಉತ್ತರ

• ಪ್ರಜೋದಯ ವರದಿ

**ನವದೆಹಲಿ:** ಭಾರತದ ಸಶಸ್ತ್ರ ಪಡೆಗಳು ಉಗ್ರರಿಗೆ ಅವರ ಕಲ್ಪನೆಗೂ ಮೀರಿ ಶಿಕ್ಷಿಸಿದ್ದು, ಆಪರೇಷನ್ ಸಿಂಧೂರ್ ಬಳಿಕ ಪಾಕಿಸ್ತಾನ ನಿದ್ರೆ ಕಳೆದುಕೊಂಡಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದರು.

79ನೇ ಸ್ವಾತಂತ್ರ್ಯ ದಿನದಂದು ಕೆಂಪು ಕೋಟೆಯಲ್ಲಿ ಧ್ವಜಾರೋಹಣ ಮಾಡಿದ ನಂತರ ದೇಶದ ಜನತೆಯನ್ನುದ್ದೇಶಿಸಿ ಭಾಷಣ ಮಾಡಿದ ಪ್ರಧಾನಿ ಮೋದಿ ಅವರು, ಏಪ್ರಿಲ್ 22 ರಂದು ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಿಂದ ಇಡೀ ರಾಷ್ಟ್ರವು ಆಕ್ರೋಶಗೊಂಡಿದ್ದು, ಆಪರೇಷನ್ ಸಿಂದೂರ್ ಆ ಆಕ್ರೋಶದ ಪ್ರತಿಕ್ರಿಯೆಯಾಗಿತ್ತು ಎಂದರು.

ನಾವು ನಮ್ಮ ಸಶಸ್ತ್ರ ಪಡೆಗಳಿಗೆ ಮುಕ್ತ ಹಸ್ತ ನೀಡಿದ್ದೇವೆ. ಇದೀಗ ನಮ್ಮ ದೇಶ ಭಯೋತ್ಪಾದಕರು ಮತ್ತು ಅವರನ್ನು ಬೆಂಬಲಿಸುವವರ ನಡುವೆ ವ್ಯತ್ಯಾಸವನ್ನು ನೋಡುವುದಿಲ್ಲ. ಭವಿಷ್ಯದಲ್ಲಿ ಪಾಕಿಸ್ತಾನದಿಂದ ಯಾವುದೇ ದುಷ್ಕೃತ್ಯ ಎದುರಾದರೂ ಅದಕ್ಕೆ ಶಿಕ್ಷೆಯನ್ನು ನಮ್ಮ ಸಶಸ್ತ್ರ ಪಡೆಗಳೇ ನಿರ್ಧರಿಸುತ್ತವೆ ಎಂದು ಎಚ್ಚರಿಸಿದರು.

ಭಾರತದ ಮೇಲೆ ಪರಮಾಣು ಬೆದರಿಕೆಗಳು ಬಹಳ ಸಮಯದಿಂದ ಮುಂದುವರೆದಿವೆ. ಆದರೆ, ಅದನ್ನು ಇನ್ನು ಮುಂದೆ ಸಹಿಸಲಾಗುವುದಿಲ್ಲ. ನಮ್ಮ ಶತ್ರುಗಳು ಪರಮಾಣು ಬೆದರಿಕೆ ಮುಂದುವರೆಸಿದರೆ, ನಾವು ಸೂಕ್ತ ಉತ್ತರವನ್ನು ನೀಡಲು ಸಿದ್ಧರಿದ್ದೇವೆ. ನಮ್ಮ ಸಶಸ್ತ್ರ ಪಡೆಗಳು ಪ್ರತಿಕ್ರಿಯೆ ನೀಡುತ್ತವೆ. ಪಾಕಿಸ್ತಾನದಲ್ಲಿ ನಮ್ಮ ಸಶಸ್ತ್ರ ಪಡೆಗಳು ಮಾಡಿದ ಹಾನಿ ದೊಡ್ಡದಾಗಿತ್ತು. ಭಾರತವು ಇನ್ನು ಮುಂದೆ ಪರಮಾಣು ಬೆದರಿಕೆಗಳನ್ನು ಸಹಿಸುವುದಿಲ್ಲ ಎಂದು ನಿರ್ಧರಿಸಿದೆ, ನಾವು ಯಾವುದೇ



ಬೆದರಿಕೆಗೆ ಹೆದರುವುದಿಲ್ಲ, ಬಲಿಯಾಗುವುದಿಲ್ಲ ಎಂದರು.

ರಕ್ತ ಮತ್ತು ನೀರು ಒಟ್ಟಿಗೆ ಹರಿಯುವುದಿಲ್ಲ ಎಂದು ಭಾರತ ಈಗಾಗಲೇ ನಿರ್ಧಾರ ಮಾಡಿದೆ. ಸಿಂಧೂ ನದಿ ನೀರು ಒಪ್ಪಂದವು ಅನ್ಯಾಯವಾಗಿದೆ ಎಂದು ನಮ್ಮ ದೇಶದ ಜನರು ಅರಿತುಕೊಂಡಿದ್ದಾರೆ. ಸಿಂಧೂ ನದಿ ಒಪ್ಪಂದದಿಂದ ನೀರು ಶತ್ರುಗಳ ಭೂಮಿಗೆ ನೀರಾವರಿಗೆ ಸಹಾಯಕವಾಗಿದೆ. ಆದರೆ, ನಮ್ಮದೇ ರೈತರು ತೊಂದರೆ ಅನುಭವಿಸುತ್ತಿದ್ದಾರೆ. ಭಾರತದಲ್ಲಿ ಹುಟ್ಟುವ ನದಿ ನೀರಿನ ಹಕ್ಕು ಭಾರತೀರಿಗೆ ಇದೆ. ದೇಶದ ರೈತರಿಗೆ ಇದೆ. ಕಳೆದ ಏಳು ದಶಕಗಳಿಂದ ಒಪ್ಪಂದದ ಮೇರೆಗೆ ಬೇರೆ ದೇಶಗಳಿಗೆ ಭಾರತ ನೀರುಣಿಸುತ್ತಿತ್ತು. ನಮ್ಮ ಭೂಮಿ ಬರಿದಾಗುತ್ತಿತ್ತು. ಅಂದ ಮೇಲೆ ಅಂತಹ ಒಪ್ಪಂದ ಏಕೆ ಬೇಕು ಎಂದು ಪ್ರಶ್ನೆ ಮಾಡಿದರು.


ಭಾರತದ ಹಾಗೂ ನಮ್ಮ ರೈತರ ಹಿತದೃಷ್ಟಿಯಿಂದ ಪಾಕ್ ಜತೆಗಿನ ಸಿಂಧು ನದಿ ಒಪ್ಪಂದಕ್ಕೆ ಮುಂದೆಂದೂ ಒಪ್ಪಿಗೆ ನೀಡುವುದಿಲ್ಲ. ಭಯೋತ್ಪಾದಕತೆ ಪೋಷಿಸುವವರನ್ನು ನಾವು ಇನ್ನು ಮುಂದೆ ಬೇರೆ ಬೇರೆ ಎಂದು ಪರಿಗಣಿಸದೇ ಅವರೆಲ್ಲರನ್ನು ಒಂದೇ ಎಂದು ಕರೆಯುತ್ತೇವೆ. ಉಗ್ರರಿಗೆ ಸಹಾಯ ಮಾಡುವವರೆಲ್ಲರನ್ನು ಭಯೋತ್ಪಾದಕರಂತೆ ಕಾಣುತ್ತೇವೆ ಎಂದು ಪಾಕಿಸ್ತಾನ ಹಾಗೂ ಉಗ್ರ ಬೆಂಬಲಿತ ರಾಷ್ಟ್ರಗಳಿಗೆ ಮೋದಿ ಅವರು ಎಚ್ಚರಿಕೆ ನೀಡಿದರು.

# ಬಲವಂತದ ಮತಾಂತರಕ್ಕೆ ಜೀವಾವಧಿ ಶಿಕ್ಷೆ

• ಪ್ರಜೋದಯ ವರದಿ

**ಡೆಹ್ರಾಡೂನ್:** ಮತಾಂತರ ವಿರೋಧಿ ಕಾನೂನನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ನಿರ್ಧರಿಸಿರುವ ಉತ್ತರಾಖಂಡ ಸರ್ಕಾರ ಬಲವಂತದ ಮತಾಂತರಕ್ಕೆ ಜೀವಾವಧಿ ಶಿಕ್ಷೆ, 10 ಲಕ್ಷ ರೂ. ದಂಡ ಹೇರುವ ಮಸೂದೆ ಜಾರಿಗೆ ತರಲು ನಿರ್ಧರಿಸಿದೆ.

ಉತ್ತರಾಖಂಡದ ಸಿಎಂ ಪುಷ್ಕರ್ ಸಿಂಗ್ ಧಾಮಿ ಸರ್ಕಾರವು ಲವ್ ಜಿಹಾದ್ ಆರೋಪದ ಬಗ್ಗೆ ಕಾನೂನನ್ನು ಇನ್ನಷ್ಟು ಕಠಿಣಗೊಳಿಸಲಿದ್ದು, ಧಾಮಿ ಸಚಿವ ಸಂಪುಟವು ಹೊಸ ತಿದ್ದುಪಡಿ ಮಸೂದೆಯನ್ನು ಅನುಮೋದಿಸಿದೆ. ಬಲವಂತದ ಮತಾಂತರ ಪ್ರಕರಣದಲ್ಲಿ ತಪ್ಪಿತಸ್ಥರೆಂದು ಕಂಡುಬಂದಲ್ಲಿ ಜೀವಾವಧಿ ಶಿಕ್ಷೆ ವಿಧಿಸಲು ತಿದ್ದುಪಡಿ ಮಸೂದೆ ಅವಕಾಶ ನೀಡುತ್ತದೆ. ಅಲ್ಲದೆ, 10 ಲಕ್ಷ ರೂ.ಗಳ ದಂಡ ವಿಧಿಸಬಹುದಾಗಿದೆ.



ಉತ್ತರಾಖಂಡ ಸರ್ಕಾರವು ಇದನ್ನು ಮಳೆಗಾಲದ ಅಧಿವೇಶನದಲ್ಲಿ ಮಂಡಿಸಲಿದೆ ಎಂದು ಹೇಳಲಾಗಿದ್ದು, ವಿಧಾನ ಸಭೆಯ ಮಳೆಗಾಲದ ಅಧಿ ವೇಶನ ಆ.19 ರಿಂದ ಪ್ರಾರಂಭವಾ ಗುತ್ತಿದ್ದು, ಇದೇ ಸಂದರ್ಭದಲ್ಲಿ ಈ ಮಸೂದೆಯನ್ನು ಮಂಡಿಸಲಾಗುವುದು ಎಂದು ಹೇಳಲಾಗಿದೆ.

ಬಲವಂತದ ಮತಾಂತರದ ಸಂದರ್ಭದಲ್ಲಿ 10 ವರ್ಷಗಳ ಜೈಲು ಶಿಕ್ಷೆ ಮತ್ತು 50 ಸಾವಿರ ರೂ.ಗಳವರೆಗೆ ದಂಡ ವಿಧಿಸುವ ಅವಕಾಶವಿದೆ. ಹೊಸ ಕಾನೂನಿನಲ್ಲಿ, ಇದನ್ನು 14 ವರ್ಷಗಳಿಗೆ ಹೆಚ್ಚಿಸಲಾಗಿದೆ. ಕೆಲವು ಸಂದರ್ಭಗಳಲ್ಲಿ, ಶಿಕ್ಷೆಯನ್ನು 20 ವರ್ಷಗಳವರೆಗೆ ಹೆಚ್ಚಿಸಬಹುದು.

# ಸಹಬಾಳ್ವೆಯಿಂದಬದುಕಿದೇಶಕಟ್ಟಬೇಕು

• ಪ್ರಜೋದಯ ವರದಿ

**ಹಾಸನ:** ನಗರದ ಜನಪ್ರಿಯ ಆಸ್ಪತ್ರೆ, ಜನಪ್ರಿಯ ಪ್ಯಾರಾ ಮೆಡಿಕಲ್ ಮತ್ತು ನರ್ಸಿಂಗ್ ಕಾಲೇಜಿನ ವತಿಯಿಂದ ಆಯೋಜಿಸಿದ್ದ 79ನೇ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮವನ್ನು ಹಿರಿಯ ನಾಗರಿಕ ವೇದಿಕೆ ಕಾರ್ಯದರ್ಶಿ ಬಿ.ಕೆ.ಮಂಜುನಾಥ್ ಧ್ವಜಾರೋಹಣ ಮಾಡುವುದರ ಮೂಲಕ ಉದ್ಘಾಟಿಸಿದರು.

ನಂತರ ಮಾತನಾಡಿ, ನಮ್ಮ ದೇಶ ಈ ದಿನವನ್ನು ಆಚರಿಸಲು ಸಾವಿರಾರು ಸ್ವಾತಂತ್ರ್ಯ ಹೋರಾಟಗಾರರು ತಮ್ಮ ಪ್ರಾಣವನ್ನು ಅರ್ಪಿಸಿದ್ದಾರೆ. ಅವರ ತ್ಯಾಗವನ್ನು ಎಂದಿಗೂ ನಾವುಗಳು ಮರೆಯಬಾರದು. ಈ ದಿನ ಅತ್ಯಂತ ಹೆಮ್ಮೆ ಪಡಬೇಕಾದ ದಿನ. 75 ವರ್ಷ ಅಮೃತ ಮಹೋತ್ಸವದ ಆಚರಣೆಯನ್ನು ಪೂರ್ಣಗೊಳಿಸಿ ನೂರು



ವರ್ಷದ ಸುವರ್ಣ ಮಹೋತ್ಸವದ ಕಡೆ ದಾಪುಗಾಲಾಕುತ್ತಿದ್ದೇವೆ. ನಾವೆಲ್ಲರೂ ಸಹ ಬಾಳ್ವೆಯಿಂದ ಬದುಕಿ ದೇಶವನ್ನು ಕಟ್ಟಬೇಕೆಂದು ಕಿವಿಮಾತು ಹೇಳಿದರು.

ಜನಪ್ರಿಯ ಫೌಂಡೇಶನ್‌ನ ಅಧ್ಯಕ್ಷ ಡಾ.ಎ.ಕೆ.ಅಬ್ದುಲ್ ಬಶೀರ್ ಮಾತನಾಡಿ, 200 ವರ್ಷಗಳಷ್ಟು ಹೆಚ್ಚು ಕಾಲ ಭಾರತವನ್ನು ಆಳಿದ ಬ್ರಿಟಿಷರ ದಾಸ್ಯದಿಂದ ಮುಕ್ತವಾದ ದಿನ ಆ. 15. ದೇಶಾದ್ಯಂತ ಹಬ್ಬದಂತೆ ಆಚರಿಸುತ್ತೇವೆ. ಅದೆಷ್ಟೋ ಸಾಹಸಿಗಳ, ಸ್ವಾತಂತ್ರ್ಯ ಹೋರಾಟಗಾರ ತ್ಯಾಗ ಬಲಿದಾನದ ಫಲವಾಗಿ ನಮಗೆ ಸ್ವಾತಂತ್ರ್ಯ ಸಿಕ್ಕಿದೆ ಎಂದು ಹೇಳಿದರು.

ಜನಪ್ರಿಯ ಫೌಂಡೇಶನ್ ಉಪಾಧ್ಯಕ್ಷೆ ಫಾತಿಮಾ ನಸ್ರೀನ್ ಬಶೀರ್, ವೈದ್ಯರಾದ ಡಾ. ಪ್ರವೀಣ್, ಡಾ. ಮನೋಜ್ ಕುಮಾರ್, ಡಾ. ಹರ್ಷ, ಡಾ.ನಹೀದ್, ಮೊಹಮದ್ ಕಿಸಾರ್, ಜನಪ್ರಿಯ ಆಸ್ಪತ್ರೆ ಸಿಬ್ಬಂದಿಗಳು ಹಾಜರಿದ್ದರು.

# ಕಾಂಗ್ರೆಸ್‌ನ ಮತಗಳ್ಳತನ ಆರೋಪಕ್ಕೆ ತಾಲ್ಲೂಕು ಕಾಂಗ್ರೆಸ್ ಬೆಂಬಲ, ಪ್ರತಿಭಟನೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ದೇಶದ ಹಲವೆಡೆ ನಡೆದಿರುವ ಮತಗಳ್ಳತನದ ವಿರುದ್ಧ ನಮ್ಮ ನಾಯಕರಾದ ರಾಹುಲ್‌ಗಾಂಧಿ ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಜ್ಯದ ಎಲ್ಲ ಮುಖಂಡರು ಸೇರಿ ನಡೆಸಿದ ಪ್ರತಿಭಟನೆಯನ್ನು ಬೆಂಬಲಿಸಿ ಶ್ರವಣಬೆಳಗೊಳ ವಿಧಾನಸಭಾ ಕ್ಷೇತ್ರದಲ್ಲಿಯೂ ಪ್ರತಿಭಟನೆ ನಡೆಸಲಾಗುತ್ತಿದೆ ಎಂದು ವಿಧಾನ ಪರಿಷತ್ತು ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ ಹೇಳಿದರು.

ಪಟ್ಟಣದ ಕೆ.ಆರ್.ವೃತ್ತದಲ್ಲಿ ಗುರುವಾರ ಸಂಜೆ ತಾಲ್ಲೂಕು ಬ್ಲಾಕ್ ಕಾಂಗ್ರೆಸ್ ವತಿಯಿಂದ ನಡೆಸಲಾದ ಮೇಣದ ಬತ್ತಿ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಕಳೆದ ಲೋಕಸಭಾ ಚುನಾವಣೆಯಲ್ಲಿ ದೇಶದೆಲ್ಲೆಡೆ ಮತಗಳ್ಳತನವಾಗಿದೆ. ಇದಕ್ಕೆ ಪೂರಕ ಸಾಕ್ಷಿಗಳನ್ನು ನಮ್ಮ ನಾಯಕ ರಾಹುಲ್‌ಗಾಂಧಿಯವರು ಬಿಡುಗಡೆ ಮಾಡಿದ್ದಾರೆ. ನಮ್ಮ ರಾಜ್ಯದ ಬೆಂಗಳೂರು ಕೇಂದ್ರ, ಬೆಂಗಳೂರು ಉತ್ತರ,



ಮತ್ತು ಗ್ರಾಮಾಂತರ ಲೋಕಸಭಾ ಕ್ಷೇತ್ರಗಳಲ್ಲಿ ಮತಗಳ್ಳತನವಾಗಿದ್ದು, ಪ್ರತಿ ಬೂತ್‌ನಲ್ಲಿಯೂ 80ರಿಂದ 100 ಮತಗಳ ಮತಗಳ್ಳತನವಾಗಿದೆ ಎಂದು ಆರೋಪಿಸಿದರು.

ಲೋಕಸಭಾ ಕ್ಷೇತ್ರದ ಮಹದೇವಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯೊಂದರಲ್ಲಿ 1 ಲಕ್ಷಕ್ಕೂ ಅಧಿಕ ಮತಗಳ ಮತಗಳ್ಳತನವಾಗಿರುವ ಕುರಿತಾಗಿ ನಮ್ಮ ನಾಯಕರು ಕಳೆದ ವಾರ ಬೆಂಗಳೂರಿಗೆ ಆಗಮಿಸಿ ಪ್ರತಿಭಟನೆ ಮಾಡಿದ್ದಾರೆ. ಈ ಪ್ರತಿಭಟನೆಯನ್ನು ದೇಶವ್ಯಾಪ್ತಿ ನಡೆಸಲಾಗುತ್ತಿದೆ. ಕೇಂದ್ರ ಚುನಾವಣಾ ಆಯೋಗ ಮತ್ತು ಬಿಜೆಪಿ ಪಕ್ಷಕ್ಕೆ ನಮ್ಮ ದಿಕ್ಕಾರವಿದೆ. ನಮ್ಮ ಪಕ್ಷದ ಹೋರಾಟವನ್ನು ಬೆಂಬಲಿಸಿ ರಾಜ್ಯದ ಪ್ರತಿ ವಿಧಾನಸಬಾ ಕ್ಷೇತ್ರದಲ್ಲಿಯೂ ಪ್ರತಿಭಟನೆ ನಡೆಸಲಾಗುತ್ತಿದೆ ಎಂದ ಅವರು, ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿಯೂ ಕಳೆದ 10ವರ್ಷಗಳ ಹಿಂದೆ ಪಟ್ಟಣದ ವಾರ್ಡ್ ನಂ. 10ರಲ್ಲಿ 350 ಮತಗಳ್ಳತನವಾಗಿತ್ತು. ಇದರ ಕುರಿತಾಗಿ ಕೋರ್ಟ್ ಛೀಮಾರಿ ಹಾಕಿತ್ತು, ಇನ್ನು ಪುರಸಭಾ ಚುನಾವಣೆಯಲ್ಲಿ ವಾರ್ಡ್ ನಂ. 6, 8ನೇ ವಾರ್ಡ್‌ನಲ್ಲಿಯೂ ಮತಗಳ್ಳತನ ಮಾಡಿದೆ. ಇದರ ವಿರುದ್ಧ ಮುಂದೆ ಹೋರಾಟ ನಡೆಸಬೇಕಾಗುತ್ತದೆ ಎಂದರು.

ಮಾಜಿ ಶಾಸಕ ಸಿ.ಎಸ್.ಪುಟ್ಟೇಗೌಡ ಮಾತನಾಡಿ, ತನ್ನ ವಾಮಮಾರ್ಗದ ಮೂಲಕ ಬಿಜೆಪಿ ಪಕ್ಷ ಚುನಾವಣಾ ಆಯೋಗವನ್ನು ಕೈಗೊಂಬೆ ಮಾಡಿಕೊಂಡು ಕೇಂದ್ರದಲ್ಲಿ ಅಧಿಕಾರ ಹಿಡಿಯುವ ಕೆಲಸ ಮಾಡುತ್ತಿದೆ. ಇದರ ವಿರುದ್ಧ ಹೋರಾಟಕ್ಕೆ ಮುಂದಾಗಿರುವ ರಾಹುಲ್ ಗಾಂಧಿಯವರ ಕೈಯನ್ನು ಬಲಪಡಿಸುವ ಕೆಲಸ ದೇಶದೆಲ್ಲೆಡೆ ಆಗಬೇಕು ಎಂದರು.

ಹಿರೀಸಾವೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಕೆ.ಮಂಜೇಗೌಡ, ಮುಖಂಡರಾದ ಅಣತಿ ಆನಂದ್, ಪ್ರಕಾಶ್‌ಗೌಡ, ಜಿ.ಆರ್.ಮೂರ್ತಿ, ಕಬ್ಬಾಳು ಮಹೇಶ್, ಸುರೇಶ್, ರವಿ, ಪ್ರೇಮ್ ಕುಮಾರ್, ಉಮಾಶಂಕರ್, ಪ್ರಕಾಶ್, ಸೇರಿ ಹಲವು ಮುಖಂಡರ ಇದ್ದರು.

## ದೇಶದ ಭವಿಷ್ಯ ರೂಪಿಸಲು ತಮ್ಮ ಬದುಕನ್ನೇ ತ್ಯಾಗ ಮಾಡಿದ ಮಹನೀಯರನ್ನು ಸ್ಮರಿಸೋಣ

# ಸ್ವಾತಂತ್ರ್ಯ ದಿನವು ವಿಮೋಚನೆಯ ಯುಗದ ಆರಂಭ

• ಪ್ರಜೋದಯ ವರದಿ

**ಸಕಲೇಶಪುರ:** ಭಾರತದ ಸ್ವಾತಂತ್ರ್ಯ ದಿನಾಚರಣೆಯು 200 ವರ್ಷಗಳಿಗೂ ಹೆಚ್ಚು ಕಾಲ ಬ್ರಿಟಿಷ್ ವಸಾಹತುಶಾಹಿಯ ಹಿಡಿತದಿಂದ ವಿಮೋಚನೆಯ ಯುಗದ ಆರಂಭ ಎಂದು ಉಪವಿಭಾಗಾಧಿಕಾರಿ ರಾಜೇಶ್ ಅವರು ಹೇಳಿದರು.

ಪಟ್ಟಣದ ಮಾದರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ನಡೆದ 79ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, ಮಳೆಯ ನಡುವೆಯೂ ಕಾರ್ಯಕ್ರಮ ನಡೆದಿದ್ದು, ಭಾರತಕ್ಕೆ ಸ್ವಾತಂತ್ರ್ಯ ಸುಲಭವಾಗಿ ಸಿಕ್ಕಿಲ್ಲ, ಹಿರಿಯರು ಹಾಗೂ ಅನೇಕ ಮಹಾತ್ಮರು ತ್ಯಾಗ ಮಾಡಿ ಹೋರಾಡಿದ್ದಾರೆ ಎಂದು ತಿಳಿಸಿದರು.

ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರ ನೇತೃತ್ವದಲ್ಲಿ ದೇಶಾದ್ಯಂತ ಲಕ್ಷಾಂತರ ಹೋರಾಟಗಾರರು ತಮ್ಮ



ತ್ಯಾಗ- ಬಲಿದಾನದ ಮೂಲಕ 1947ರ ಆಗಸ್ಟ್ 15ರಂದು ದೇಶಕ್ಕೆ ಸ್ವಾತಂತ್ರ್ಯವನ್ನು ದೊರಕಿಸಿದರು. ದೇಶದ ಭವಿಷ್ಯ ರೂಪಿಸಲು ತಮ್ಮ ಬದುಕನ್ನೇ ತ್ಯಾಗ ಮಾಡಿದ ಮಹನೀಯರನ್ನು ಇಂದು ಸ್ಮರಿಸೋಣ ಎಂದು ಕರೆ ನೀಡಿದರು.

ಶಾಸಕ ಸಿಮೆಂಟ್ ಮಂಜು ಮಾತನಾಡಿ, 79ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸುತ್ತಿರುವುದು ಮಹನೀಯರ ತ್ಯಾಗದ ಫಲ. ದೇಶದಲ್ಲಿ ನೆಮ್ಮದಿ ಇರುವಂತೆ ಮಾಡಿದ ಅವರ ತ್ಯಾಗವೇ ಕಾರಣ. ಬೇರೆ ದೇಶಗಳಿಗಿಂತ ಅಭಿವೃದ್ಧಿಯ ವೇಗ ಹೆಚ್ಚಾಗಿದೆ, ಆತ್ಮನಿರ್ಭರ ಭಾರತದ ಉದ್ದೇಶದೊಂದಿಗೆ ಪ್ರಧಾನಿ ಮೋದಿ ದೇಶವನ್ನು ಮುಂದುವರೆಸುತ್ತಿದ್ದಾರೆ, ಗಡಿ ಭಾಗದಲ್ಲಿ ಸೈನಿಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ ಎಂದು ಅವರು ವಿವರಿಸಿದರು.

ಅತಿಯಾದ ಮಳೆಯಿಂದ ರಾಜ್ಯದ ಅರ್ಧ ಭಾಗ ನೀರಿನಲ್ಲಿ ಮುಳುಗಿದ್ದು, ಎತ್ತಿನಹೊಳೆ ನೀರಿನಿಂದ 10 ಜಿಲ್ಲೆಗಳು ಸಂಕಷ್ಟಕ್ಕೆ ಸಿಲುಕಿವೆ, ಅನಾಹುತ ಮತ್ತು ತೊಂದರೆ ಇದ್ದರೂ ಜನರು ಪರಸ್ಪರ ಸಹಾಯ ಮಾಡುತ್ತಿದ್ದಾರೆ, ರೈತರು ಸಂಕಷ್ಟದಲ್ಲಿದ್ದಾರೆ, ವಿದ್ಯುತ್ ಕಡಿತವಾದರೆ ಹಲವು ದಿನ ಸಮಸ್ಯೆ ಎದುರಾಗುತ್ತದೆ. ಪರಿಹಾರ ಕಂಡುಕೊಳ್ಳಬೇಕು ಎಂದು ಹೇಳಿದರು.

ಶಿಕ್ಷಣ ಕ್ಷೇತ್ರದ ಸಾಧನೆಗಳಿಂದ ದೇಶದ ಅಭಿವೃದ್ಧಿಗೆ ಬುನಾದಿ ಹಾಕಲಾಗಿದೆ. ವಿದೇಶಗಳಲ್ಲಿ ಸಾಧನೆ ಮಾಡುತ್ತಿರುವ ಪ್ರತಿಭೆಗಳು ಭಾರತ ದೇಶದವರೇ, ಆಪರೇಷನ್ ಸಿಂಧೂರ ಮೂಲಕ ತಕ್ಕ ಉತ್ತರ ನೀಡಿದ ಪರಿಣಾಮ ಪಾಕಿಸ್ತಾನ ಯುದ್ಧ ವಿರಾಮಕ್ಕೆ ಬೇಡಿಕೊಂಡಿತು. ಸ್ವದೇಶಿ ವಸ್ತುಗಳನ್ನು ಬಳಸುವ ಮೂಲಕ ವಿದೇಶಿ ವಸ್ತುಗಳ ವ್ಯಾಮೋಹವನ್ನು ಬಿಡಬೇಕು ಎಂದು ಅವರು ಅಭಿಪ್ರಾಯಪಟ್ಟರು.

ಭಾರತದ ಶುಭಂ ಶುಕ್ಲ ಬಾಹ್ಯಾಕಾಶ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿರುವುದು ದೇಶದ ಹೆಮ್ಮೆ. ವಿದ್ಯೆಯ ಜೊತೆಗೆ ರಾಷ್ಟ್ರೀಯತೆಯನ್ನು ಮೈಗೂಡಿಸಬೇಕೆಂದು ಸಲಹೆ ನೀಡಿದರು.

ಶಾಲಾ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮವು ನೋಡುಗರ ಮನಸೆಳೆಯಿತು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವ್ಯಕ್ತಿಗಳಿಗೆ ಇದೇ ಸಂದರ್ಭದಲ್ಲಿ ಸನ್ಮಾನ ಮಾಡಲಾಯಿತು.

ವೇದಿಕೆಯಲ್ಲಿ ಪುರಸಭಾ ಅಧ್ಯಕ್ಷೆ ಜ್ಯೋತಿ ರಾಜಕುಮಾರ್, ಉಪಾಧ್ಯಕ್ಷೆ ಝರಿನ, ತಹಸಿಲ್ದಾರ್ ಸುಪ್ರಿತ, ತಾಲ್ಲೂಕು ಕಾರ್ಯ ನಿರ್ವಹಣಾಧಿಕಾರಿ ಗಂಗಾಧರ್, ಕ್ಷೇತ್ರ ಶಿಕ್ಷಣಾಧಿಕಾರಿ ಪುಷ್ಪ, ಡಿವೈಎಸ್ಪಿ ಪ್ರಮೋದ್ ಕುಮಾರ್, ಪುರಸಭಾ ಮುಖ್ಯಾಧಿಕಾರಿ ಮಹೇಶ್ವರಪ್ಪ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಮಹನೀಯರಹೋರಾಟ, ತ್ಯಾಗ, ಬಲಿದಾನಮರೆಯಬಾರದು

• ಪ್ರಜೋದಯ ವರದಿ

**ಅರಸೀಕೆರೆ:** ನಗರ ಸೇರಿದಂತೆ ತಾಲ್ಲೂಕಿನಾದ್ಯಂತ 79 ನೇ ಸ್ವಾತಂತ್ರ ದಿನಾಚರಣೆಯನ್ನು ಜನತೆ ಸಡಗರ ಸಂಭ್ರಮದೊಂದಿಗೆ ಆಚರಿಸುವ ಮೂಲಕ ದೇಶಾಭಿಮಾನ ಮೆರೆದರು.

ತಾಲ್ಲೂಕು ಆಡಳಿತ ಸೇರಿದಂತೆ ನಾನಾ ಸಂಘ ಸಂಸ್ಥೆಗಳು, ಪ್ರಗತಿಪರ ಸಂಘಟನೆಗಳು ಹಾಗೂ ಸಂಘ ಪರಿವಾರದ ವತಿಯಿಂದಲೂ ಸಹ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸುವುದರೊಂದಿಗೆ ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡು ನೆರೆದಿದ್ದ ಜನತೆಗೆ ಸಿಹಿ ಹಂಚಿ ಸಂಭ್ರಮಿಸುತ್ತಿದ್ದ ದೃಶ್ಯ ಕಂಡು ಬಂದಿತು.

ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ವತಿಯಿಂದ ನಗರದ ಜೇನುಕಲ್ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ ಮಾತನಾಡಿದ ತಹಸೀಲ್ದಾರ್ ಸಂತೋಷ್‌ಕುಮಾರ್ ಅವರು, ದಾಸ್ಯದಿಂದ ಸ್ವಾಭಿಮಾನದಡೆಗೆ ತಲೆ ತಗ್ಗಿಸಿ ನಡೆಯುತ್ತಿದ್ದ ದೇಶದ ಜನತೆ ತಲೆ ಎತ್ತಿ ನಡೆಯುವಂತೆ ಮಾಡಿದ ಆ ಸುದಿನವೇ 1947 ಆಗಸ್ಟ್ 15



ಸ್ವಾತಂತ್ರ್ಯ ದಿನವಾಗಿದೆ. ಈ ದಿನವನ್ನು ದೇಶದ ಜನತೆ ಸುಲಭವಾಗಿ ಕಾಣಲಿಲ್ಲ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಸೇರಿದಂತೆ ಅನೇಕ ಮಹನೀಯರ ಹೋರಾಟ, ತ್ಯಾಗ -ಬಲಿದಾನದಿಂದ ಸಾಧ್ಯವಾಗಿದ್ದು ಎಂಬುದನ್ನು ನಾವ್ಯಾರೂ ಇಂದು ಮರೆಯುವಂತಿಲ್ಲ ಎಂದರು.

ರಾಜ್ಯ ಗೃಹ ನಿರ್ಮಾಣ ಮಂಡಳಿ ಅಧ್ಯಕ್ಷ, ಶಾಸಕ ಕೆ.ಎಂ. ಶಿವಲಿಂಗೇಗೌಡ ಮಾತನಾಡಿ, ಸ್ವತಂತ್ರ ಭಾರತ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ. ಆದರೆ ದೇಶದ ಒಳಗೆ ರಾಜ್ಯ -ರಾಜ್ಯಗಳ ನಡುವೆ ಗಡಿ ಹಂಚಿಕೆ ಜಲ ಹಂಚಿಕೆ ವಿಷಯ ಸಂಬಂಧಿಸಿದಂತೆ ಆಗುತ್ತಿರುವ ವೈಮನಸ್ಸನ್ನು ರಾಜ್ಯ ಹಾಗೂ ದೇಶವನ್ನು ನಡೆಸುತ್ತಿರುವ ಪ್ರಬುದ್ಧ ರಾಜಕಾರಣಿಗಳು ತಮ್ಮ ಸ್ವಹಿತಾಸಕ್ತಿಯನ್ನು ಬದಿಗಿಟ್ಟು ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕಿದೆ. ಆ ಮೂಲಕ ಒಕ್ಕೂಟ ವ್ಯವಸ್ಥೆಯನ್ನು ಗಟ್ಟಿಗೊಳಿಸಬೇಕಿದೆ ಎಂದು ಹೇಳಿದರು.

ನಗರಸಭೆ ಅಧ್ಯಕ್ಷ ಎಂ. ಸಮೀವುಲ್ಲಾ, ಉಪಾಧ್ಯಕ್ಷ ಮನೋಹರ ಮೇಸ್ತ್ರಿ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಬಿ.ಎಸ್.ಅರುಣ್ ಕುಮಾರ್, ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಧರ್ಮಶೇಖರ್, ಉಪಾಧ್ಯಕ್ಷ ಜವನಪ್ಪ, ತಾ.ಪಂ. ಕಾರ್ಯ ನಿರ್ವಹಣಾಧಿಕಾರಿ ಸತೀಶ್, ಡಿವೈಎಸ್‌ಪಿ ಬಿ.ಆರ್. ಗೋಪಿ, ನಗರಸಭೆ ಪೌರಾಯುಕ್ತ ಕೃಷ್ಣಮೂರ್ತಿ, ಕ್ಷೇತ್ರ ಶಿಕ್ಷಣಾಧಿಕಾರಿ ಎಚ್.ಬಿ.ಮೋಹನ್‌ಕುಮಾರ್, ತಾಲ್ಲೂಕು ಶಿಕ್ಷಣ ಸಲಹಾ ಸಮಿತಿ ಸದಸ್ಯ ವೈ.ಕೆ.ದೇವರಾಜ್ ಇದ್ದರು.

# ಸ್ವಾತಂತ್ರ್ಯೋತ್ಸವ: ಪಥ ಸಂಚಲನ, ಸಾಂಸ್ಕೃತಿಕ ಕಾರ್ಯಕ್ರಮ

• ಪ್ರಜೋದಯ ವರದಿ

**ಹಾಸನ:** ರಾಷ್ಟ್ರೀಯ ಹಬ್ಬಗಳ ಆಚರಣ ಸಮಿತಿ ವತಿಯಿಂದ ಜಿಲ್ಲಾ ಕ್ರೀಡಾಂಗಣದ ಹಾಕಿ ಮೈದಾನದಲ್ಲಿ ಏರ್ಪಡಿಸಿದ್ದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಆಕರ್ಷಕ ಪಥ ಸಂಚಲನ, ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಮೊದಲಿಗೆ ಗಣ್ಯರು ಮಹಾತ್ಮ ಗಾಂಧೀಜಿ, ಡಾ.ಬಿ.ಆರ್.ಅಂಬೇಡ್ಕರ್ ಅವರು ಭಾವ ಚಿತ್ರಗಳಿಗೆ ಪುಷ್ಪನಮನ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಧ್ವಜಾರೋಹಣ ನೆರವೇರಿಸಿದ ಬಳಿಕ ಪೊಲೀಸ್ ಬ್ಯಾಂಡ್‌ನಿಂದ ರಾಷ್ಟ್ರಗೀತೆ ಮೊಗಿತು. ವಿದ್ಯಾರ್ಥಿಗಳ ತಂಡ ವಂದೇ ಮಾತರಂ, ನಾಡಗೀತೆ, ರೈತಗೀತೆ ಹಾಡಿತು.

ತದನಂತರ ಡಿಎಆರ್, ಕೆಎಸ್‌ಆರ್‌ಪಿ, ನಾಗರಿಕ ಪೊಲೀಸ್ ತಂಡ, ಮಹಿಳಾ ಪೊಲೀಸ್ ತಂಡ, ಗೃಹ ರಕ್ಷಕ ದಳ, ಅರಣ್ಯ ಇಲಾಖೆ ತಂಡ, ಅಬಕಾರಿ ಇಲಾಖೆ ತಂಡ, ಎನ್‌ಸಿಸಿ, ಸೇವಾದಳ ಹಾಗು ಶಾಲಾ ಮಕ್ಕಳು ಸೇರಿ ಒಟ್ಟು 38 ತುಕಡಿಗಳಿಂದ ಆಕರ್ಷಕ ಪಥಸಂಚಲನ ಮೂಡಿ ಬಂದಿತು. ವಿವಿಧ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ವೈಭವಯುತವಾಗಿ ಮೂಡಿ ಬಂದಿತು. ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು.

ಈ ವೇಳೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವವರನ್ನು ಸನ್ಮಾನಿಸಲಾಯಿತು. ಸಮಾಜ ಸೇವಾ ಕ್ಷೇತ್ರದಲ್ಲಿ ಸೈಯದ್ ಉಮರ್ ಪಾರೂಕ್, ಪತ್ರಿಕೋದ್ಯಮ ಡಿ.ಡಿ.ನ್ಯೂಸ್ ವರದಿಗಾರ ಹೆಚ್.ಎನ್.ಜ್ಞಾನೇಶ್ವರ್, ಜೇನುಗಿರಿ ಪತ್ರಿಕೆ ಸಂಪಾದಕ ಪ್ರಸನ್ನ ಕುಮಾರ್, ಹೋಂ ಗಾರ್ಡ್ಸ್ ಬಿ.ಆರ್.ಹರೀಶ್ ಕುಮಾರ್, ಅಗ್ನಿಶಾಮಕ ಎ.ಆರ್.ನಿಂಗರಾಜು, ಕ್ರೀಡಾ ಕ್ಷೇತ್ರದಲ್ಲಿ ಕರಾಟೆ ಕ್ರೀಡಾಪಟು ಅನುಷ್ಕಾ, ಜಿಮ್ನಾಸ್ಟಿಕ್ ಕ್ರೀಡಾಪಟು ಶ್ರೀಶಗೌಡ, ಪೌರ ಕಾರ್ಮಿಕರ ಕ್ಷೇತ್ರದಲ್ಲಿ ಸಣ್ಣಪ್ಪಯ್ಯ, ಸೇನಾ ಕ್ಷೇತ್ರದಲ್ಲಿ ರಂಗೇಗೌಡ, ಕಲಾವಿದರ ಕ್ಷೇತ್ರದಲ್ಲಿ ಯೋಗೀಶ್, ಆರೋಗ್ಯ ಇಲಾಖೆಯಲ್ಲಿ ನೇತ್ರ ಶಸ್ತ್ರ ಚಿಕಿತ್ಸಕ ಸಂದೀಪ್, ಸರ್ಕಾರಿ ಸೇವೆಯಲ್ಲಿ ಕಾರ್ಯನಿರ್ವಾಹಕ ಇಂಜಿನೀಯರ್ ಅರ್ಜುನ್ ಅವರನ್ನು ಸನ್ಮಾನಿಸಲಾಯಿತು.

ಸಂಸದ ಶ್ರೇಯಸ್ ಪಟೇಲ್, ಶಾಸಕ ಹೆಚ್.ಪಿ.ಸ್ವರೂಪ್ ಪ್ರಕಾಶ್, ಮಹಾನಗರ ಪಾಲಿಕೆ ಮೇಯರ್ ಎಂ.ಚಂದ್ರೇಗೌಡ, ಉಪ ಮೇಯರ್ ಹೇಮಲತಾ, ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸುಜೀತ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ, ಡಿಎಫ್‌ಒ ಸೌರಭ್ ಕುಮಾರ್ ಮತ್ತಿತರರು ಇದ್ದರು.





## ನಿಷ್ಪಕ್ಷಪಾತ ಚುನಾವಣೆಯಿಂದ ಪ್ರಜಾಪ್ರಭುತ್ವ ಉಳಿವು

» ಮೊದಲನೇ ಪುಟದಿಂದ

ಯಲ್ಲಿರುವ ಸ್ವಾತಂತ್ರ್ಯವನ್ನು ನಾವೇ ಬೇಜ ವಾಬ್ದಾರಿಯಿಂದ ಕಳೆದು ಕೊಳ್ಳುವಂತಾಗಬಾರದು. ಹೀಗಾಗಿ ಪ್ರತಿಯೊಬ್ಬ ಭಾರತೀಯನು ಎಚ್ಚೆತ್ತು ಕೊಳ್ಳಬೇಕು. ಚುನಾವಣಾ ವ್ಯವಸ್ಥೆ ಮೇಲೆ ದಿನೇ ದಿನೇ ಪ್ರಶ್ನೆಗಳು ಏಳುತ್ತಿವೆ. ಅದಕ್ಕೆ ನಾವು ಸಂಪೂರ್ಣ ವಿರಾಮ ಹಾಕಬೇಕಾದರೆ, ಚುನಾ ವಣಾ ಆಯೋಗ ಉತ್ತಮ ರೀತಿ ಯಲ್ಲಿ ಕೆಲಸ ಮಾಡುವ ಮೂಲಕ ಪ್ರಜಾಪ್ರಭುತ್ವ ಜೀವ ಕಳೆದುಕೊಳ್ಳದ ಹಾಗೆ ನೋಡಿಕೊಳ್ಳಬೇಕೆಂದು ಒತ್ತಾಯಿಸಿದರು.

**ಸ್ವಾತಂತ್ರ್ಯವನ್ನು ಯಾರು ಕೊಡಲಿಲ್ಲ**

ಇತರರ ದಾಸ್ಯದಲ್ಲಿ ಬದುಕಿ, ಬಹಳ ಸಂಘರ್ಷದ ನಂತರ ದೇಶಕ್ಕೆ ಸ್ವಾತಂತ್ರ್ಯ ದೊರೆತಿದೆ. ಸ್ವಾತಂತ್ರ್ಯ ವನ್ನು ಯಾರು ಕೊಡಲಿಲ್ಲ, ಯಾವು ದೇ ಕಾರಣಕ್ಕೂ ಭಾರತೀಯರಿಗೆ ಸ್ವತಂತ್ರ ನೀಡಬಾರದೆಂದು ಬ್ರಿಟೀಷರು ಸೇರಿ ಹಲವರು ಪ್ರಯತ್ನ ಮಾಡಿದರು. ಭಾರತ ವಿದೇಶಿಗರ ದಾಸ್ಯದಲ್ಲಿ ಮುಂದುವರೆಯಬೇಕು, ಭಾರತೀಯರು ಆಳುಗಳಾಗಿ ಕೆಲಸ ಮಾಡಬೇಕೆಂದು ಎಂಬ ಪ್ರಯತ್ನಗಳ ನಡುವೆಯೂ ನಮಗೆ ಸ್ವಾತಂತ್ರ್ಯ ಲಭಿಸಿದೆ ಎಂದರೆ ಅದು ಅನೇಕ ಭಾರ ತೀಯರ ಸಂಘರ್ಷ, ಹೋರಾಟ, ತ್ಯಾಗ, ಬಲಿದಾನದಿಂದ ಎಂದರು.

ಇಂದು ನಾವು ಭಾರತೀಯರಾಗಿ ಬದುಕುತ್ತಿದ್ದೇವೆ, ಯಾರ ಆಳುಗಳಾಗಿಲ್ಲ, ಸ್ವಾತಂತ್ರ್ಯವಾಗಿ ಉಸಿರಾಡುತ್ತಿದ್ದೇವೆ ಎಂದರೆ ಅದಕ್ಕೆ ಮಹನೀಯರ ಶ್ರಮ ಕಾರಣ, ಅವರ ಋಣದಲ್ಲಿ ಭಾರತ ಎಂದೆಂದಿಗೂ ಇರುತ್ತದೆ. ಹೋರಾಟ ಮಾಡದಿದ್ದರೆ ನಾವು ಎಲ್ಲಿಯವರೆಗೆ ದಾಸ್ಯದಲ್ಲಿ ಇರ ಬೇಕೆಂದು ಊಹಿಸಲು ಸಾಧ್ಯವಿಲ್ಲ. ಇಂತಹ ಸಂದ ರ್ಭದಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೆ ನಮನ ಅರ್ಪಿಸಿ ಬೇಕಾಗಿರುವುದು ಪ್ರತಿಯೊಬ್ಬ ಭಾರತೀಯನ ಧರ್ಮ ಎಂದು ಹೇಳಿದರು.

## ಹೆಚ್‌ಆರ್‌ಪಿ ಹಗರಣ ತನಿಖೆಗೆ ಪ್ರತ್ಯೇಕ ಸಮಿತಿ

» ಮೊದಲನೇ ಪುಟದಿಂದ

ಸಂಸದರು, ಶಾಸಕರು, ಅಧಿಕಾರಿಗಳ ಸಹಕಾರದಿಂದ ಜಿಲ್ಲೆಯ ಅಭಿವೃದ್ಧಿಗೆ ಕೈಲಾದ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಇಂಥಹ ಅವಕಾಶ ಮುಂದೆ ಸಿಗಲ್ಲ, ಸಿಕ್ಕಾಗ ಸಾರ್ವಜನಿಕ ಸೇವೆಯನ್ನು ಸಾರ್ಥಕವಾಗಿ ಮಾಡಬೇಕು ಎಂದರು.

> **ಕೆ.ಎನ್.ರಾಜಣ್ಣ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಿರುವುದು ಪಕ್ಷದ ತೀರ್ಮಾನ. ರಾಜಣ್ಣ ನನಗೆ ಆತ್ಮೀಯರು, ನನ್ನ ಹಿತೈಷಿಗಳು, ನಾನು ಅವರಿಗೆ ಗೌರವ ಕೊಡುತ್ತೇವೆ. ಮಂತ್ರಿಯಾಗಿ ಒಳ್ಳೆಯ ಕೆಲಸ ಮಾಡಿದ್ದಾರೆ. ಮುಂದೆ ದೆಹಲಿಗೆ ಹೋಗುವುದಾಗಿ ಹೇಳಿದ್ದಾರೆ. ಅದಕ್ಕೂ ಮುನ್ನ ಈ ಬಗ್ಗೆ ವಿಶ್ಲೇಷಣೆ ಮಾಡುವುದು ಸರಿಯಲ್ಲ.**
> **-ಕೃಷ್ಣಬೈರೇಗೌಡ, ಉಸ್ತುವಾರಿ ಸಚಿವ**

ಜಿಲ್ಲೆಯಲ್ಲಿ ನಾನಾ ಸಮಸ್ಯೆಗಳಿವೆ, ಜನಪ್ರತಿನಿಧಿಗಳು, ಅಧಿಕಾರಿಗಳ ಸಹಕಾರ ಪಡೆದು, ಏನೆಲ್ಲಾ ಮಾಡಬಹುದೋ ಅದನ್ನು ಮಾಡಿ ಮತ್ತಷ್ಟು ಪ್ರಗತಿ ಪಥದತ್ತ ಕೊಂಡೊಯ್ಯಲು ಪ್ರಾಮಾಣಿಕ ಪ್ರಯತ್ನ ಮಾಡುವೆ. ಈ ಹಿಂದಿನ ಎಲ್ಲಾ ಉಸ್ತುವಾರಿ ಸಚಿವರು ತಮ್ಮಗೆ ಸಿಕ್ಕ ಅವಕಾಶದಲ್ಲಿ ಉತ್ತಮ ಕೆಲಸಗಳನ್ನು ಮಾಡಿದ್ದಾರೆ. ನನಗೆ ಸಿಕ್ಕಿರುವ ಅವಕಾಶದಲ್ಲಿ ಉತ್ತಮ ಕೆಲಸ ಮಾಡಲು ಉತ್ಸುಹಕನಾಗಿದ್ದೇನೆ ಎಂದರು.

## ದೇಶದ ಅಭಿವೃದ್ಧಿಯಲ್ಲಿ ಯುವಕರ ಪಾತ್ರ ಮುಖ್ಯ

• ಪ್ರಜೋದಯ ವರದಿ



**ಆಲೂರು:** ಭಾರತ ದೇಶ ತನ್ನ ರಕ್ಷಣೆ ಜೊತೆಗೆ ಸರ್ವತೋಮುಖ ಅಭಿವೃದ್ಧಿಯಲ್ಲಿ ಜಗತ್ತಿನಲ್ಲೇ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ಶಾಸಕ ಸಿಮೆಂಟ್ ಮಂಜು ಅವರು ತಿಳಿಸಿದರು.

ಪಟ್ಟಣದ ಮಿನಿ ಕ್ರೀಡಾಂಗಣದಲ್ಲಿ ಏರ್ಪಡಿಸಲಾಗಿದ್ದ 79ನೇ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮೊದಲು ದೇಶ ನಂತರ ನಾವು ಎಂಬ ಮನೋಭಾವನೆ ಬೆಳೆಸಿಕೊಂಡು ದೇಶದ ಅಭಿವೃದ್ಧಿಯಲ್ಲಿ ಯುವಕರು ಪ್ರಮುಖ ಪಾತ್ರ ವಹಿಸಬೇಕು. ಭಾರತಾಂಬೆ ಎಂದಿಗೂ ಪ್ರಪಂಚದಲ್ಲಿ ತಲೆ ಎತ್ತಿ ನಿಲ್ಲುವಂತೆ ಮಾಡಲು ಎಲ್ಲರೂ ಶ್ರಮಿಸೋಣ ಎಂದರು.

ತಹಶೀಲ್ದಾರ್ ಮಲ್ಲಿಕಾರ್ಜುನ ಅವರು ಧ್ವಜಾರೋಹಣ ನೆರವೇರಿಸಿ ಮಾತನಾಡಿ, ಯುವಕರು ಸಾಮಾಜಿಕ ಜಾಲತಾಣಗಳ ದುರುಪಯೋಗ ಮಾಡಿಕೊಳ್ಳುತ್ತಿರುವುದನ್ನು ಕಡಿಮೆ ಮಾಡಬೇಕು. ಸಮಾನತೆ, ನಾವು ನಮ್ಮ ದೇಶದ ಸಮಾನತೆ ಐಕ್ಯತೆಯನ್ನು ಕಾಪಾಡುತ್ತೇವೆ. ಪರಿಸರ ಸಂರಕ್ಷಿಸುತ್ತೇವೆ. ಅಸ್ವಚ್ಚತೆಯನ್ನು ದೂರ ಮಾಡುತ್ತೇವೆ. ಶಿಕ್ಷಣವನ್ನು ಪ್ರೋತ್ಸಾಹಿ ಸುತ್ತೇವೆಂದು ಪ್ರತಿಜ್ಞೆ ಮಾಡೋಣ ಎಂದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಹೆಚ್.ಪಿ.ಮೋಹನ್,ಪತ್ರಿಕಾ ಮಾಧ್ಯಮ ಹೆಚ್.ಡಿ.ಪ್ರದೀಪ್, ಪೌರ ಕಾರ್ಮಿಕರಾದ ನಾಗರತ್ನ, ಎಸ್.ಎಸ್.ಎಲ್.ಸಿ. ಅತಿ ಹೆಚ್ಚು ಅಂಕ ಪಡೆದ ಎಂ.ಪಿ.ಭುವನ್, ಕ್ರೀಡೆ ಡಿ.ಜಿ.ಭವ್ಯ, ಮಾಜಿ ಸೈನಿಕ ಹವಾಲ್ದಾರ್ ಸಿ.ಎಸ್.ಆದರ್ಶ್, ಆರೋಗ್ಯ ಇಲಾಖೆ ಅಬುಕರ್, ಶಿಕ್ಷಣ ಇಲಾಖೆ ಎಂ.ಎಲ್.ಎಲಿಜಬೆತ್, ಸರ್ಕಾರಿ ಸೇವೆ ಸವಿತಾ, ಕೃಷಿಯಲ್ಲಿ ಧರ್ಮಲಿಂಗಂ, ಕಂದಾಯ ಇಲಾಖೆ ಅಂಜುಮ್ ಕಿಲ್ಲೆದಾರ್, ಸರ್ವೆ ಸೂಪರ್‌ವೈಸರ್ ಮಂಜೇಗೌಡ, ಶಿಕ್ಷಣ ಇಲಾಖೆ ಕೆ.ಎಲ್.ಪುರುಷೋತ್ತಮ, ಪೊಲೀಸ್ ಇಲಾಖೆ ಹಬೀಬ್, ನವೀನ್, ಮೋಹನ್ ಅವರನ್ನು ಸನ್ಮಾನಿಸಲಾಯಿತು.

ಪಟ್ಟಣ ಪಂಚಾಯಿತಿ ಅಧ್ಯಕ್ಷೆ ತಾಹೆರಾ ಬೇಗಂ, ಬಿಇಒ ಎ.ಜೆ.ಕೃಷ್ಣೇಗೌಡ, ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಸುಬ್ರಹ್ಮಣ್ಯ, ಇನ್ಸ್‌ಪೆಕ್ಟರ್ ಮೋಹನ್‌ರೆಡ್ಡಿ, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಮಂಜುನಾಥ್, ತಾಲ್ಲೂಕು ವೈದ್ಯಾಧಿಕಾರಿ ಡಾ||ನಿಸಾರ್ ಫಾತಿಮ, ಆರ್.ಎಫ್.ಒ. ರಾಥೋಡ್ ಸುನಿಲ್, ನಾಗರೀಕ ಹೋರಾಟ ಸಮಿತಿ ಅಧ್ಯಕ್ಷ ಕೆ. ಎಸ್.ಮಂಜೇಗೌಡ, ತಾಲ್ಲೂಕು ನೌಕರರ ಸಂಘದ ಅಧ್ಯಕ್ಷ ವರದರಾಜು, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಶಾಂತಕೃಷ್ಣ, ರಂಗಯ್ಯ, ಪಟ್ಟಣ ಪಂಚಾಯಿತಿ ಸದಸ್ಯರು, ಅಧಿಕಾರಿಗಳು ಉಪಸ್ಥಿತರಿದ್ದರು.

## ಅತೀ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಭಾರತ : ಎ.ಮಂಜು

• ಪ್ರಜೋದಯ ವರದಿ



**ಅರಕಲಗೂಡು:** ಜಗತ್ತಿನಲ್ಲಿಯೇ ಭಾರತ ದೇಶ 140 ಕೋಟಿಗೂ ಹೆಚ್ಚು ಜನರಿರುವ ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರವೆಂಬ ಹೆಗ್ಗಳಿಕೆ ನಮ್ಮದಾಗಿದೆ. ನಾವೆಲ್ಲರೂ ಒಟ್ಟಾಗಿ ನಮ್ಮ ನಮ್ಮ ಕರ್ತವ್ಯಗಳನ್ನು ನಿರ್ವಹಿಸಿದರೇ ಜಗತ್ತಿನ ಬಲಿಷ್ಠ ರಾಷ್ಟ್ರವಾಗಿ ನಿರೂಪಿಸಬಹುದೆಂದು ಶಾಸಕ ಎ.ಮಂಜು ಅವರು ತಿಳಿಸಿದರು.

ಪಟ್ಟಣದ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ನಡೆದ 79ನೇ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸ್ವಾತಂತ್ರ್ಯ ದಿನದಂದು ಎಲ್ಲಾ ಮಹನೀಯರನ್ನು ಸ್ಮರಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವೆಂದರು.

ಇಡೀ ನಮ್ಮ ರಾಷ್ಟ್ರೀಯ ಹೋರಾಟ ಜಗತ್ತಿನ ಎಲ್ಲಾ ಹೋರಾಟಗಳಿಗಿಂತ ವಿಭಿನ್ನ ಮತ್ತು ಮಾದರಿಯ ಹೋರಾಟವಾಗಿದೆ. ಏಕೆಂದರೆ ನಮ್ಮ ಸ್ವಾತಂತ್ರ್ಯದ ಬೇಡಿಕೆಯನ್ನು ಈಡೇರಿಸಿ ಕೊಳ್ಳಲು ಅನುಸರಿಸಿದ ಮಾರ್ಗ ಗಳು ಮಾದರಿಯಾದವುಗಳು. ಸತ್ಯಾಗ್ರಹ, ಉಪವಾಸ, ಅಹಿಂಸೆ ಇಂತಹ ಮಾರ್ಗಗಳು ಜಗತ್ತಿನ ಮತ್ಯಾವುದೇ ರಾಷ್ಟ್ರದಲ್ಲಿ ಜರುಗಿಲ್ಲ. ನಮ್ಮ ಸ್ವಾತಂತ್ರ್ಯಕ್ಕಾಗಿ ಲಕ್ಷಾಂತರ ಹಿರಿಯರು ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಾಣ, ಆಸ್ತಿ-ಪಾಸ್ತಿಗಳು ಬಲಿದಾನ ಮಾಡಿದ್ದಾರೆ. ಅವರನ್ನು ನೆನಪಿಸಿಕೊಂಡು ಗೌರವ ಸಮ ರ್ಪಣೆ ಮಾಡುವ ಕೆಲಸ ಹೆಚ್ಚು ನಡೆಯಬೇಕೆಂದು ಹೇಳಿದರು.

ದೇಶ ಸ್ವಾವಲಂಬಿಯಾಗುತ್ತಿರುವುದು ನಮ್ಮೆಲ್ಲರ ಹೆಮ್ಮೆ. ವಿಜ್ಞಾನ ಕ್ಷೇತ್ರದಲ್ಲಿ ಇಸ್ರೋ ಸಂಸ್ಥೆಯು ಉತ್ಕೃಷ್ಟವಾದ ಸಾಧನೆಯನ್ನು ಮಾಡಿದೆ. ಇತ್ತೀಚೆಗೆ ಭಾರತದ ಶುಭಾಂಶು ಶುಕ್ಲಾ ಬಾಹ್ಯಾಕಾಶದಲ್ಲಿ 18 ದಿನಗಳನ್ನು ಕಳೆ ದಿದ್ದು ನಮ್ಮೆಲ್ಲರ ಹಿರಿಮೆಯಾಗಿದೆ. ಇತ್ತೀಚೆಗೆ ಪಾಕಿಸ್ತಾನ ನಮ್ಮನ್ನು ಕೆಣಕಿದಾಗ ಆಪರೇಷನ್ ಸಿಂದೂರ್‌ನ ಮೂಲಕ ತಕ್ಕ ಪ್ರತ್ಯುತ್ತರವನ್ನು ನಮ್ಮ ಸೇನೆ ನೀಡಿದೆ. ಇಂದು ನಮ್ಮ ಸ್ವದೇಶಿ ನಿರ್ಮಿತ ಮಿಲಿಟರಿ ಶಸ್ತ್ರಸ್ತ್ರಗಳಿಗೆ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಸಾಕಷ್ಟು ಬೇಡಿಕೆ ಇದೆ. ಈ ಬಾರಿ ನಮ್ಮದೆ ಜಿಲ್ಲೆಯ ಭಾನು ಮುಸ್ತಾಕ್ ಅವರ ಹಾರ್ಟ್‌ಲ್ಯಾಂಪ್ ಕೃತಿಗೆ ಇಂಟರ್‌ನ್ಯಾಷನಲ್ ಬೂಕರ್ ಪ್ರಶಸ್ತಿ ದೊರೆತಿರುವುದು ನಮ್ಮೆಲ್ಲರ ಹೆಮ್ಮೆ. ದೇಶದಲ್ಲಿ ಸಾಧನೆ ಮಾಡಿರುವ ಗಣ್ಯರಿಗೆ ಈ ವೇದಿಕೆ ಮುಖಾಂ ತರ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ತಹಶೀಲ್ದಾರ್ ಸೌಮ್ಯ ಅವರು ಧ್ವಜಾ ಸಂದೇಶ ನೀಡಿ, ನಮ್ಮ ಭಾರತದ ರಾಷ್ಟ್ರಧ್ವಜವು ಏಕತೆ, ಸ್ವಾತಂತ್ರ್ಯ, ರಾಷ್ಟ್ರೀಯ ಹೆಮ್ಮೆಯ ಸಂಕೇತವಾಗಿದೆ. ರಾಷ್ಟ್ರಧ್ವಜ ವಿವಿಧ ಧರ್ಮ, ವಿವಿಧ ಪ್ರದೇಶ ಮತ್ತು ವಿವಿಧ ಸಂಸ್ಕೃತಿಗಳು ಒಂದು ಸಂಕೇತದ ಅಡಿಯಲ್ಲಿ ಒಂದಾಗಿ ರುವುದನ್ನು ಸೂಚಿಸುತ್ತದೆ. ಇಂದು ಇಡೀ ದೇಶಾದ್ಯಂತ ಅತ್ಯಂತ ಸಂತಸ, ಸಡಗರದಿಂದ ಸ್ವಾತಂತ್ರ್ಯ ದಿನಾ ಚರಣೆ ಆಚರಿಸಲಾಗುತ್ತಿದೆ. ಜಾತಿ, ಧರ್ಮ, ಸ್ಥಳಗಳ ಭೇದವಿಲ್ಲದೆ ಎಲ್ಲರೂ ಸೇರಿ ಆಚರಿಸು ತ್ತಿದ್ದೇವೆ. ನಮ್ಮ ಧ್ವಜದ ಕೇಸರಿ ತ್ಯಾಗ, ಧೈರ್ಯಗಳ ಸಂಕೇತವಾಗಿದೆ. ಬಿಳಿ ಶಾಂತಿ, ಸತ್ಯ, ಪ್ರಾಮಾಣಿಕತೆಯ ಸಂಕೇತವಾಗಿದೆ ಹಾಗೂ ಹಸಿರು ಸಮೃದ್ಧಿಯ ಸಂಕೇತವಾಗಿದೆ. ರಾಷ್ಟ್ರಧ್ವಜ ದೇಶಭಕ್ತಿಯ ಸಂಕೇತವಾಗಿದೆ ಎಂದು ಹೇಳಿದರು.

ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಗೌರವಿಸಲಾಯಿತು. ವಿವಿಧ ಶಾಲಾ ಮಕ್ಕಳಿಂದ ಸಾಂಸ್ಕೃತಿ ಕಾರ್ಯಕ್ರಮ ಮೂಡಿಬಂದಿತು.

ವೇದಿಕೆಯಲ್ಲಿ ಇಲಾಖೆ ಅಧಿಕಾರಿಗಳು, ಸಿಬ್ಬಂದಿ, ಪಟ್ಟಣ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ಮುಖಂಡರು ಉಪಸ್ಥಿತರಿದ್ದರು.

## ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಎಲ್ಲರೂ ಕೈ ಜೋಡಿಸಿ


» ಮೊದಲನೇ ಪುಟದಲ್ಲಿ

ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅವರ ಸಾಮಾಜಿಕ ಕಳಕಳಿ ಹಾಗು ಇಳಿವಯಸ್ಸಿನಲ್ಲಿಯೂ ಸಮಾ ಜದ ಕೆಲಸದಲ್ಲಿ ತೊಡಗಿರುವುದು ಹೆಮ್ಮೆಯ ವಿಚಾರವೆಂದರು.

ಮಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಚೌಡುವಳ್ಳಿ ಜಗದೀಶ್ ಅವರು ಮಾತನಾಡಿ, ಜಿ.ಎಲ್. ಮುದ್ದೇಗೌಡ ಅವರು ಶತಾಯುಷಿ ಯಾಗಿ ಸಾಮಾಜಿಕ ಕಾರ್ಯಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಸ್ವಾತಂತ್ರ್ಯ ಹೋರಾಟಗಾರರಾಗಿ, ಉದ್ಯಮಿಯಾಗಿ, ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆ ಅಮೂಲ್ಯವಾದುದು. ಇಂತಹ ಮೇರು ವ್ಯಕ್ತಿತ್ವದ ವ್ಯಕ್ತಿಯ ಜೀವನ ಶೈಲಿಯನ್ನು ಯುವಕರು ಅಳವಡಿಸಿಕೊಳ್ಳಬೇಕೆಂದರು.

ಪ್ರಾಂಶುಪಾಲ ಡಾ. ಎ.ಜೆ.ಕೃಷ್ಣಯ್ಯ ಅವರು ಮಾತಾನಾಡಿ, ಹಿರಿಯರಾದ ಜಿ.ಎಲ್.ಮುದ್ದೇಗೌಡರ ಬದುಕು ನಮಗೆ ಸ್ಪೂರ್ತಿ ತಂದಿದೆ ಎಂದರು. ಎಂಟಿಇಎಸ್ ನಿರ್ದೇಶಕ ಡಾ. ಎಸ್. ಪ್ರದೀಪ್ ಅವರು ಜಿ.ಎಲ್.ಮುದ್ದೇಗೌಡರ ಸನ್ಮಾನ ಪತ್ರ ಓದಿದರು. ಪ್ರಭಾರ ಖಜಾಂಚಿ ರಾಜಶೇಖರ್, ನಿರ್ದೇಶಕ ಶಾಂತಿಗ್ರಾಮ ಶಂಕರ್, ಎವಿಕೆ ಪಿಯು ಕಾಲೇಜು ಉಪಾಧ್ಯಕ್ಷ ನಾಗರಾಜ್ ಜೈನ್, ನಿವೃತ್ತ ಪ್ರಾಧ್ಯಾಪಕ ಡಾ. ಎಸ್. ಮೋಹನ್‌ಕುಮಾರ್,ಕುಮುದ ಇದ್ದರು.

## ಜಿಲ್ಲಾ ವರ್ತಕರ ಸಂಘದಿಂದ ಸ್ವಾತಂತ್ರ್ಯೋತ್ಸವ



ಹಾಸನ: ಜಿಲ್ಲಾ ವರ್ತಕರ ಸಂಘದಿಂದ ನಗರದ ಸುಭಾಷ್ ಚೌಕದಲ್ಲಿ ನಡೆದ 79ನೇ ಸ್ವಾತಂತ್ರ್ಯೋತ್ಸವ ಧ್ವಜಾರೋಹಣವನ್ನು ಮಹಾನಗರ ಪಾಲಿಕೆ ಮೇಯರ್ ಎಂ.ಚಂದ್ರೇಗೌಡ ಅವರು ನೆರವೇರಿಸಿದರು.

ಜಿಲ್ಲಾ ವರ್ತಕರ ಸಂಘದ ಅಧ್ಯಕ್ಷ ಹೆಚ್.ಟಿ.ಶೇಖರ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶಾಸಕ ಹೆಚ್.ಪಿ.ಸ್ವರೂಪ್, ಮೇಯರ್ ಎಂ.ಚಂದ್ರೇಗೌಡ, ಶಬೀರ್ ಅಹ್ಮದ್, ಸದಸ್ಯ ಆರ್. ಮೋಹನ್ ಅವರನ್ನು ಸನ್ಮಾನಿಸಲಾಯಿತು.

ವರ್ತಕರಾದ ಹೆಚ್.ಎಸ್.ಇಂದ್ರಕುಮಾರ್, ಹೆಚ್.ಎಸ್.ಮಂಜುನಾಥಶೆಟ್ಟಿ, ರಂಗನಾಥ ಶೆಟ್ಟಿ, ರಘು, ಎ.ಗಫಾರ್, ವೇಣುಗೋಪಾಲ್, ಮಹಾಂತೇಶ್, ವೆಂಕಟೇಶ್, ಶ್ರೀನಿವಾಸ ಶೆಟ್ಟಿ, ಹೆಚ್.ಎಲ್.ವಿಜಯೇಂದ್ರರಾವ್, ಹೆಚ್.ಎಸ್.ಸಾಗರ್ ಮತ್ತಿತರರು ಇದ್ದರು.



**ಹಾಸನ: ನಗರದ ಜೀವನ ಜ್ಯೋತಿ ಕಿವುಡು ಮತ್ತು ಮೂಗ ಮಕ್ಕಳ ಶಾಲೆಯಲ್ಲಿ 79ನೇ ಸ್ವಾತಂತ್ರ್ಯೋತ್ಸವ ಆಚರಿಸಲಾಯಿತು. ಅನನ್ಯ ಟ್ರಸ್ಟ್ ಅಧ್ಯಕ್ಷೆ ಕೆ.ಟಿ.ಜಯಶ್ರೀ, ಮುಖ್ಯಶಿಕ್ಷಕಿ ತಹಸೀನಾ ಬಾನು, ಶಿಕ್ಷಕಿಯರಾದ ರೂಪ, ಪ್ರಭಾವತಿ, ಬೋಧಕೇತರ ಸಿಬ್ಬಂದಿ ಸುಂದ್ರಮ್ಮ, ಮಂಜುಳಾ, ತಿಮ್ಮೇಗೌಡ, ಜರಿನ, ವೈಷ್ಣವಿ ಹಾಜರಿದ್ದರು.**

## ಅತ್ಯಾಚಾರ ಸಂತ್ರಸ್ತೆ ಕುಟುಂಬಕ್ಕೆ ಸ್ವರೂಪ್ ಸಾಂತ್ವನ

• ಪ್ರಜೋದಯ ವರದಿ

**ಹಾಸನ:** ನಗರದ ಪೆನ್ಸನ್ ಮೊಹಲ್ಲಾ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸಾಮೂಹಿಕ ಅತ್ಯಾಚಾರಕ್ಕೊಳಗಾದ ಸಂತ್ರಸ್ತೆ ಕುಟುಂಬವನ್ನು ಶಾಸಕ ಹೆಚ್.ಪಿ.ಸ್ವರೂಪ್ ಅವರು ಭೇಟಿ ಮಾಡಿ ಸಾಂತ್ವನ ಹೇಳಿದರು.

ನಗರದ ಹಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿವ ಸಂತ್ರಸ್ತೆಯ ಆರೋಗ್ಯ ಸ್ಥಿತಿಗತಿ ಬಗ್ಗೆ ವಿಚಾರಿಸಿ ಗುಣಮಟ್ಟದ ವೈದ್ಯಕೀಯ ಸೌಲಭ್ಯ ಒದಗಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಸಂತ್ರಸ್ತೆಗೆ ದೊರೆಯ ಬಹುದಾದ ಪರಿಹಾರ ಸೌಲಭ್ಯ ಒದಗಿಸುವಂತೆ ಚರ್ಚಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಗರದಲ್ಲಿ ನಡೆದಿರುವ ಈ ಹೇಯ ಕೃತ್ಯದ ಬಗ್ಗೆ ಅಧಿವೇಶನದಲ್ಲಿ ಮಾತನಾಡಿ ಇಂತಹ ಪ್ರಕರಣಗಳು ಮತ್ತೆ ನಡೆಯದಂತೆ ಹಾಗು ಜಿಲ್ಲೆಯಲ್ಲಿ ನಡೆಯುತ್ತಿರುವ ಡ್ರಗ್ಸ್, ಗಾಂಜಾದಂತಹ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕುವಂತೆ ಸರ್ಕಾರವನ್ನು ಒತ್ತಾಯಿಸುವುದಾಗಿ ತಿಳಿಸಿದರು.

ಸಾಮೂಹಿಕ ಅತ್ಯಾಚಾರ ಪ್ರಕರಣ ನಮ್ಮೆಲ್ಲರಿಗೂ ದುಃಖ ತರಿಸಿದೆ. ನಗರ ಸಭೆ ಸದಸ್ಯ ರೊಂದಿಗೆ ಸಂತ್ರಸ್ತೆ ಕುಟುಂಬಕ್ಕೆ ಧೈರ್ಯ ತುಂಬುವ ಕೆಲಸ ಮಾಡಿದ್ದೇವೆ. ಬೇರೆ ಬೇರೆ ಚಟ ಗಳಿಗೆ ಒಳಗಾಗಿ ಈ ಕೃತ್ಯ ಎಸಗ ಲಾಗಿದೆ. ಜಿಲ್ಲೆಯಲ್ಲಿ ಮಾದಕ ವಸ್ತು ನಿಯಂತ್ರಣಕ್ಕೆ ಸರ್ಕಾರ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಹೆಣ್ಣುಮಕ್ಕಳು ನಿರ್ಭೀತಿಯಿಂದ ಓಡಾಡಲು ನಗರದಲ್ಲಿ ಪೊಲೀಸ್ ಭದ್ರತೆ ಹೆಚ್ಚಿಸಬೇಕೆಂದು ಒತ್ತಾಯಿಸಿದರು.

ನಾಲ್ಕು ಅತ್ಯಾಚಾರ ಆರೋಪಿಗಳನ್ನು ಬಂಧಿಸಿರುವುದಾಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ. ಈ ಬಗ್ಗೆ ಯಾವ ರೀತಿ ಕಾನೂನ ಹೋರಾಟ ಮಾಡಬೇಕೆಂಬ ಎಂಬುದರ ಬಗ್ಗೆ ಪೊಲೀಸರೊಂದಿಗೆ ಚರ್ಚೆ ಮಾಡುತ್ತೇವೆ. ಸಂತ್ರಸ್ತೆ ಬುದ್ಧಿ ಮಾಂದ್ಯಳಾಗಿರುವುದರಿಂದ ಸರ್ಕಾರದಿಂದ ಸಿಗಬೇಕಾದ ಪರಿಹಾರವನ್ನು ಕೊಡಿಸಲಾಗುವುದು. ಮುಂದಿನ ದಿನಗಳಲ್ಲಿ ಜೀವನ ನಡೆಸಲು ಬೇಕಾದ ಸೌಲಭ್ಯವನ್ನು ನಾವೆಲ್ಲ ಸೇರಿ ಕಲ್ಪಿಸಿ ಕೊಡಲಾಗುವುದೆಂದು ಹೇಳಿದರು.



## ವೀರ ಮಹನೀಯರ ತ್ಯಾಗ ಬಲಿದಾನದ ಸಂಕೇತವೇ ಸ್ವಾತಂತ್ರ್ಯ ದಿನ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಅದೆಷ್ಟೋ ವೀರ ಮಹನೀಯರ ತ್ಯಾಗ ಬಲಿದಾನದ ಸಂಕೇತವೇ ಸ್ವಾತಂತ್ರ್ಯ ದಿನ ಎಂದು ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎನ್.ಆರ್.ತಾತೇಗೌಡ ಅವರು ಹೇಳಿದರು.

ತಾಲ್ಲೂಕಿನ ದಿಡಗ ಕೃಷಿ ಪತ್ತಿನ ಸಹಕಾರ ಸಂಘದ ವತಿಯಿಂದ ಶುಕ್ರವಾರ ಹಮ್ಮಿಕೊಂಡಿದ್ದ 79ನೇ ಸ್ವಾತಂತ್ರ್ಯ ದಿನಾಚರಣೆ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ಅವರ ಹೋರಾಟದ ಫಲವಾಗಿ ನಾವು ಇಂದು ಸ್ವತಂತ್ರರಾಗಿ ಬದುಕುತಿದ್ದೇವೆಂದು ಸ್ಮರಿಸಿ ದರು. ದಂಡೆತ್ತಿ ಬಂದ ಅನೇಕ ಅಕ್ರಮಣಕಾರರು ಅಖಂಡ ಭಾರತ ದೇಶವನ್ನು ಆಕ್ರಮಣಗೊಳಿಸಿ ಆಳ್ವಿಕೆ ನಡೆಸಿದ್ದು, ನಮ್ಮ ಪೂರ್ವಿಕರನ್ನು ಗುಲಾಮರಂತೆ ಕಂಡಿದ್ದರು. ಇನ್ನು ಬ್ರಿಟೀಷರು ಸರಿ ಸುಮಾರು 300ಕ್ಕೂ ಹೆಚ್ಚು ವರ್ಷಗಳ ಕಾಲ ನಮ್ಮನ್ನು ಆಳಿದ್ದಾರೆ ಎಂದರು.

ಮಹಾತ್ಮ ಗಾಂಧೀಜಿ, ನೆಹರು, ಸುಭಾಷ್ ಚಂದ್ರಬೋಸ್, ಸರ್ದಾರ್ ವಲ್ಲಭಾಯ್ ಪಟೇಲ್, ವೀರ ಸಂಗೊಳ್ಳಿ ರಾಯಣ್ಣ, ಕಿತ್ತೂರು ರಾಣಿ ಚೆನ್ನಮ್ಮ ಸೇರಿ ಅನೇಕ ಮಂದಿ ಮಹನೀಯರು ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವ ಹಾಗೂ ಜೀವನವನ್ನು ತ್ಯಾಗ ಮಾಡಿದ್ದಾರೆ. ಅಂದು ಅವರು ಹೋರಾಡಿ ಸ್ವಾತಂತ್ರ್ಯ ಕೊಡಿಸಿದ್ದರಿಂದ ಇಂದು ನಾವು ನೆಮ್ಮದಿ ಹಾಗೂ ಸುಂದರ ಬದುಕು ಕಟ್ಟಿಕೊಂಡು ಬದುಕುತಿದ್ದೇವೆಂದು ತಿಳಿಸಿದರು.

ಸ್ವಾತಂತ್ರ್ಯ ಎಂಬುದು ಕೇವಲ ಒಂದು ದಿನ ಸಿಹಿ ಹಂಚಿ ಸಂಭ್ರಮಿಸುವ ಹಬ್ಬವಲ್ಲ. ಪ್ರತಿದಿನ, ಪ್ರತಿಕ್ಷಣ ಮನಸ್ಸಿನಲ್ಲಿ ಆರಾಧಿಸುವ ಉಸಿರಾಗಬೇಕು. ತಮ್ಮ ಬದುಕನ್ನು ಬಲಿಕೊಟ್ಟು ಮಹ ನೀಯರು ತಂದುಕೊಟ್ಟಿರುವ ಸ್ವಾತಂತ್ರ್ಯವನ್ನು ಉಳಿಸಿ ಬೆಳೆಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವೆಂದು ತಿಳಿಸಿದರು.

ನಂತರ 2024-25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಪಡೆದಿರುವ 15ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಅಭಿನಂಧಿಸಲಾಯಿತು. ದಿಡಗ ಗ್ರಾಮದ ಡಾ. ರಾಜ್ ವೃತ್ತದಲ್ಲಿ ಮೆರವಣಿಗೆಯಲ್ಲಿ ಸಾಗಿದ ಸರ್ಕಾರಿ ಹಿರಿಯ, ಕಿರಿಯ ಹಾಗೂ ಪ್ರೌಢಶಾಲೆ, ಕಾಲೇಜು ಮತ್ತು ಅರುಣೋದಯ, ಹೊಯ್ಸಳ ವಿದ್ಯಾ ಸಂಸ್ಥೆಯ ವಿದ್ಯಾರ್ಥಿಗಳಿಗೆ ಶುಭಾಶಯ ಕೋರಿ ಸಿಹಿ ಹಂಚಲಾಯಿತು.

ಸಂಘದ ಉಪಾಧ್ಯಕ್ಷ ಕುಮಾರ್, ಮಾಜಿ ಅಧ್ಯಕ್ಷರಾದ ಹೆಚ್.ಕೆ. ಯೋಗೇಶ್, ನಿಂಗೇಗೌಡ, ನಿರ್ದೇಶಕರಾದ ಮಲ್ಲೇಶ್‌ಗೌಡ, ಹೆಚ್.ಎಸ್. ಮಹೇಶ್, ಮಧುಗೌಡ, ಬಾಲು, ವೆಂಕಟೇಶ್, ಜಯಮ್ಮ, ವನಜಾ ಕ್ಷಮ್ಮ, ತುಳಸಿ, ಕಾರ್ಯನಿರ್ವಹಣಾ ಧಿಕಾರಿ ನಿಂಗಮ್ಮ, ಸಿಬ್ಬಂದಿ ವರ್ಗ ಹಾಗೂ ಇನ್ನಿತರರು ಇದ್ದರು.

## ಭಾರತವು ಸ್ವಾತಂತ್ರ್ಯದಿಂದ ನೆಮ್ಮದಿಯ ನೆಲೆಬೀಡು



• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಭಾರತ ದೇಶವು ಸ್ವಾತಂತ್ರ್ಯ ಪಡೆದು ನೆಮ್ಮದಿಯ ನೆಲೆಬೀಡಾಗಲು ಅನೇಕ ಮಹನೀಯರ ರಕ್ತ ಬಲಿದಾನವೇ ನಡೆದು ಹೋಗಿದೆ ಎಂದು ದಿಡಗ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಹೆಚ್.ಕೆ.ಯೋಗೇಶ್ ಅವರು ಹೇಳಿದರು.

ತಾಲ್ಲೂಕಿನ ಉಳ್ಳಾವಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮಾತನಾಡಿ, ಅವರು ಕಲ್ಪಿಸಿಕೊಟ್ಟ ಸ್ವಾತಂತ್ರ್ಯದಿಂದ ನಾವೆಲ್ಲರೂ ನೆಮ್ಮದಿಯೊಂದಿಗೆ ನಡೆದು ಸಾಗುತಿದ್ದೇವೆ. ಕೇವಲ ಮಸಾಲ ಪದಾರ್ಥಗಳ ಸಲುವಾಗಿ ನಮ್ಮ ದೇಶಕ್ಕೆ ತಕ್ಕಡಿ ಹಿಡಿದು ವ್ಯಾಪಾರಕ್ಕೆ ಬಂದ ಬ್ರಿಟೀಷರು ನಮ್ಮ ಪೂರ್ವಿಕರ ಒಳ್ಳೆತನ ಹಾಗೂ ಮುಗ್ಧತೆಯನ್ನು ದುರುಪಯೋಗ ಪಡಿಸಿಕೊಂಡು ಇಲ್ಲಿಯೇ ಟಿಕಾಣಿಯೂಡಿ ಅಧಿಕಾರದ ಚುಕ್ಕಾಣಿ ಹಿಡಿದು ನಮ್ಮನ್ನೇ ಆಳಿದ್ದು ದುರಂತದ ಸಂಗತಿ ಎಂದು ಕಳವಳ ವ್ಯಕ್ತಪಡಿಸಿದರು.

ನಂತರದಲ್ಲಿ ಮಹಾತ್ಮ ಗಾಂಧೀಜಿ, ಸುಭಾಶ್ ಚಂದ್ರ ಭೋಸ್ ಸೇರಿ ಬಹುತೇಕ ಮಹನೀ ಯರ ಮುಂದಾಳತ್ವದಲ್ಲಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆದಿದ್ದು ಸಾಕಷ್ಟು ಮಂದಿ ಹೋರಾಟಗಾರರು ತಮ್ಮ ನೆತ್ತರವನ್ನೇ ಹರಿಸಬೇಕಾಯಿತು. ಅದರ ಫಲವಾಗಿ ನಮಗೆ ಸ್ವಾತಂತ್ರ್ಯ ದೊರೆತಿದ್ದು ಇಂದಿಗೂ ಸುರಕ್ಷಿತವಾಗಿದ್ದೇವೆಂದು ತಿಳಿಸಿದರು.

ಎಸ್‌ಡಿಎಂಸಿ ಅಧ್ಯಕ್ಷ ಆರ್.ಶ್ರೀನಿವಾಸ್ ಧ್ವಜಾರೋಹಣ ನೆರವೇರಿಸಿದರು. ವಿದ್ಯಾರ್ಥಿಗಳು ದೇಶಭಕ್ತಿ ಗೀತೆಗಳಿಗೆ ನೃತ್ಯ ಮಾಡಿದರು. ಸ್ವಾತಂತ್ರ್ಯ ದಿನಾಚರಣೆ ಹಿನ್ನಲೆ ಕಳೆದ ವಾರ ಹಮ್ಮಿಕೊಂಡಿದ್ದ ಕ್ರೀಡಾಕೂಟದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ಗೆಲುವು ಸಾಧಿಸಿದ್ದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಿ ಅಭಿನಂಧಿಸಲಾಯಿತು.

ಮುಖ್ಯಶಿಕ್ಷಕ ಕುಮಾರ್, ಸಹಶಿಕ್ಷಕಿ ಶ್ರೀದೇವಿ, ಅತಿಥಿ ಶಿಕ್ಷಕಿ ಅನುಷ, ಗ್ರಾಮಸ್ಥರಾದ ನಾಗರಾಜ್, ಶಿವರಾಜ್, ಪುಟ್ಟಸ್ವಾಮಿಗೌಡ, ಶಿವಣ್ಣ, ಸುರೇಶ್, ಕುಮಾರ್ ಇತರರು ಇದ್ದರು.

**ಮೂವರಿಂದ ದೆಹಲಿಯಲ್ಲಿ ನನ್ನ ವಿರುದ್ಧ ಷಡ್ಯಂತ್ರ | ಸಮಯ ಬಂದಾಗ ಎಲ್ಲಾ ಹೇಳುವೆ**

# ಪಿತೂರಿ ವಿದ್ಯೆ ನನಗೂ ಗೊತ್ತಿದೆ: ರಾಜಣ್ಣ

• ಪ್ರಜೋದಯ ವರದಿ

**ಬೆಂಗಳೂರು:** ಪಿತೂರಿ ಮಾಡುವುದು ನನಗೂ ಬರುತ್ತದೆ. ಆ ವಿದ್ಯೆ ಬರುವುದಿಲ್ಲ ಅಂದು ಕೊಳ್ಳಬೇಕಿಲ್ಲ ಎಂದು ಸಚಿವ ಸ್ಥಾನದಿಂದ ವಜಾಗೊಂಡಿರುವ ಕೆ.ಎನ್.ರಾಜಣ್ಣ ಪರೋಕ್ಷವಾಗಿ ತಮ್ಮ ವಿರೋಧಿಗಳಿಗೆ ಎಚ್ಚರಿಕೆ ನೀಡಿದರು.

ಮಧುಗಿರಿಯಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನನ್ನನ್ನು ಸಚಿವ ಸ್ಥಾನದಿಂದ ಇಳಿಸಲು ಮೂವರು ದೆಹಲಿಯಲ್ಲಿ ವ್ಯವಸ್ಥಿತವಾಗಿ ಪಿತೂರಿ ಮಾಡಿದ್ದಾರೆ. ಪಿತೂರಿ ವಿದ್ಯೆ ನನಗೂ ಗೊತ್ತಿದೆ. ಈ ಸಂದರ್ಭದಲ್ಲಿ ಅದನ್ನು ಬಳಸುವುದಿಲ್ಲ. ಮುಂದೆ ಕಾಲ ಬರುತ್ತದೆ ಎಂದು ಮಾರ್ಮಿಕವಾಗಿ ನುಡಿದರು.

ದೇವರಾಜ ಅರಸು, ವೀರಪ್ಪ ಮೊಯ್ಲಿ ಅವರಂತಹ ಮಹಾನ್ ನಾಯಕರನ್ನೇ ಅಧಿಕಾರದಿಂದ ಕೆಳಗೆ ಇಳಿಸಲಾಗಿದೆ. ಅವರ ಮುಂದೆ ನನ್ನ ಅಧಿಕಾರ ದೊಡ್ಡದಲ್ಲ. ಬಡವರ ಪರವಾದ ಆಡಳಿತ ನೀಡಿದ ದೇವರಾಜ ಅರಸು ಸರ್ಕಾರ ವಜಾ ಮಾಡಲಾಯಿತು. ಬಡವರ ಮಕ್ಕಳಿಗೆ ಅನುಕೂಲ ಆಗಲೆಂದು ಸಿಇಟಿ ಜಾರಿಗೆ ತಂದ ವೀರಪ್ಪ ಮೊಯ್ಲಿ ಅವರನ್ನು ಅಧಿಕಾರದಿಂದ ಕೆಳಗೆ ಇಳಿಸಲಾ ಯಿತು ಎಂದರು.



ಸಚಿವ ಸ್ಥಾನ ಹೋಗಿರುವುದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಆಕ್ಷೇಪಿಸುವುದು ಸರಿಯಲ್ಲ. ಅಧಿಕಾರ ಕಳೆದುಕೊಳ್ಳಲು ಹಲವು ಕಾರಣಗಳಿದ್ದು, ಸಮಯ ಬಂದಾಗ ಹೇಳುತ್ತೇ ನೆಂದರು.

### ಮುಖ್ಯಮಂತ್ರಿ ಮಾತು ಹೈಕಮಾಂಡ್ ಕೇಳಲಿಲ್ಲ

**ಬೆಂಗಳೂರು:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನನ್ನನ್ನು ಸಚಿವ ಸಂಪುಟದಲ್ಲಿ ಉಳಿಸಿಕೊಳ್ಳುವ ಸಲುವಾಗಿ ಹೈಕಮಾಂಡ್ ನಾಯಕರ ಮನವೊಲಿಸಲು ಸಾಕಷ್ಟು ಪ್ರಯತ್ನ ಪಟ್ಟಿದ್ದಾರೆ ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಅವರು ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸಿದ್ದರಾಮಯ್ಯ ಅವರ ಮಾತನ್ನು ಹೈಕಮಾಂಡ್ ಕೇಳಲೇ ಇಲ್ಲ. ನನ್ನ ವಿರುದ್ಧ ದೊಡ್ಡ ಷಡ್ಯಂತ್ರ ಮಾಡಲಾಗಿದೆ ಎಂದರು.

### ರಾಜಣ್ಣಗೆ ಬಿಜೆಪಿ ಆಹ್ವಾನ

ಸಂಪುಟದಿಂದ ವಜಾಗೊಂಡಿರುವ ಮಾಜಿ ಸಚಿವ ಕೆ.ಎನ್.ರಾಜಣ್ಣ ಪಕ್ಷ ಸೇರುವಂತೆ ಬಿಜೆಪಿ ಹಿರಿಯ ನಾಯಕ ಬಿ.ಶ್ರೀರಾಮುಲು ಅವರು ಆಹ್ವಾನಿಸಿದ್ದಾರೆ.

ಎಸ್ಟಿ, ವಾಲ್ಮೀಕಿ ಮತ್ತು ಅದರ ನಾಯಕರು ನಿಮ್ಮೊಂದಿಗಿದ್ದಾರೆ, ಬಿಜೆಪಿಗೆ ಬನ್ನಿ. ನೀವು ಮತ್ತು ನಿಮ್ಮ ಮಗ ಬಿಜೆಪಿಗೆ ಬನ್ನಿ. ನಾನು, ಶಿವನಗೌಡ ನಾಯಕ, ರಾಜುಗೌಡ ಮತ್ತು ನಮ್ಮ ಎಲ್ಲಾ ನಾಯಕರು ನಿಮ್ಮನ್ನು ಪಕ್ಷಕ್ಕೆ ಸ್ವಾಗತಿಸುತ್ತೇವೆ ಮತ್ತು ಪಕ್ಷದಲ್ಲಿ ನಮಗಿಂತ ಹೆಚ್ಚಿನ ಗೌರವ ನೀಡಲಿದೆ ಎಂದು ಶ್ರೀರಾಮುಲು ಹೇಳಿದರು.

ಕಾಂಗ್ರೆಸ್ ಹೈಕಮಾಂಡ್ ನಿರ್ದೇಶನದ ಮೇರೆಗೆ ಸಹಕಾರಿ ಸಚಿವರಾಗಿದ್ದ ರಾಜಣ್ಣ ಅವರನ್ನು ಸೋಮವಾರ ಸಂಪುಟದಿಂದ ತೆಗೆದುಹಾಕಲಾಗಿದೆ. 2024ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರ ಮತ ಕಳ್ಳತನ ಆರೋಪಗಳ ಕುರಿತು ಅವರು ಇತ್ತೀಚೆಗೆ ಮಾಡಿದ ಹೇಳಿಕೆಯಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

## ಸ್ವಾತಂತ್ರ್ಯ ಸ್ವಾಭಿಮಾನದ ಸಂಕೇತ



• ಪ್ರಜೋದಯ ವರದಿ

**ಹಾಸನ:** ಸ್ವಾತಂತ್ರ್ಯವನ್ನು ಸ್ವೇಚ್ಛಾಚಾರಕ್ಕಲ್ಲದೆ ಸ್ವಾಭಿಮಾನದ ಬದುಕಿಗೆ ಬಳಸಬೇಕೆಂದು ಜಿಲ್ಲಾ ವಿಶ್ವಕರ್ಮ ಸಮಾಜದ ಅಧ್ಯಕ್ಷ ಹೆಚ್.ವಿ.ಹರೀಶ್ ಅವರು ತಿಳಿಸಿದರು.

ನಗರದ ಶ್ರೀ ಕ್ಷೇತ್ರ ಕಾಳಿಕಾಂಬ ಕಮಠೇಶ್ವರ ದೇವಾಲಯದಲ್ಲಿ ವಿಶ್ವಕರ್ಮ ಸಂಘ-ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮಾತನಾಡಿದ ಅವರು, ಪರಕೀಯರ ಸಂಕೋಲೆಯಿಂದ ಮುಕ್ತರಾಗಲು ಅನೇಕ ಹೋರಾಟಗಾರರ ಶ್ರಮ, ತ್ಯಾಗ, ಬಲಿ ದಾನಗಳು ಸ್ವಾತಂತ್ರ ಬರಲು ಕಾರಣವಾಗಿದೆ. ನಾವೆಲ್ಲ ದೇಶಾಭಿಮಾನ ಬೆಳೆಸಿಕೊಂಡು ಸಮಾಜಕ್ಕೆ ಕಿಂಚಿತ್ತು ಒಳಿತು ಮಾಡಿ ದೇಶದ ಐಕ್ಯತೆಗಾಗಿ ಸಮರ್ಪಣಾ ಮನೋಭಾವದಿಂದ ದುಡಿಯ ಬೇಕು ಎಂದರು.

ವಿಶ್ವರೂಪ ಸೊಸೈಟಿ ಅಧ್ಯಕ್ಷ ಹೆಚ್.ಎಸ್.ಶಿವಶಂಕರ್ ಅವರು ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು. ರಾಜ್ಯ ಉಪಾಧ್ಯಕ್ಷ ಜಿ.ಕುಮಾರ್, ತಾಲ್ಲೂಕು ಉಪಾಧ್ಯಕ್ಷ ಎ. ಬ್ಯಾಟರಂಗಾ ಚಾರ್, ಖಜಾಂಚಿ ಬಿ.ಲೋಕೇಶ್ ಮಾತನಾಡಿದರು. ತಾಲ್ಲೂಕು ವಿಶ್ವಕರ್ಮ ಸಮಾಜದ ಅಧ್ಯಕ್ಷ ಹೆಚ್.ಬಿ.ಕುಮಾರಾಚಾರ್ ಅಧ್ಯಕ್ಷತೆ ವಹಿಸಿದ್ದರು.

ಯುವಕ ಸಮಾಜದ ಅಧ್ಯಕ್ಷ ಹೆಚ್.ಕೆ.ಸತೀಶ್, ಸಂಘಟನಾ ಕಾರ್ಯದರ್ಶಿ ಆರ್.ನವೀನ್, ಮಹಿಳಾ ಮಂಡಳಿ ಅಧ್ಯಕ್ಷರಾದ ಅನಿಲ ಪದ್ಮನಾಭ್, ಕಾರ್ಯದರ್ಶಿ ಆಶಾ ವಿಶ್ವನಾಥ್, ಜಿ.ಆರ್.ತಿಮ್ಮಚಾರ್, ಜಿ.ವಿ.ಶ್ರೀನಿವಾಸ್ ಮತ್ತು ದಕ್ಷಿಣ ಕನ್ನಡ ಮಹಿಳಾ ಘಟಕದ ಅಧ್ಯಕ್ಷೆ ಶಕುಂತಲಾ ಹಾಜರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019